ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ

### ಎಂ.ಎ. (ಪ್ರಥಮ)

# ಚೀನಾ – ಜಪಾನ್ ಇತಿಹಾಸ ಹಕ್ಕೊತ್ತಾಯ ಮಿತ್ರ ಆಳ್ವಿಕೆ ಬಾಕ್ಸರ್ ದಂಗೆ ಸನ್‌ಯಾತ್ ಸೇನ್ ಮೆಯ್ಜಿ ಪುನರ್ ಸ್ಥಾಪನೆ ಮಂಚೂಕೊ

ಕೋರ್ಸ್ – 5

ಬ್ಲಾಕ್ – 1

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

**Higher Education To Everyone Everywhere**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ - 5

ಬ್ಲಾಕ್
# 1


| | |
|---|---|
| ಘಟಕ - 126<br>ಚೀನಾ - ಐತಿಹಾಸಿಕ ಹಿನ್ನೆಲೆ | 1-10 |
| ಘಟಕ - 127<br>ಮಂಚುಗಳ ಆಳ್ವಿಕೆಯಲ್ಲಿ ಚೀನಾ | 11-18 |
| ಘಟಕ - 128<br>ಚೀನಾ ಮತ್ತು ಪಶ್ಚಿಮ ರಾಷ್ಟ್ರಗಳು (1839 ರವರೆಗೆ) | 19-26 |
| ಘಟಕ - 129<br>ಪ್ರಥಮ ಮತ್ತು ದ್ವಿತೀಯ ಅಫೀಮು ಯುದ್ಧಗಳು | 27-36 |
| ಘಟಕ - 130<br>ತೈಪಿಂಗ್ ದಂಗೆ | 37-44 |

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ


**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡಾ. ಎಂ. ಸುಶೀಲ ಅರಸ್
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ. ಮೈಸೂರು

ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

*ವಿಷಯ ಸಂಯೋಜಕರು*


## ಪಠ್ಯಕ್ರಮ ನಿರೂಪಕರು


*ಮೂಲ* *ಪ್ರೊ. ಎಸ್. ಮೀರ್ ಸಮೀವುಲ್ಲ*
ಭೋಗಾದಿ ಎರಡನೇ ಹಂತ,
ಮೈಸೂರು

*ಅನುವಾದಕರು* *ಪ್ರೊ. ಬಿ. ಪರಮೇಶ್ವರ*
ಇತಿಹಾಸ ವಿಭಾಗ
ಜೆ.ಎಸ್.ಎಸ್. ಕಾಲೇಜು,
ಗುಂಡ್ಲುಪೇಟೆ


**ಘಟಕಗಳು 126 ರಿಂದ 130**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. **2013**

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ ಕುಲಸಚಿವರು (ಆಡಳಿತ)

# ಕೋರ್ಸ್ ೮ - V

## ಬ್ಲಾಕ್ - 1

### ಪೀಠಿಕೆ

ಈ ಬ್ಲಾಕ್‌ನಲ್ಲಿ ನೀವು ಚೀನಾ, ಜಪಾನ್ ಮತ್ತು ಕೊರಿಯವನ್ನೊಳಗೊಂಡ ಪೂರ್ವ ಏಷ್ಯಾದ ಒಂದು ವಿಸ್ತಾರವಾದ ಪ್ರದೇಶದ ಬಗೆಗೆ ಅಧ್ಯಯನ ಮಾಡಲಿದ್ದೀರಿ. ವಿಸ್ತಾರವಾದ ಚೀನಾ ಸಾಮ್ರಾಜ್ಯ 1644 ರಲ್ಲಿ ಮಂಚುಗಳಿಂದ ಸ್ಥಾಪಿಸಲ್ಪಟ್ಟಿತು ಮತ್ತು ಮಂಚುಗಳು 1912 ರಲ್ಲಿ ಗಣರಾಜ್ಯ ಸ್ಥಾಪನೆಯಾಗುವವರೆಗೂ ಚೀನಾವನ್ನು ಆಳಿದರು.

ಘಟಕ 126 ಚೀನಾದ ಭೌಗೋಳಿಕ ಹಿನ್ನೆಲೆ ಮತ್ತು ಅದರ ಪ್ರಾರಂಭದ ಇತಿಹಾಸಕ್ಕೆ ಸಂಬಂಧಿಸಿದೆ. ಪ್ರಾಚೀನ ಜಗತ್ತಿಗೆ ಚೀನಾ ಸಾಕಷ್ಟು ಪರಿಚಿತವಾದ ದೇಶವಾಗಿತ್ತು. ಪ್ರಾಚೀನ ಚೀನಾ ಮತ್ತು ಭಾರತ ಹಿಂದೆ ವಿಶ್ವ ನಾಗರೀಕತೆಯನ್ನು ಹರಡುವಲ್ಲಿ ಜೊತೆಯಾಗಿದ್ದವು. ಎರಡೂ ದೇಶಗಳು ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿವೆ ಮತ್ತು ಅದರ ಬಗೆಗೆ ಎರಡೂ ಹೆಮ್ಮೆ ಪಡಬಹುದಾಗಿದೆ. ಜೊತೆಗೆ ಈ ಘಟಕದಲ್ಲಿ ಪ್ರಪಂಚದ ದೊಡ್ಡ ದೇಶಗಳಲ್ಲೊಂದಾದ ಚೀನಾದ ವಿಸ್ತಾರದ ಬಗೆಗೆ ಚರ್ಚಿಸಲಾಗಿದೆ. ಚೀನಾ ಪಾಳೆಯಗಾರರ ನಿಯಂತ್ರಣದಲ್ಲಿದ್ದಿತೆಂದು ಭಾವಿಸಲಾಗಿದೆ. ಪ್ರತಿಯೊಬ್ಬ ಪಾಳೆಯಗಾರನಿಗೂ ತನ್ನದೆ ಪ್ರದೇಶವಿತ್ತು ಮತ್ತು ಅವರುಗಳ ನಡುವೆ ಹೋರಾಟ ಸಾಮಾನ್ಯವಾಗಿತ್ತು.

ಘಟಕ 127 ರಲ್ಲಿ 1644 ರಿಂದ 1912 ರವರೆಗೆ ಚೀನಾದಲ್ಲಿ ಮಂಚುಗಳ ಆಡಳಿತವನ್ನು ಕುರಿತು ಚರ್ಚಿಸಲಾಗಿದೆ. ಈ ರಾಜವಂಶ ಅಧಿಕಾರಕ್ಕೆ ಬರುವುದರೊಂದಿಗೆ ನಾವು ಚೀನಾದ ಇತಿಹಾಸದ ಆಧುನಿಕ ಯುಗವನ್ನು ಪ್ರವೇಶಿಸುತ್ತೇವೆ. ಈ ಅವಧಿಯಲ್ಲಿ ಅಫೀಮು ಯುದ್ಧಗಳು ನಡೆದವು ಮತ್ತು ತೈಪಿಂಗ್ ದಂಗೆ ಸಂಭವಿಸಿತು. ಇದೇ ಅವಧಿಯಲ್ಲಿ ಐರೋಪ್ಯರು ಚೀನಾದ ವಿಷಯದಲ್ಲಿ ಹೆಚ್ಚು ಹೆಚ್ಚು ಆಸಕ್ತಿ ತೋರಲಾರಂಭಿಸಿದರು. ಜಪಾನ್ ಕೂಡ ಚೀನಾದಲ್ಲಿ ತನ್ನ ಪ್ರಭಾವ ಸ್ಥಾಪಿಸಿಕೊಳ್ಳಲು ಯತ್ನಿಸಿತು. ಕ್ರೈಸ್ತ ಧರ್ಮ ಪ್ರಚಾರಕರು ಚೀನಾದಲ್ಲಿ ಕ್ರೈಸ್ತ ಧರ್ಮ ಪ್ರಚಾರ ಕಾರ್ಯದಲ್ಲಿ ತೊಡಗಿದರು. ಈ ಕಾಲದಲ್ಲಿ ಚೀನಾ ಸಾಮ್ರಾಜ್ಯದ ವಿಸ್ತಾರಣೆಯೂ ನಡೆಯಿತು.

ಘಟಕ 128, 15ನೇ ಶತಮಾನದ ಆರಂಭದಲ್ಲಿ ಐರೋಪ್ಯರು ಚೀನಾದ ಬಗೆಗೆ ಆಸಕ್ತಿ ತೋರಲಾರಂಭಿಸಿದ್ದನ್ನು ವಿವರಿಸುತ್ತದೆ. ಬಹುತೇಕ ಐರೋಪ್ಯ ದೇಶಗಳಿಗೆ ವಾಣಿಜ್ಯ ಹಿತಾಸಕ್ತಿಯ ಜೊತೆಗೆ ವಸಾಹತು ಸ್ಥಾಪಿಸುವ ಬಗೆಗೂ ಆಸಕ್ತಿಯಿತ್ತು. ಅದರಿಂದಾಗಿಯೇ ಅವುಗಳಿಗೆ ಚೀನಾದಲ್ಲಿ ಸ್ವಾಗತ ದೊರೆಯಲಿಲ್ಲ. ಈ ದೇಶಗಳು ಅನುಕೂಲಕರ ವ್ಯಾಪಾರ ಸಮತೋಲನ ಹೊಂದಲು, ವಾಣಿಜ್ಯ ಮತ್ತು ರಾಜಕೀಯ ಒಪ್ಪಂದಗಳನ್ನು ಮಾಡಿಕೊಳ್ಳಲು ಆಸಕ್ತವಾಗಿದ್ದವು. ಅದು ಪರಸ್ಪರ ಘರ್ಷಣೆಗಳಿಗೆ ಕಾರಣವಾಯಿತು. ಚೀನೀಯರ ವಿರೋಧವಿದ್ದಾಗ್ಯೂ ಚೀನಾದ ಒಳನಾಡಿಗೆ ಪ್ರವೇಶಿಸುವ ಅವುಗಳ ಅಪೇಕ್ಷೆ ಪ್ರಸಿದ್ಧವಾದ ಅಫೀಮು ಯುದ್ಧಗಳು ಮತ್ತು ತೈಪಿಂಗ್ ದಂಗೆಗೆ ಕಾರಣವಾಯಿತು.

129 ನೇ ಘಟಕದಲ್ಲಿ ನಾವು ಚೀನಾ ಹೊರ ಪ್ರಪಂಚಕ್ಕೆ ತನ್ನನ್ನು ತೆರೆದುಕೊಂಡಿದ್ದರ ಪರಿಣಾಮಗಳ ಬಗೆಗೆ ಪರಿಶೀಲಿಸುತ್ತೇವೆ. 1840 ಕ್ಕೆ ಮುಂಚೆ ಚೀನಾ ಹೊರ ಪ್ರಪಂಚದೊಂದಿಗೆ ಯಾವುದೇ ಸಂಪರ್ಕ ಹೊಂದದೆ ಪ್ರತ್ಯೇಕವಾಗಿತ್ತು. ಕೇವಲ ಕ್ಯಾಂಟನ್ ನಗರದಲ್ಲಿ ಮಾತ್ರ ನಿಯಮಿತವಾದ ವಿದೇಶ ವ್ಯಾಪಾರಕ್ಕೆ ಅವಕಾಶವಿತ್ತು. ಚೀನಾದ ವಿಶಾಲ ಮಾರುಕಟ್ಟೆಯನ್ನು ಪ್ರವೇಶಿಸಲು ಬಯಸಿದ್ದ ಪಾಶ್ಚಾತ್ಯ ದೇಶಗಳು ಅಫೀಮು ಪ್ರಕರಣವನ್ನು ಬಳಸಿಕೊಂಡು ಅಫೀಮು ಯುದ್ಧ ಆರಂಭಿಸಿದವು. ಸೋತ ಚೀನಾ ನಾನ್‌ಕಿಂಗ್ ಒಪ್ಪಂದಕ್ಕೆ ಸಹಿಹಾಕಿತು. ಅದರ ಪ್ರಕಾರ ಚೀನಾ ಪಾಶ್ಚಾತ್ಯ ವರ್ತಕರಿಗೆ ತನ್ನ ಬಂದರುಗಳು ಮತ್ತು ಮಾರುಕಟ್ಟೆಗಳನ್ನು ತೆರೆಯಬೇಕಾಯಿತು. ಪ್ರಮುಖ ನಗರಗಳಲ್ಲಿ ರಿಯಾಯಿತಿಗಳನ್ನು ನೀಡಿತು ಮತ್ತು ಚೀನಾ ಅರೆ-ಊಳಿಗಮಾನ್ಯ ಮತ್ತು ಅರೆ-ವಸಾಹತು

ದೇಶವಾಯಿತು. ಅಫೀಮು ಯುದ್ಧ ಚೀನಾವನ್ನು ಬಲವಂತವಾಗಿ ಮತ್ತು ತಕ್ಷಣ ಹೊರ ಪ್ರಪಂಚಕ್ಕೆ ತೆರೆದುಕೊಳ್ಳುವಂತೆ ಮಾಡಿತು. ಈ ಹಠಾತ್ ಬೆಳವಣಿಗೆಯ ಪರಿಣಾಮಗಳು ಆಳವಾಗಿದ್ದವು ಹಾಗೂ ದೀರ್ಘ ಕಾಲಿಕವಾಗಿದ್ದವು.

ಕೊನೆಯ ಘಟಕ 130 ರಲ್ಲಿ 1850 ರಲ್ಲಿ ಆರಂಭವಾಗಿ 1864 ರವರೆಗೂ ಮುಂದುವರಿದ ತೈಪಿಂಗ್ ದಂಗೆಯ ಕೆಲವು ಪ್ರಮುಖ ಮಗ್ಗಲುಗಳನ್ನು ಚರ್ಚಿಸಲಾಗಿದೆ. ಅದು ಮಂಚು ವಂಶವನ್ನು ಪದಚ್ಯುತಗೊಳಿಸಲು ಮತ್ತು ಅದರ ಸ್ಥಾನದಲ್ಲಿ ಸ್ಥಳೀಯ ಸರ್ಕಾರವನ್ನು ಸ್ಥಾಪಿಸಲು ಚೀನಾದ ಜನತೆ ನಡೆಸಿದ ಪ್ರಥಮ ಪ್ರಯತ್ನಗಳಲ್ಲೊಂದಾಗಿತ್ತು. ಅದು ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಪ್ರೇರಿತ ದಂಗೆಯಾಗಿತ್ತು. ಈ ದಂಗೆ ಪ್ರಾರಂಭದಲ್ಲಿ ಯಶಸ್ಸುಗಳಿಸಿತು. ವಿದೇಶಿಯರು ಮಧ್ಯ ಪ್ರವೇಶಿಸದಿದ್ದರೆ ಈ ಯಶಸ್ಸು ಮುಂದುವರಿಯುತ್ತಿತ್ತು.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 126

# ಚೀನಾ - ಐತಿಹಾಸಿಕ ಹಿನ್ನೆಲೆ

*ರಚನೆ*


126.0 ಉದ್ದೇಶಗಳು

126.1 ಪೀಠಿಕೆ

126.2 ಚೀನಾದ ಪ್ರಾಕೃತಿಕ ಲಕ್ಷಣಗಳು

126.3 ಮಂಚು ಪೂರ್ವ ಯುಗದ ರಾಜವಂಶಗಳು

126.4 ಸಾಂಸ್ಕೃತಿಕ ಪರಂಪರೆ

126.5 ಚೀನೀಯರ ಧರ್ಮ ಮತ್ತು ತತ್ವಜ್ಞಾನಿಗಳು

126.6 ಸಾಹಿತ್ಯ ಮತ್ತು ಶಿಕ್ಷಣ

126.7 ಕುಶಲ ಕಲೆಗಳು ಮತ್ತು ವಿಜ್ಞಾನ

126.8 ಘಟಕದ ಸಾರಾಂಶ

126.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಉತ್ತರಗಳು

126.10 ಪರಾಮರ್ಶನ ಗ್ರಂಥಗಳು

## 126.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನೀವು ಈ ಕೆಳಗಿನ ವಿಷಯಗಳನ್ನು ಅರ್ಥಮಾಡಿಕೊಳ್ಳುವಿರಿ.

* ಚೀನಾದ ಚಾರಿತ್ರಿಕ ಹಿನ್ನೆಲೆ
* ಚೀನಾದ ಭೌಗೋಳಿಕ ಲಕ್ಷಣಗಳು
* ಹಲವು ರಾಜವಂಶಗಳು ಆಳಿದ ಚೀನಾದ ಸುಧೀರ್ಘ ಇತಿಹಾಸ
* ಆಶ್ಚರ್ಯಕರ ರೀತಿಯಲ್ಲಿ ಸ್ಥಿರತೆಯ ಲಕ್ಷಣವನ್ನು ಪ್ರದರ್ಶಿಸಿದ ಚೀನೀಯರ ಬದುಕು.
* ಚೀನಾದ ಪ್ರಾಚೀನ ಧರ್ಮ ಮತ್ತು ತತ್ವಜ್ಞಾನಿಗಳ ಪಾತ್ರ
* ಸಾಹಿತ್ಯ, ಶಿಕ್ಷಣ, ಕುಶಲಕಲೆಗಳು ಮತ್ತು ವಿಜ್ಞಾನದ ಪ್ರಗತಿ

## 126.1 ಪೀಠಿಕೆ

ಪ್ರಾಚೀನ ಜಗತ್ತಿಗೆ ಚೀನಾ ಪರಿಚಿತವಾದ ದೇಶವಾಗಿತ್ತು. ಚೀನಾ ಏಷ್ಯಾದಲ್ಲೇ ಅತಿ ದೊಡ್ಡ ಹಾಗೂ ಹೆಚ್ಚು ಜನಸಂಖ್ಯೆಯುಳ್ಳ ದೇಶವಾಗಿದೆ. ಅದು ಅತ್ಯಂತ ಪ್ರಾಚೀನ ಮತ್ತು ಸುದೀರ್ಘ ನಾಗರಿಕತೆಯನ್ನು ಹೊಂದಿದೆ. ಜಾನ್ ಗುಂಥರ್ ಅವರ ಪ್ರಕಾರ "ಪ್ರಾಚೀನ ಗ್ರೀಸ್ ಯುವಾವಸ್ಥೆಯಲ್ಲಿದ್ದಾಗ ಚೀನಾ ವೃದ್ಧಾಪ್ಯದಲ್ಲಿತ್ತು, ಯುರೋಪ್ ಮಧ್ಯಯುಗದ ವಧಾಸ್ಥಾನವಾಗಿದ್ದಾಗ ಚೀನಾ ಭವ್ಯವಾದ, ಪರಿಪಕ್ವವಾದ ಪ್ರಗತಿ ಸಾಧಿಸಿತ್ತು. ಅಲೆಗ್ಸಾಂಡರ್ ಅಥವಾ ಸೀಜರ್‌ಗಿಂತ ಮೊದಲೇ ಚೀನಾ ಕನ್‌ಫ್ಯೂಷಿಯಸ್‌ನಂತಹ ಶ್ರೇಷ್ಠ ತತ್ವಜ್ಞಾನಿಗಳನ್ನು ಸೃಷ್ಟಿಸಿತ್ತು. ಆದರೆ ಪಶ್ಚಿಮದಲ್ಲಿ ಹಲವು ಬದಲಾವಣೆಗಳಾಗುತ್ತಿದ್ದಾಗ ಚೀನಾ ಮಾತ್ರ ಹಾಗೆಯೇ ಇತ್ತು". 19ನೇ ಶತಮಾನದವರೆಗೂ ಚೀನಾ ಮೊದಲಿನಂತೆಯೇ ಇತ್ತು. ಭಾರತದ ಈಶಾನ್ಯ ಭಾಗದಲ್ಲಿ ಹಿಮಾಲಯದಾಚೆಯಲ್ಲಿರುವ ಚೀನಾ ತನ್ನದೇ ಒಂದು ಗಮನಾರ್ಹವಾದ ನಾಗರಿಕತೆಯನ್ನು ಸೃಷ್ಟಿಸಿತು. ಎರಡು ನದಿ ಕಣಿವೆಗಳಾದ, ಮಧ್ಯಚೀನಾದ ಯಾಂಗ್ಸಿ-ಕಿಯಾಂಗ್ ಮತ್ತು ಉತ್ತರ ಚೀನಾದ ಹ್ಯಾಂಗ್-ಹೊ ಅಥವಾ ಹಳದಿ ನದಿ ಕಣಿವೆಗಳು ವೈವಿಧ್ಯಮಯವಾದ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿವೆ. ಚೀನಾ ವಿಶಾಲವಾದ ಸಾಗರ, ಎತ್ತರವಾದ ಪರ್ವತಗಳು ಮತ್ತು ವಿಸ್ತಾರವಾದ ಮರಳುಗಾಡಿನಿಂದ ಸುತ್ತುವರಿಯಲ್ಪಟ್ಟಿದೆ. ಅದರಿಂದಾಗಿಯೇ ಚೀನೀಯರು ತಮ್ಮ ದೇಶದ ಹೊರಗೆ ಪ್ರಯಾಣ ಮಾಡುವುದು ಬಹಳ ಕಡಿಮೆ. ಈ ಪ್ರತ್ಯೇಕತೆ ಅವರಿಗೆ ತಮ್ಮದೇ ಸಂಸ್ಕೃತಿಯನ್ನು ಬೆಳೆಸಿಕೊಳ್ಳಲು ಕಾರಣವಾಯಿತು.

ಚೀನಾದಲ್ಲಿ ಹಲವಾರು ರಾಜವಂಶಗಳು ಆಡಳಿತ ನಡೆಸಿವೆ. ಕ್ರಿ.ಶ. 1644 ರಲ್ಲಿ ಮಂಚು ವಂಶ ಅಧಿಕಾರಕ್ಕೆ ಬಂದಿತು ಮತ್ತು 1912 ರವರೆಗೂ ಅದು ಅಧಿಕಾರದಲ್ಲಿತ್ತು. ನಂತರದ ದಿನಗಳಲ್ಲಿ ಕ್ರಾಂತಿಗಳು, ದಂಗೆಗಳು ಸಂಭವಿಸಿ ಅಂತಿಮವಾಗಿ 1949 ರಲ್ಲಿ ಚೀನಾದಲ್ಲಿ ಕಮ್ಯುನಿಸ್ಟ ಸರ್ಕಾರ ಸ್ಥಾಪನೆಯಾಯಿತು.

ಇಂದು ಚೀನಾ ವಿಶ್ವದ ಪ್ರಬಲ ರಾಷ್ಟ್ರಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಅದು ವಿಶ್ವ ಸಂಸ್ಥೆಯ ಖಾಯಂ ಸದಸ್ಯತ್ವ ಪಡೆದುಕೊಂಡ ನಂತರ ವಿಶ್ವ ರಾಜಕೀಯದಲ್ಲಿ ಅದರ ಸ್ಥಾನ ಮತ್ತು ಘನತೆ ಸಾಕಷ್ಟು ಹೆಚ್ಚಿದೆ. ಈಗ ಚೀನಾ ಒಂದು ಪರಮಾಣು ಶಕ್ತಿ ಹೊಂದಿರುವ ದೇಶವಾಗಿದೆ ಮತ್ತು ಅಂತರಿಕ್ಷ ತಂತ್ರಜ್ಞಾನದಲ್ಲಿ ಅಪಾರ ಪ್ರಗತಿ ಸಾಧಿಸಿದೆ.

## 126.2 ಚೀನಾದ ಪ್ರಾಕೃತಿಕ ಲಕ್ಷಣಗಳು

ಚೀನಾ ಪ್ರಪಂಚದ ದೊಡ್ಡ ದೇಶಗಳಲ್ಲೊಂದಾಗಿದೆ. ಅದು 9,736,000 ಚದರ ಮೈಲಿಗಳು ವಿಸ್ತಾರವಾಗಿದೆ. ಜನಸಂಖ್ಯೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. 1000 ದಶಲಕ್ಷ ಚೀನೀಯರು ಏಷ್ಯಾದ ಜನಸಂಖ್ಯೆಯ 2/3ಭಾಗದಷ್ಟು ಮತ್ತು ವಿಶ್ವದ ಜನಸಂಖ್ಯೆಯ ಶೇ. 14 ಭಾಗದಷ್ಟಿದ್ದಾರೆ. ಚೀನಾದ ಮೂರು ದೊಡ್ಡ ನದಿಗಳು ಯಾವುವೆಂದರೆ,

1. ಉತ್ತರದ ಹ್ಯಾಂಗ್-ಹೋ ಅಥವಾ ಹಳದಿ ನದಿ

2. ಮಧ್ಯಚೀನಾದ ಯಾಂಗ್ಸಿ-ಕಿಯಾಂಗ್ ಮತ್ತು

3. ದಕ್ಷಿಣದ ಸಿಕಿಯಾಂಗ್

ಈ ನದಿ ವ್ಯವಸ್ಥೆಗಳು ಬಹಳ ಕಾಲದವರೆಗೆ ಚೀನಾದ ನಾಗರಿಕತೆಯನ್ನು ಪೋಷಿಸಿದವು. ಫಲವತ್ತಾದ ಮೆಕ್ಕಲು ಮಣ್ಣು, ಹಿತಕರವಾದ ಹವಾಗುಣ, ಕೈಗಾರಿಕಾ ಪೂರ್ವ ಸಮಾಜಕ್ಕೆ ಹೇರಳವಾದ ಖನಿಜ ಸಂಪತ್ತು, ಪರ್ವತಗಳಂತಹ ಆಂತರಿಕ ಅಡೆತಡೆಗಳು ಇಲ್ಲದಿದ್ದುದು ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಏಕತೆಗೆ ಕಾರಣವಾಯಿತು. ಚೀನೀಯರ ಸಮಸ್ತ ಸಾಮರ್ಥ್ಯವನ್ನು ಹೀರಿಕೊಳ್ಳುವಷ್ಟು ಭೂಮಿ ವಿಶಾಲವಾಗಿತ್ತು. ಕೆಲವು ಆಂತರಿಕ ತಡೆಗಳಿದ್ದರೂ ಚೀನೀಯರ ಸಾಮರ್ಥ್ಯ ಮತ್ತು ಬುದ್ಧಿಶಕ್ತಿ ಅಸಾಧಾರಣ ರಾಜಕೀಯ ಮತ್ತು ಸಾಂಸ್ಕೃತಿಕ ಏಕತೆಯನ್ನು ಸಾಧಿಸುತ್ತಿತ್ತು. ಪ್ರಾಚೀನ ಚೀನಾ ಸಾಧಿಸಿದ್ದನ್ನು ಪಶ್ಚಿಮ ಯುರೋಪ್ ಸಾಧಿಸಲಾಗಲಿಲ್ಲ. ಪಶ್ಚಿಮ ಯುರೋಪ್ ಎಂದೂ ಸಾಂಸ್ಕೃತಿಕ ಸಮಗ್ರತೆ ಸಾಧಿಸಲಿಲ್ಲ ಮತ್ತು ಏಕಚಕ್ರಾಧಿಪತ್ಯಕೊಳಪಡಲಿಲ್ಲ.

ಮಂಚೂರಿಯ, ಮಂಗೋಲಿಯ, ಸಿಕಿಯಾಂಗ್ ಮತ್ತು ಟಿಬೆಟ್‌ಗಳು ಭಾರತ, ಮಧ್ಯ ಮತ್ತು ಪಶ್ಚಿಮ ಏಷ್ಯಾ ಹಾಗೂ ಯುರೋಪ್ ನಡುವೆ ಬೇಲಿಯನ್ನು ನಿರ್ಮಿಸಿವೆ. ಅದರಿಂದಾಗಿಯೇ ಇತ್ತೀಚಿನವರೆಗೂ ಚೀನಾ ಪ್ರತ್ಯೇಕವಾಗಿತ್ತು. ರೈಲು ಮಾರ್ಗಗಳು, ಉಗಿಹಡಗುಗಳು ಇತ್ತೀಚಿನ ದಿನಗಳಲ್ಲಿ ಈ ವಾಣಿಜ್ಯಕ್ಕೆ ತಡೆಯುಂಟುಮಾಡಿಲ್ಲ. ಆದರೆ ಅವುಗಳು ಪಶ್ಚಿಮದಿಂದ ಯಾವುದೇ ತೀವ್ರ ಸ್ವರೂಪದ ಸಶಸ್ತ್ರ ಧಾಳಿಯನ್ನು ಕಠಿಣಗೊಳಿಸಿವೆ.

ಮೇಲೆ ಹೆಸರಿಸಿದ ದೂರದ ಗಡಿಪ್ರದೇಶದ ಈ ಆಶ್ರಿತ ರಾಜ್ಯಗಳು, ಹೂಣರು, ಟರ್ಕರು, (ಆಗ್ನೇಯ) ಖೈತಾನ್ ಮತ್ತು ಚೀನಾ ಟಾರ್ಟರರು .(ಈಶಾನ್ಯ), ಮಂಗೋಲರು (ಉತ್ತರ) ಮತ್ತು ಮಂಚುಗಳು (ಈಶಾನ್ಯ) ಮೊದಲಾದವರು ಚೀನಾದ ಮೇಲೆ ನಡೆಸಿದ ದಾಳಿಗಳಿಗೆ ಮೂಲವಾದವು. ಈ ಕಾರಣದಿಂದ ಉತ್ತರದ ಶತ್ರುಗಳಿಂದ ಚೀನಾವನ್ನು ರಕ್ಷಿಸಲು ಚೀನೀಯರು ಉತ್ತರದಿಂದ ವಾಯುವ್ಯ ಭಾಗದವರೆಗೆ ಮಹಾಗೋಡೆಯನ್ನು ನಿರ್ಮಿಸುವತ್ತ ಗಮನ ಹರಿಸಬೇಕಾಯಿತು. ಅದು ಚರಿತ್ರೆಯ ಅತ್ಯಂತ ವಿಸ್ತಾರವಾದ ಗಡಿ ಕೋಟೆಯಾಗಿತ್ತು. ಕೆಲವು ಪ್ರಬಲರಾದ ಚಕ್ರವರ್ತಿಗಳು ದಾಳಿ ನಡೆಸಿ ಗಡಿ ಪ್ರದೇಶಗಳನ್ನು ವಶಪಡಿಸಿಕೊಂಡರು. ಚೀನಾಕ್ಕೆ ಸಮುದ್ರದ ಕಡೆಯಿಂದ ಯಾವುದೇ ಅಪಾಯವಿರಲಿಲ್ಲವಾದ್ದರಿಂದ ರಕ್ಷಣೆಯ ದೃಷ್ಟಿಯಿಂದ ನೌಕಾಪಡೆಯ ಅಗತ್ಯವಿರಲಿಲ್ಲ. ಅತ್ಯಂತ ದುರ್ಬಲ ನೌಕಾಪಡೆಯನ್ನು ಹೊಂದಿದ್ದ ಚೀನಾ ಸಮುದ್ರದ ಮೂಲಕ ನಡೆದ ಪಾಶ್ಚಾತ್ಯರ ದಾಳಿಗೆ ಸುಲಭವಾಗಿ ಬಲಿಯಾಯಿತು. ಅಂತೆಯೇ ಜಪಾನೀಯರು ಚೀನಾದ ಮೇಲೆ ದಾಳಿ ನಡೆಸಿದರು.

ಎತ್ತರದ ಪರ್ವತ ಶ್ರೇಣಿಗಳನ್ನು ಒಳಗೊಂಡಿದ್ದ ಈ ಗಡಿ ಪ್ರದೇಶಗಳು ಚೀನೀಯರಲ್ಲಿ ತಾವು ಶ್ರೇಷ್ಠರು ಎಂಬ ಭಾವನೆ ಬಲಗೊಳ್ಳಲು ಕಾರಣವಾದವು. ಈ ಪ್ರದೇಶ ಮತ್ತು ಚೀನಾದ ಸುತ್ತಲಿನ ಸಾಗರಗಳು ಚೀನೀಯರನ್ನು ತಮಗೆ ಸರಿಸಮಾನವಾದ ಸಂಸ್ಕೃತಿಯನ್ನು ಹೊಂದಿದ್ದ ಯಾವುದೇ ಜನರೊಂದಿಗೆ ಅಂತಿಮ ಸಂಪರ್ಕ ಹೊಂದದಂತೆ ತಡೆದವು. ಚೀನೀಯರಿಗಿಂತಲೂ ಕೆಳಮಟ್ಟದ ಸಂಸ್ಕೃತಿಯನ್ನು ಹೊಂದಿದ್ದ ಈ ಪ್ರದೇಶಗಳ ಜನರು ಕೆಲವೊಮ್ಮೆ ಅದನ್ನು ಅನುಸರಿಸಿದರು. ಭೌಗೋಳಿಕ ತಡೆಗಳಿಂದಾಗಿ ಹುಟ್ಟಿಕೊಂಡ ಈ ಶ್ರೇಷ್ಠತೆಯ ಭಾವನೆ ಒಂದು ವಿಧದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ಒಪ್ಪಿಕೊಳ್ಳುವಲ್ಲಿ ಆದ ವಿಳಂಬಕ್ಕೆ ಕಾರಣವಾಯಿತು. ಇದಕ್ಕೆ ವಿರುದ್ಧವಾಗಿ ಜಪಾನ್ ಆಧುನಿಕ ಕಾಲದ ಹೊಸ ಪರಿಸ್ಥಿತಿಗೆ ತಕ್ಷಣ ಹೊಂದಿಕೊಂಡಿತು. ಚೀನಾ ಇದನ್ನು ತಡವಾಗಿ ಅರಿತುಕೊಂಡಿತು ಮತ್ತು ಆ ವೇಳೆಗೆ ಹಳೆಯ ಸಂಸ್ಕೃತಿ ಪತನಗೊಂಡಿತ್ತು.

## 126.3 ಮಂಚು ಪೂರ್ವ ಕಾಲದ ರಾಜವಂಶಗಳು

ಚೀನಾದ ನಾಗರಿಕತೆ, ಅಸ್ತಿತ್ವದಲ್ಲಿರುವ ಪ್ರಾಚೀನ ನಾಗರಿಕತೆಗಳಲ್ಲೊಂದಾಗಿದೆ. 3500 ವರ್ಷಗಳ ಹಿಂದೆಯೇ ಚೀನಾದ ಸಾಮಾಜಿಕ ವ್ಯವಸ್ಥೆ 19 ನೇ ಶತಮಾನದ ಪ್ರಾರಂಭದಂತೆಯೇ ಸ್ಥಿರವಾಗಿತ್ತು. ಸಂತ ದೊರೆಗಳು ಎಂದು ಕರೆಯಲ್ಪಟ್ಟಿರುವವರೆಲ್ಲರೂ (ಕ್ರಿ.ಪೂ. 2800 ರಿಂದ 2205) ಕೃಷಿ, ಔಷಧ, ನದಿಗಳ ಸಂರಕ್ಷಣೆ ಮೊದಲಾದ ನಾಗರಿಕರಣದ ಬೆಳವಣಿಗೆಗಳಲ್ಲಿ ಪಾಲುದಾರರಾಗಿದ್ದರು. ನಂತರ ಅಧಿಕಾರಕ್ಕೆ ಬಂದಿದ್ದೇ ಏಷ್ಯಾ ರಾಜವಂಶ (ಕ್ರಿ.ಪೂ. 2205 ರಿಂದ 1818). ಅದರ ಬಗೆಗೆ ಹೆಚ್ಚಿನ ವಿವರಗಳು ತಿಳಿದು

ಬಂದಿಲ್ಲ. ಅನಂತರ ಬಂದ ಷಾಂಗ್ ರಾಜವಂಶದ (ಕ್ರಿ.ಪೂ. 1766 ರಿಂದ 1122) ಕಾಲದ ಕಂಚಿನ ಹೂದಾನಿಗಳಲ್ಲಿ ಅವರ ಕಲಾ ನೈಪುಣ್ಯತೆ ತಿಳಿಯುತ್ತದೆ. ಷಾಂಗ್ ವಂಶದ ನಂತರ ಚೌ ವಂಶ (ಕ್ರಿ.ಪೂ. 1122-249) ಅಧಿಕಾರಕ್ಕೆ ಬಂದಿತು. ಈ ಕಾಲದಲ್ಲಿ ಕನ್‌ಫ್ಯೂಷಿಯಸ್ ಜೀವಿಸಿದ್ದನು.

ಚೌವಂಶದ ನಂತರ ಚಿನ್ ವಂಶ ಅಧಿಕಾರಕ್ಕೆ ಬಂದಿತು (ಕ್ರಿ. ಪೂ. 249- 201) ಈ ವಂಶದಿಂದಲೇ ದೇಶಕ್ಕೆ ಚೀನಾ ಎಂಬ ಹೆಸರು ಬಂದಿತು. ಚಿನ್ ವಂಶದ ಆಡಳಿತ ಕಾಲದಲ್ಲಿ ಚೀನಾ ಇತಿಹಾಸದ ಮಹತ್ವದ ಕ್ರಾಂತಿಗಳು ಸಂಭವಿಸಿದವು. ಅವುಗಳನ್ನು 20 ನೇ ಶತಮಾನದಲ್ಲಿ ನಡೆಯುತ್ತಿರುವ ಕ್ರಾಂತಿಗಳಿಗೆ ಮಾತ್ರ ಹೋಲಿಸಬಹುದು. ಪ್ರಾರಂಭದ ಈ ಕ್ರಾಂತಿಗಳು ಪ್ರಾಚೀನ ಊಳಿಗ ಮಾನ್ಯ ವ್ಯವಸ್ಥೆಯನ್ನು ನಾಶ ಮಾಡಿ ಒಂದು ಕೇಂದ್ರೀಕೃತ ನೌಕರಶಾಹಿ ರಾಜ್ಯವನ್ನು ಸ್ಥಾಪಿಸುವ ಉದ್ದೇಶ ಹೊಂದಿದ್ದವು. ಈ ವಂಶ ಚೀನಾದ ಪ್ರಸಿದ್ಧ ಚಕ್ರವರ್ತಿಯನ್ನು ಸೃಷ್ಟಿಸಿತು. ಅವನೆ ಷಿ-ಹ್ವಾಂಗ್ ಟಿ. ಅವನನ್ನು ಚೀನಾದ ನೆಪೋಲಿಯನ್ ಎಂದು ಕರೆಯಲಾಗಿದೆ. ಈತನೇ ಚೀನಾದ ಪ್ರಥಮ ಚಕ್ರವರ್ತಿ. ಈತನು ಉತ್ತರದ ಅನಾಗರಿಕ ಜನರನ್ನು ದೂರವಿಡಲು ಮಹಾಗೋಡೆಯನ್ನು ನಿರ್ಮಿಸಿದನು. ಪುಸ್ತಕಗಳನ್ನು ಸುಟ್ಟು ಹಾಕಿದ್ದಕ್ಕಾಗಿ ಕೂಡ ಅವನನ್ನು ಸ್ಮರಿಸಲಾಗುತ್ತದೆ. ಈ ಕ್ರಮದ ಮೂಲಕ ಅವನು ಚೀನಾದ ಬೌದ್ಧಿಕ ಪ್ರಗತಿಯ ಪಥವನ್ನು ಸುಂಕುಚಿತಗೊಳಿಸುವ ಮತ್ತು ಅಂಕೆಯಲ್ಲಿಡುವ ವ್ಯರ್ಥ ಯತ್ನ ನಡೆಸಿದನು.

ಮುಂದಿನ ರಾಜವಂಶವೆ ಹ್ಯಾನ್ ವಂಶ (ಕ್ರಿ.ಪೂ. 202 ರಿಂದ ಕ್ರಿ.ಶ. 221) ಈ ಕಾಲವನ್ನು "ಚೀನಾದ ಚರಿತ್ರೆಯ ಸುವರ್ಣಯುಗ" ಎಂದು ಕರೆಯಲಾಗಿದೆ. ಚೀನೀಯರು ತಮ್ಮನ್ನು ಹ್ಯಾನ್‌ನ ಮಕ್ಕಳು ಎಂದು ಕರೆದುಕೊಳ್ಳಲು ಇಚ್ಛಿಸುತ್ತಾರೆ. ಏಕೆಂದರೆ ಹ್ಯಾನ್ ಆಡಳಿತ ಕಾಲ ಚೀನಾದ ಸುದೀರ್ಘ ಇತಿಹಾಸದಲ್ಲಿ ಶ್ರೀಮಂತ ಮತ್ತು ಅತ್ಯಂತ ಸ್ಫೂರ್ತಿದಾಯಕವಾದ ಕಾಲಗಳಲ್ಲೊಂದಾಗಿತ್ತು. ಹ್ಯಾನ್ ಅರಸರು ಸಾಮ್ರಾಜ್ಯದ ವಿಸ್ತರಣೆ, ಆಡಳಿತಾತ್ಮಕ ಏಕೀಕರಣ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಪ್ರಗತಿಗೆ ಕಾರಣರಾದರು. ಪ್ರಸಿದ್ಧ ಹ್ಯಾನ್ ದೊರೆ ವಾಟಿ (ಕ್ರಿ.ಪೂ. 120 -86) ಟಾರ್ಟರನ್ನು ಹೊರದೂಡಿ ದೇಶವನ್ನು ರಕ್ಷಿಸಿದನು. ಅವನು ಸ್ಪರ್ಧಾತ್ಮಕ ಪರೀಕ್ಷೆ ಆಧಾರಿತ ಆಡಳಿತ ಸೇವೆಯನ್ನು ಜಾರಿಗೆ ತಂದನು. ಊಳಿಗ ಮಾನ್ಯ ಪದ್ಧತಿ ರದ್ಧಾಯಿತು. ಚೀನಾದ ವರ್ತಕರು ಭಾರತ, ಪರ್ಷಿಯ, ಸಿರಿಯ ಮತ್ತು ಭೂಮಧ್ಯ ಸಮುದ್ರದ ದೇಶಗಳೊಂದಿಗೆ ವ್ಯಾಪಾರ ಸಂಪರ್ಕ ಸ್ಥಾಪಿಸಿಕೊಂಡರು. ಹ್ಯಾನ್ ಸಂಸ್ಕೃತಿ, ಸಾಹಿತ್ಯ ಮತ್ತು ಕಲೆಗಳು, ಸರ್ಕಾರ, ವಿಜ್ಞಾನ ಮತ್ತು ಕೈಗಾರಿಕೆ ಮೊದಲಾದ ಕ್ಷೇತ್ರಗಳಲ್ಲಿ ಚೀನಾದ ಬದುಕನ್ನು ಶ್ರೀಮಂತಗೊಳಿಸಿತು. ಈ ಕಾಲದಲ್ಲಿ ಪ್ರಾಚೀನ ಶ್ರೇಷ್ಠ ಸಾಹಿತ್ಯ ಕುರಿತು ಸಂಶೋಧನೆ ಆರಂಭವಾಯಿತು. ಆಂತರಿಕ ಮತ್ತು ವಿದೇಶ ವ್ಯಾಪಾರಕ್ಕೆ ರೇಷ್ಮೆ ಬಟ್ಟೆಯನ್ನು ಉತ್ಪಾದಿಸಲಾಯಿತು. ಕಾಗದವನ್ನು ಉತ್ಪಾದಿಸಲಾಯಿತು, ಸಾಹಿತ್ಯ ಸೃಷ್ಟಿಯಾಯಿತು. ಹ್ಯಾನ್ ಅರಸರು ಶಿಲ್ಪಕಲೆ ಮತ್ತು ಚಿತ್ರಕಲೆಗೆ ಪ್ರೋತ್ಸಾಹ ನೀಡಿದರು. ರೋಮ್ ಮತ್ತು ಮಧ್ಯ ಪ್ರಾಚ್ಯದಿಂದ ರಾಯಭಾರಿಗಳು ಹ್ಯಾನ್ ಆಸ್ಥಾನಕ್ಕೆ ಆಗಮಿಸಿದರು. ಕ್ರಿ.ಶ. 221 ರಲ್ಲಿ ಹ್ಯಾನ್ ವಂಶ ಪತನಗೊಂಡಿತು. ಫಲವಾಗಿ ಚೀನಾದಲ್ಲಿ ಗೊಂದಲ ಮತ್ತು ಅರಾಜಕತೆ ತಲೆದೋರಿತು.

ಹ್ಯಾನ್ ಆಳ್ವಿಕೆಯ ನಂತರ ಟ್ಯಾಂಗ್ ಮನೆತನ (ಕ್ರಿ.ಶ. 618-905)ಅಧಿಕಾರಕ್ಕೆ ಬಂದಿತು. ಈ ಕಾಲದಲ್ಲಿ ಚೀನಾ ಮತ್ತೆ ಅಭಿವೃದ್ಧಿ ಸಾಧಿಸಿತು. ಟ್ಯಾಂಗ್ ಚೀನಾವನ್ನು ಆದೇಶದ ಚರಿತ್ರೆಯ ಅತ್ಯಂತ ಮಹತ್ವದ ಕಾಲವೆಂದು ಪರಿಗಣಿಸಲಾಗಿದೆ. ಈ ಅವಧಿಯಲ್ಲಿ ಶಿಕ್ಷಣಕ್ಕೆ ಪ್ರೋತ್ಸಾಹ ದೊರೆಯಿತು. ಆಡಳಿತ ಸೇವಾ ಪರೀಕ್ಷೆಗಳಿಗೆ ಮಹತ್ವ ದೊರೆಯಿತು. ಕನ್‌ಫ್ಯೂಷಿಯಸ್ ಧರ್ಮಕ್ಕೆ ಸರ್ಕಾರದ ಪ್ರೋತ್ಸಾಹವಿದ್ದರೂ ಪರಧರ್ಮ ಸಹಿಷ್ಣುತಾ ನೀತಿಯನ್ನು ಅನುಸರಿಸಲಾಯಿತು. ಕಾನೂನುಗಳನ್ನು ಕ್ರೋಢೀಕರಿಸಲಾಯಿತು ಮತ್ತು ಕಾಲುವೆ ವ್ಯವಸ್ಥೆಯನ್ನು ವಿಸ್ತರಿಸುವ ಮೂಲಕ ವಾಣಿಜ್ಯಕ್ಕೆ ಪ್ರೋತ್ಸಾಹ ನೀಡಲಾಯಿತು. 8 ನೇ ಶತಮಾನದ ಮಧ್ಯ ಭಾಗದಲ್ಲಿ ಟ್ಯಾಂಗ್ ಸಾಮ್ರಾಜ್ಯ, 19 ನೇ ಶತಮಾನದಲ್ಲಿ ಚೀನಾ ಎಂದು ಪರಿಗಣಿಸಲ್ಪಟ್ಟಿದ್ದರ ಬಹುಭಾಗವನ್ನು ಒಳಗೊಂಡಿತ್ತು. ಅಲ್ಲದೆ ದಕ್ಷಿಣ ಮತ್ತು ಮಧ್ಯ ಮಂಚೂರಿಯ ಮತ್ತು ಪಶ್ಚಿಮದ ತುರ್ಕಿ ಸ್ಥಾನದ ವಿಶಾಲ ಪ್ರದೇಶವನ್ನು ಒಳಗೊಂಡಿತ್ತು. ವಾಸ್ತು ಶಿಲ್ಪ ಮತ್ತು ಶಿಲ್ಪಕಲೆ ಶ್ರೇಷ್ಠತೆಯ ಹೊಸ ಎತ್ತರ ತಲುಪಿದವು. ಕ್ರಿ.ಶ. 742 ರಲ್ಲಿ ಎರಡು ದಶಲಕ್ಷ ಜನರನ್ನು ಹೊಂದಿದ್ದ ಟ್ಯಾಂಗ್ ಚೀನಾದ ರಾಜಧಾನಿ ಚಾಂಗನ್ ವಾಸ್ತುಶಿಲ್ಪದ ದೃಷ್ಟಿಯಿಂದ ವಿಶ್ವದ ಅತ್ಯುತ್ತಮ ನಗರಗಳಲ್ಲೊಂದಾಗಿತ್ತು. ಜಪಾನಿನ ಪ್ರಥಮ ರಾಜಧಾನಿ ನಗರ ಚೀನಾದ ಚಾಂಗನ್ ಮಾದರಿಯಲ್ಲಿ ನಿರ್ಮಾಣವಾಯಿತು. ಚೀನಾದ ಪ್ರಸಿದ್ಧ ಕವಿಗಳಾದ ಲಿಪೋ, ಟುಫು, ವಾಂಗ್ ವೈ, ಪೋಚುರಿ ಮತ್ತು ವೈಯಿಂಗ್‌ವು ಟ್ಯಾಂಗ್ ಕಾಲದಲ್ಲಿ ಜೀವಿಸಿದ್ದರು. ಎರಡು ವಿಶ್ವಕೋಶಗಳನ್ನು ರಚಿಸಲಾಯಿತು. ಕೇವಲ ಭೂತಗಳ ಪ್ರಪಂಚಕ್ಕೆ ಸೀಮಿತವಾಗಿದ್ದ ಸಣ್ಣಕಥೆ ಈಗ ಸಾಂಸಾರಿಕ ಬದುಕಿನತ್ತ ಹೊರಳಿತು. ಬ್ಲಾಕ್ ಮುದ್ರಣವನ್ನು ಸಂಶೋಧಿಸಲಾಯಿತು.

ಟ್ಯಾಂಗ್ ಆಳ್ವಿಕೆಯ ನಂತರ ಕೆಲಕಾಲ ಅರಾಜಕತೆಯುಂಟಾಯಿತು. ಅನಂತರ ಸುಂಗ್ ವಂಶ ಅಧಿಕಾರಕ್ಕೆ ಬಂದಿತು. (ಕ್ರಿ.ಶ. 960-1279) ಸುಂಗ್ ಚೀನಾ ತನ್ನ ಔನ್ನತ್ಯದ ಕಾಲದಲ್ಲಿ ಸರ್ವಾಂಗೀಣ ಪ್ರಗತಿ ಸಾಧಿಸಿತು. ಕಲೆಗಳು ಮತ್ತು ಶಿಕ್ಷಣ ರಂಗದಲ್ಲಿ ಇದು ಪುನರುಜ್ಜೀವನದ ಕಾಲವಾಗಿತ್ತು. ಸುಂಗರ ಕಾಲದಲ್ಲಿ ಗದ್ಯದ ಬರಹಗಾರರು ಪ್ರಾಮುಖ್ಯತೆ ಪಡೆದರು. ಪಿಂಗಾಣಿಯ ಮೇಲೆ ಭೂದೃಶ್ಯ ಚಿತ್ರಣ, ಬ್ಲಾಕ್ ಮುದ್ರಣ ಮತ್ತು ನವ-ಕನ್‌ಫ್ಯೂಷಿಯಸ್ ಧರ್ಮ ಈ ಕಾಲದಲ್ಲಿ ಪ್ರಸಿದ್ಧವಾದವು. ಬೀಜಗಣಿತದಲ್ಲಿ ಸಾಕಷ್ಟು ಬೆಳವಣಿಗೆಯಾಯಿತು. ಬಹುಶಃ ಅದನ್ನು ಅರಬರು ಪರಿಚಯಿಸಿದರು.

ಸುಂಗರ ಮೂರು ಶತಮಾನಗಳ ಆಳ್ವಿಕೆಯ ನಂತರ ಚೀನಾವನ್ನು ಮಂಗೋಲರು ವಶಪಡಿಸಿಕೊಂಡರು. 13 ನೇ ಶತಮಾನದ ಅಂತ್ಯದ ವೇಳೆಗೆ ಮಹಾ ಮಂಗೋಲ್ ಸಾಮ್ರಾಜ್ಯ ಪೂರ್ವದಲ್ಲಿ ಚೀನಾ ಸಮುದ್ರದಿಂದ ಹಿಡಿದು ಉತ್ತರದಲ್ಲಿ ಏಷ್ಯಾದ ಹೃದಯ ಭಾಗ ಸೇರಿದಂತೆ ಆಮುನ್ ಮತ್ತು ಐರೋಪ್ಯ ರಷ್ಯದವರೆಗೆ ವಿಸ್ತರಿಸಿತ್ತು. ಪೀಕಿಂಗ್ ಮಂಗೋಲರ ಪೂರ್ವದ ಚಳಿಗಾಲದ ರಾಜಧಾನಿಯಾಗಿತ್ತು. ಕುಬ್ಲೈಖಾನ್ ನಾಯಕತ್ವದಲ್ಲಿ ಅವರು ಯುನ್ನಾನ್ ಪ್ರದೇಶವನ್ನು ವಶಪಡಿಸಿಕೊಂಡರು. ಚೀನಾ ವಿಶ್ವ ಸಾಮ್ರಾಜ್ಯದ ಒಂದು ಭಾಗವಾಯಿತು.

ಮಂಗೋಲರ ಒಂದು ಶತಮಾನದ ಆಳ್ವಿಕೆಯ ನಂತರ ಚೀನಾ ಕೊನೆಯ ಸ್ಥಳೀಯ ಚೀನಿ ರಾಜವಂಶವಾದ ಮಿಂಗ್ ವಂಶದ ಆಳ್ವಿಕೆಗೆ ಒಳಗಾಯಿತು. 17 ನೇ ಶತಮಾನದ ಮಧ್ಯ ಭಾಗದಲ್ಲಿ ವಿದೇಶೀಯರಾದ ಮಂಚುಗಳು ಚೀನಾವನ್ನು ಆಕ್ರಮಿಸಿಕೊಂಡರು. ಅವರು 1912 ರಲ್ಲಿ ಗಣರಾಜ್ಯ ಸ್ಥಾಪನೆಯಾಗುವವರೆಗೂ ಚೀನಾವನ್ನು ಆಳಿದರು. ಹೀಗೆ ಚೀನಾ ತನ್ನ ಸುದೀರ್ಘ ಇತಿಹಾಸದುದ್ದಕ್ಕೂ ಹಲವಾರು ರಾಜವಂಶಗಳ ಆಳ್ವಿಕೆಗೆ ಒಳಪಟ್ಟಿತ್ತು. ಈ ರಾಜವಂಶಗಳು ಚೀನಾದ ಸಂಸ್ಕೃತಿಯ ಬೆಳವಣಿಗೆಗೆ ತಮ್ಮದೇ ಕೊಡುಗೆ ನೀಡಿವೆ.

## 126.4 ಸಾಂಸ್ಕೃತಿಕ ಪರಂಪರೆ

ಚೀನೀಯರು ಅಲೌಕಿಕ ಪ್ರಪಂಚಕ್ಕಿಂತಲೂ ಪ್ರಕೃತಿ ಮತ್ತು ಮನುಷ್ಯನಿಗೆ ಸಂಬಂಧಿಸಿದ ಲೌಕಿಕ ಜಗತ್ತಿನ ಬಗ್ಗೆ ಹೆಚ್ಚು ಆಸಕ್ತರಾಗಿದ್ದರು. ಇತರ ನಾಗರಿಕತೆಗಳಿಗೆ ಹೋಲಿಸಿದರೆ ಚರ್ಚ್ ಮತ್ತು ಪುರೋಹಿತ ವರ್ಗದ ಪಾತ್ರ ಚೀನಾದಲ್ಲಿ ಗೌಣವಾಗಿತ್ತು. ಪೂರ್ವಿಕರ ಆರಾಧನೆಯಲ್ಲಿ ಮಾತ್ರ ಬಹುಮಟ್ಟಿಗೆ ಧಾರ್ಮಿಕ ಪ್ರೇರಣೆ ಇತ್ತು. ಪವಿತ್ರ ಪರ್ವತಗಳು, ಆಕಾಶ ಮತ್ತು ಪ್ರಕೃತಿಯ ಇತರ ಶಕ್ತಿಗಳನ್ನು ಪೂಜಿಸುತ್ತಿದ್ದರು. ಆದರೆ ಈ ಶಕ್ತಿಗಳು ಅಮೂರ್ತವಾಗಿಯೇ ಉಳಿದವು ಮತ್ತು ಅವುಗಳನ್ನು ಮನುಷ್ಯನಂತೆ ಮೂರ್ತೀಕರಿಸಲಿಲ್ಲ. ಒಂದು ಪ್ರಮುಖ ಪರಿಣಾಮವೇನೆಂದರೆ ಚೀನೀಯರು ಧಾರ್ಮಿಕ ಅಸಹಿಷ್ಣುತೆ ಮತ್ತು ಧರ್ಮಾಂಧತೆಯಿಂದ ಮುಕ್ತರಾಗಿದ್ದುದು. ಯಾವುದೇ ಸಂದರ್ಭದಲ್ಲೂ ಧರ್ಮದ ಹೆಸರಿನಲ್ಲಿ ಹಿಂಸೆಗಳು ಸಂಭವಿಸಲಿಲ್ಲ. ಚೀನೀಯರು ಸ್ವರ್ಗದ ಸುಖದ ಆಕರ್ಷಣೆಗೆ ಒಳಗಾಗಲಿಲ್ಲ ಅಥವಾ ನರಕದ ಶಾಶ್ವತವಾದ ಶಿಕ್ಷೆಯ ಭಯದಿಂದ ಯಾತನೆ ಪಡಲಿಲ್ಲ. ಈ ಭಾವನೆಗಳು, ಬೌದ್ಧಧರ್ಮ ಮತ್ತು ಇತರ ವಿದೇಶಿ ಧರ್ಮಗಳು ಪರಿಚಯಿಸುವವರೆಗೆ, ಚೀನಾದಲ್ಲಿ ಕಾಣಿಸಿಕೊಳ್ಳಲೇ ಇಲ್ಲ.

ಚೀನಾದ ಸಾಮಾಜಿಕ ತತ್ವಶಾಸ್ತ್ರ ಮುಖ್ಯವಾಗಿ ಮಾನವ ಸಂಬಂಧಗಳ ಸಮಸ್ಯೆಗಳನ್ನು ಕುರಿತದ್ದಾಗಿತ್ತು. ಮಾನವ ಸಂಬಂಧಗಳ ಒಗಟನ್ನು ಬಿಡಿಸದ ಹೊರತು, ಭೌತಿಕ ಶಕ್ತಿಯ ಪ್ರಗತಿ ಮತ್ತು ಬೆಳವಣಿಗೆ ಎಂದು ಕರೆಯಲ್ಪಡುವುದು ಕೇವಲ ಮನುಷ್ಯನ ಸಂಕಟವನ್ನು ಹೆಚ್ಚಿಸುತ್ತದೆ ಎಂಬುದನ್ನು ಚೀನಿ ಚಿಂತಕರು ಅರಿತಿದ್ದರು. ಚೀನಿಯರನ್ನು 'ವಾಸ್ತವ ವಾದಿಗಳು' ಎಂದು ವರ್ಣಿಸುವಾಗ ಸಾಮಾನ್ಯವಾಗಿ ಅದರ ಅರ್ಥ, ಮನುಷ್ಯನ ಬದುಕಿನ ತಕ್ಷಣದ ಸುಖದುಃಖಗಳ ಬಗೆಗೆ ಚೀನಿಯರು ಆಸಕ್ತರಾಗಿದ್ದರು ಎಂಬುದು. ಅವರು ಸಾಮರಸ್ಯ ಮತ್ತು ಸ್ಥಿರತೆಗೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದರು. ಮಾನವನ ಹಕ್ಕುಗಳಿಗಿಂತ ಅವನ ಕರ್ತವ್ಯಗಳಿಗೆ ಹೆಚ್ಚು ಒತ್ತು ನೀಡಲಾಯಿತು. ನಿಷ್ಠುರ ವ್ಯಕ್ತಿವಾದಕ್ಕೆ ಚೀನೀ ಸಮಾಜದಲ್ಲಿ ಸ್ಥಳವಿರಲಿಲ್ಲ. ಚೀನೀಯರ ಚಿಂತನೆಯಲ್ಲಿ ಕುಟುಂಬ ಮತ್ತು ಕುಟುಂಬದೊಳಗಿನ ಸಂಬಂಧಕ್ಕೆ ಹೆಚ್ಚಿನ ಮಹತ್ವ ನೀಡಲಾಗಿತ್ತು. ನೈತಿಕ ತಳಹದಿಯ ಶಿಕ್ಷಣವನ್ನು ಪ್ರತಿಪಾದಿಸಲಾಯಿತು ಮತ್ತು ಆಚರಣೆಗೆ ತರಲಾಯಿತು.

## 126.5 ಚೀನೀಯರ ಧರ್ಮ ಮತ್ತು ತತ್ವಜ್ಞಾನಿಗಳು

ಧರ್ಮಕ್ಕೆ ಸಂಬಂಧಿಸಿದಂತೆ ಚೀನೀಯರ ವಿಚಾರಗಳು ಎಲ್ಲ ಕಾಲದಲ್ಲೂ ಏಕಪ್ರಕಾರವಾಗಿರಲಿಲ್ಲ. ಕಾಲಕಾಲಕ್ಕೆ ಬದಲಾವಣೆಗಳಾದವು. ಪ್ರಾಚೀನ ಕಾಲದಲ್ಲಿ ಚೀನೀಯರು ಪುರಾತನ ಕಾಲದ ಜನರಲ್ಲಿ ಸಾಮಾನ್ಯವಾಗಿದ್ದ, ಧರ್ಮದ ವಿವಿಧ ರೂಪಗಳನ್ನು ಅನುಭವಿಸಿದರು. ಉದಾಹರಣೆಗೆ ಸರ್ವ ಸಜೀವತ್ವವಾದ, ಮಂತ್ರ ವಿದ್ಯೆ, ಏಕೇಶ್ವರವಾದ ಮತ್ತು ವಿಶ್ವದೇವತತ್ವ. ಪೂರ್ವಿಕರ ಆರಾಧನೆ ಅವರ ಧರ್ಮದ ಒಂದು ಪ್ರಮುಖ ಲಕ್ಷಣವಾಗಿತ್ತು. ಅವರು ಪ್ರಕೃತಿಯ ಶಕ್ತಿಗಳನ್ನು ದೇವತೆಗಳೆಂದು ಪರಿಗಣಿಸಿದ್ದರು ಮತ್ತು ಅವುಗಳಿಗೆ ಗೌರವಾರ್ಪಣೆ ಮಾಡಿದರು. ಕ್ರಿ.ಪೂ. 6ನೇ ಶತಮಾನದಲ್ಲಿ ತಾವೋ ಧರ್ಮ ಮತ್ತು ಕನ್‌ಫ್ಯೂಷಿಯಸ್ ಧರ್ಮ ಎಂಬ ಎರಡು ಪ್ರಮುಖ ಹೊಸ ಧರ್ಮಗಳು ಹುಟ್ಟಿಕೊಂಡವು. ಭಾರತದಲ್ಲಿ ಕುಶಾನರು ಆಳುತ್ತಿದ್ದ ಕಾಲದಲ್ಲಿ ಬೌದ್ಧ ಧರ್ಮ ಚೀನಾವನ್ನು ಪ್ರವೇಶಿಸಿತು. ಅದನ್ನು ಅಪಾರ ಸಂಖ್ಯೆಯ ಚೀನಿಯರು ಒಪ್ಪಿಕೊಂಡರು ಮತ್ತು ಅದು ಚೀನೀಯರ ಇತಿಹಾಸದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದೆ.

ಪ್ರಾಚೀನ ಚೀನಾದ ಅತ್ಯಂತ ಪ್ರಮುಖ ತತ್ವಜ್ಞಾನಿ ಕನ್‌ಫ್ಯೂಷಿಯಸ್ (ಕ್ರಿ.ಪೂ. 551 ರಿಂದ 479). ಅವನ ತತ್ವಶಾಸ್ತ್ರ ಬೇರೆ ಯಾವುದೇ ತತ್ವಶಾಸ್ತ್ರಕ್ಕಿಂತ ಚೀನಾದ ಮೇಲೆ ಅಗಾಧವಾದ ಮತ್ತು ನಿರಂತರವಾದ ಪ್ರಭಾವ ಬೀರಿತು. ಅದು ಚೀನಾಕ್ಕೆ ಒಂದು ಅಸಾಧಾರಣವಾದ ಮಾನವೀಯ ತತ್ವಶಾಸ್ತ್ರವನ್ನು ನೀಡಿತು. ಅದು ಸಮಾಜದ ನಿಜವಾದ ಆಧಾರಗಳು, ಸಾಮಾಜಿಕ, ಲೌಕಿಕ ಹಾಗೂ ದೈವಿಕ ಎಂಬುದನ್ನು ಮಾನ್ಯ ಮಾಡಿತು. ಕನ್‌ಫ್ಯೂಷಿಯಸ್ ಧರ್ಮ 1911 ರವರೆಗೂ ಚೀನಾದ ಅಧಿಕೃತ ತತ್ವಶಾಸ್ತ್ರವಾಗಿತ್ತು.

ಕನ್‌ಫ್ಯೂಷಿಯಸ್ ಲು ಎಂಬಲ್ಲಿ ಜನಿಸಿದನು. ಅವನು ಷಾಂಗ್ ಸಂತತಿಯ ವೃದ್ಧ ತಂದೆ ಮತ್ತು ಎಳೆಯ ಪ್ರಾಯದ ತಾಯಿಯ ಮಗನಾಗಿದ್ದನು. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡ ಅವನು ತಾಯಿಯ ಪೋಷಣೆಯಲ್ಲಿ, ಬಡತನದಲ್ಲಿ ಬೆಳೆದನು. ಪ್ರಾರಂಭದಿಂದಲೂ ಅವನು ಪಾಂಡಿತ್ಯ, ಸಂಸ್ಕಾರಗಳು ಮತ್ತು ಹಿಂದಿನ ದಾಖಲೆಗಳತ್ತ ಆಕರ್ಷಿತನಾದನು. ಅವನು ಲು ರಾಜ್ಯದಲ್ಲಿ ಒಬ್ಬ ಅಧಿಕಾರಿಯಾಗಿದ್ದನು ಮತ್ತು ಅದರ ಮುಖ್ಯ ಮಂತ್ರಿಯಾದನು. ತನ್ನ ಮಧ್ಯ ವಯಸ್ಸಿನಲ್ಲಿ ಅವನು ತನ್ನ ಉದ್ಯೋಗವನ್ನು ಬಿಟ್ಟು ಚೀನಾದೇಶದಾದ್ಯಂತ ರಾಜ್ಯದಿಂದ ರಾಜ್ಯಕ್ಕೆ ಸಂಚರಿಸಿದನು. ಲು ನಲ್ಲಿ ಅವನು ಮರಣ ಹೊಂದಿದನು.

ಕನ್‌ಫ್ಯೂಷಿಯಸ್ ಒಂದು ಆದರ್ಶ ಸಮಾಜ ಸ್ಥಾಪನೆಯ ಬಗೆಗೆ ಆಸಕ್ತನಾಗಿದ್ದನು. ಅಂತಹ ಸಮಾಜದ ನಿರ್ಮಾಣ ರಾಜ್ಯ ಮತ್ತು ಆಡಳಿತ ವರ್ಗಗಳಿಂದ ಸಾಧ್ಯ ಎಂದು ನಂಬಿದ್ದನು. ಪ್ರಾಚೀನ ಕಾಲದ ಬಗೆಗೆ ಆಸಕ್ತಿ ತೋರಿದ ಅವನು ತಾನು ಸೃಷ್ಟಿಕರ್ತನಲ್ಲ. ಕೇವಲ ಹಿಂದಿನ ಆದರ್ಶಗಳ ವಾಹಕ ಮಾತ್ರ ಎಂದು ಭಾವಿಸಿದ್ದನು. ಪ್ರಾಚೀನ ಕಾಲದ ಸಂತರು ತಾವೇ ಸೂಕ್ತ ಮಾದರಿಯಾಗಿ ಆದರ್ಶ ಸಮಾಜದ ಸ್ಥಾಪನೆಗೆ ಶ್ರಮಿಸಿದ್ದರು. ಆದ್ದರಿಂದ ಆಡಳಿತ ವರ್ಗಗಳು ಉನ್ನತವಾದ ನೈತಿಕ ನಡವಳಿಕೆಗಳನ್ನು ರೂಢಿಸಿಕೊಳ್ಳಬೇಕೆಂದು ಹೇಳಿದನು. ಒಬ್ಬ ಅರಸ ತನ್ನ ಸದ್ಗುಣಗಳಿಂದ ಆಡಳಿತ ನಡೆಸಬೇಕು. ಸಂಸ್ಕಾರಗಳು, ಯಾಗಗಳು ಮತ್ತು ಧಾರ್ಮಿಕ ವಿಧಿಗಳಲ್ಲಿ ಸಂಸ್ಕೃತಿಯ ಸಂರಕ್ಷಣೆಗೆ ಅವನು ಅತ್ಯವಶ್ಯಕ ಸಾಧನ. ಮನುಷ್ಯ ಸ್ವಭಾವತಃ ಒಳ್ಳೆಯವನೊ ಅಥವಾ ಕೆಟ್ಟವನೊ ಎಂಬುದನ್ನು ಕನ್‌ಫ್ಯೂಷಿಯಸ್ ಖಚಿತವಾಗಿ ಹೇಳಿಲ್ಲ. ಅಂತೆಯೇ ಮರಣೋತ್ತರದ ಬದುಕಿನ ಬಗೆಗೆ ಅವನು ಮೌನ ವಹಿಸಿದ್ದಾನೆ. ಅವನು ಮುಂದಿನ ಬದುಕಿಗಿಂತಲೂ ಇಹ ಲೋಕದ ಬದುಕಿಗೆ ಪ್ರಾಮುಖ್ಯತೆ ನೀಡಿದನು. ಅವನ ಶಿಷ್ಯರು ಅವನ ಬೋಧನೆಗಳು ಮತ್ತು ಹೇಳಿಕೆಗಳನ್ನು ಸಂಗ್ರಹಿಸಿದ್ದರಿಂದ ಅವುಗಳು ಸಂಗ್ರಹ ರೂಪದಲ್ಲಿವೆ.

ಮತ್ತೊಬ್ಬ ಪ್ರಸಿದ್ಧ ತತ್ವಜ್ಞಾನಿ ಲಾವೋತ್ಸೆ. ಅವನು ತಾವೋ ಧರ್ಮದ ಸ್ಥಾಪಕ ಮತ್ತು ಕನ್‌ಫ್ಯೂಷಿಯಸ್‌ನ ಸಮಕಾಲೀನನಾಗಿದ್ದನು. ಅವನು ರಾಜ್ಯ ಮತ್ತು ಸಮಾಜದ ಬಗೆಗೆ ಅಷ್ಟೇನು ಚಿಂತಿಸಲಿಲ್ಲ. ಅವನು ತಾವೋ ಕಲ್ಪನೆಯ ಬಗೆಗೆ ಹೆಚ್ಚು ಮಾತನಾಡಿದನು. ತಿಳಿದವರೆಂದು ಹೇಳಿಕೊಳ್ಳುವರು ಏನನ್ನು ತಿಳಿಯದವರು ಎಂದು ಅವನು ಹೇಳಿದನು. ತಾವೋ ಎಂಬುದು ಕಲ್ಪನಾತೀತವಾದುದು, ಸರ್ವವ್ಯಾಪಿಯಾದುದು ಮತ್ತು ವಿಶ್ವವನ್ನು ನಿಯತ್ರಿಸುತ್ತಿರುವುದು. ಚೀನಾದ ಅಧಿಕೃತ ಐತಿಹ್ಯದ ಪ್ರಕಾರ ಬೌದ್ಧ ಧರ್ಮ ಕ್ರೈಸ್ತಯುಗದ ಆರಂಭ ಕಾಲದಲ್ಲಿ ಚೀನಾವನ್ನು ಪ್ರವೇಶಿಸಿತು. ಆಧ್ಯಾತ್ಮಿಕ ತೃಪ್ತಿಗಿಂತ ಹೆಚ್ಚಿನದನ್ನು ಬೌದ್ಧ ಧರ್ಮ ಚೀನಾಕ್ಕೆ ತಂದಿತು. ಭಾರತದ ವಿಜ್ಞಾನ ಮತ್ತು ಕಲೆ ಕೂಡ ಚೀನಾ ಪ್ರವೇಶಿಸಿದವು. ಚೀನಾದ ಕುಲೀನ ವರ್ಗ ಬೌದ್ಧ ಧರ್ಮದ ಚಿಂತನೆ ಮತ್ತು ಭಾವವನ್ನು ಬಹಳ ಕಾಲದವರೆಗೆ ಉಳಿಸಿಕೊಂಡಿತು.

## 126.6 ಸಾಹಿತ್ಯ ಮತ್ತು ಶಿಕ್ಷಣ

ಚೀನೀಯರು ತಮ್ಮ ಬರವಣಿಗೆಯ ಭಾಷೆ ಮತ್ತು ಬರವಣಿಗೆಯ ಪದ್ಧತಿ ದೈವದತ್ತವಾದುದು ಎಂದು ನಂಬಿದ್ದರು. ಒಂದು ಸಂಪ್ರದಾಯದ ಪ್ರಕಾರ ನಾಲ್ಕು ಕಣ್ಣುಗಳ ವ್ಯಕ್ತಿಯೊಬ್ಬ ಪಕ್ಷಿಗಳ ಪಥವನ್ನು ವೀಕ್ಷಿಸಿ ಇದನ್ನು ರೂಪಿಸಿದನು ಮತ್ತು ಇದರ ಶೋದನೆಯಾದಾಗ " ಆಕಾಶ ಧಾನ್ಯದ ಮಳೆಗರೆಯಿತು ಮತ್ತು ರಾಕ್ಷಸರು ರಾತ್ರಿಯಲ್ಲಿ ದುಃಖಿಸಿದರು". ಚೀನಿ ಭಾಷೆಗೆ ವರ್ಣಮಾಲೆಯಿಲ್ಲ, ವಾಕ್ಯ ರಚನೆಯಿಲ್ಲ ಅಥವಾ ಅದಕ್ಕೆ ಸಂಬಂಧಿಸಿದ ನಿಯಮವಿಲ್ಲ ಮತ್ತು ಕಾಗುಣಿತವಿಲ್ಲ. ಬರವಣಿಗೆಯ ಭಾಷೆಯಲ್ಲಿ ಸುಮಾರು 40,000 ಗುರುತುಗಳಿವೆ. ಅವುಗಳನ್ನು ಏಕಾಕ್ಷರ ಶಬ್ದಗಳ ಮೂಲಕ ಆಡುಭಾಷೆಯಲ್ಲಿ ಬಳಸಲಾಗುತ್ತದೆ. ಅದರ ಪರಿಣಾಮವಾಗಿ ಪ್ರತಿಯೊಂದು ಶಬ್ದವೂ, ಅದರ ಅರ್ಥವನ್ನು ನಿರ್ಧರಿಸಲು ಸಹಾಯಕವಾಗುವ ಆರು ಧ್ವನಿಗಳನ್ನು ಹೊಂದಿರಬೇಕಾಗುತ್ತದೆ. ಚೀನೀ ಭಾಷೆ ಪ್ರಪಂಚದಲ್ಲೆ ಅತ್ಯಂತ ಕಠಿಣವಾದ ಭಾಷೆಯಾಗಿತ್ತು. ಅವರು 3000 ವರ್ಷಗಳ ಹಿಂದೆಯೇ ಕ್ರಮಬದ್ಧವಾದ ಕೈಬರಹವನ್ನು ರೂಪಿಸಿಕೊಂಡಿದ್ದರೆಂದು ಕಂಡು ಬರುತ್ತದೆ. ಪ್ರಾರಂಭದಲ್ಲಿ ಅವರು ಆಮೆಯ ಕವಚದ ಮೂಳೆ ಮತ್ತು ಬಿದಿರಿನ ಮೇಲೆ ಬರೆಯುತ್ತಿದ್ದರು. ಚೀನೀಯರ ಚಿತ್ರ ಲಿಪಿಯನ್ನು ಮೇಲಿನಿಂದ ಕೆಳಕ್ಕೆ ಬರೆಯಲಾಗುತ್ತಿತ್ತು. ಉದಾಹರಣೆಗೆ ಮರ ರಾಜಕೀಯದ ಸಂಕೇತವಾಗಿತ್ತು. ಅಂಥಹ ಎರಡು ಚಿನ್ಹೆಗಳು ಅರಣ್ಯ ಸಂಕೇತವಾಗಿದ್ದವು. ಮೇಲ್ಭಾಗದ ಮೂರು ಗೆರೆಗಳು ಮರದ ಕವಲುಗಳನ್ನು ಸೂಚಿಸುತ್ತಿದ್ದವು. ಕೆಳಭಾಗದ ಮೂರು ಗೆರೆಗಳು ಬೇರುಗಳನ್ನು ಸೂಚಿಸುತ್ತಿದ್ದವು. ಅವರು ಕ್ರಿ.ಶ. 7 ನೇ ಶತಮಾನದಷ್ಟು ಹಿಂದೆಯೇ ಒಂದು ಬಗೆಯ ಚಲಿಸುವ ಬೆರಳಚ್ಚು ಯಂತ್ರವನ್ನು ಬಳಸುತ್ತಿದ್ದರು.

ಚೀನಿ ಸಾಹಿತ್ಯದಲ್ಲಿ ಕೂಡ, ತತ್ವಶಾಸ್ತ್ರದಂತೆಯೇ, ಕನ್‌ಫ್ಯೂಷಿಯಸ್ ಅತ್ಯಂತ ಪ್ರಸಿದ್ಧ ವ್ಯಕ್ತಿಯಾಗಿದ್ದನು. ಅವನು ಸಾಹಿತ್ಯವನ್ನು ಸೃಷ್ಟಿಸಿದ್ದಲ್ಲದೆ, ಷಿ-ಚಿಂಗ್ ಅಥವಾ ಬುಕ್ ಆಫ್ ಓಡ್ಸ್ ನಲ್ಲಿ ಅವನು ಪ್ರಾಚೀನ ಕಾಲಕ್ಕೆ ಸಂಬಂಧಿಸಿದ ಬಹಳಷ್ಟನ್ನು ಸಂರಕ್ಷಿಸಿದ್ದಾನೆ. ಈ ಕೃತಿ ಷಾಂಗ್ ವಂಶದ ಕಾಲದ ಹಲವಾರು ಬರಹಗಾರರ ಕೃತಿಗಳ, ಸಂರಕ್ಷಣಾ ಯೋಗ್ಯ ಎಂದು ಕನ್‌ಫ್ಯೂಷಿಯಸ್ ಭಾವಿಸಿದ್ದ, ಆಯ್ದ ಭಾಗಗಳನ್ನು ಒಳಗೊಂಡಿದೆ.

ಚೀನೀಯರು ಸ್ವಭಾವತಃ ವಾಸ್ತವವಾದಿಗಳಾಗಿದ್ದರು. ತೈಲಿಪೋ ಅಥವಾ ಲಿತೈಪೋ (705-762) ಚೀನಾದ ಅತ್ಯಂತ ಶ್ರೇಷ್ಠ ಕವಿ. ಅವನು 30 ಸಂಪುಟಗಳಷ್ಟು ಕವಿತೆಗಳನ್ನು ರಚಿಸಿದ್ದಾನೆ. ಚೀನಾದ ಪ್ರತಿಯೊಬ್ಬ ವಿದ್ಯಾವಂತನೂ ಲಿಪೋನ ಕವಿತೆಯ ಕೆಲವು ಭಾಗವನ್ನಾದರು ಕಂಠಪಾಠ ಮಾಡಿರುತ್ತಾನೆ. ಚೀನಾದಲ್ಲಿ ಹಲವಾರು ಪ್ರಮುಖ ಗದ್ಯ ಬರಹಗಾರರಿದ್ದರೂ ಅವರನ್ನು ಚೀನೀಯರು ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರೆಂದು ಒಪ್ಪಿಕೊಳ್ಳಲಿಲ್ಲ. ಮಂಗೋಲರ ಧಾಳಿಗೆ ಮುಂಚೆ ಕಾದಂಬರಿ ಇರಲೇ ಇಲ್ಲ ಮತ್ತು ಮುಂದಿನ ಅವಧಿಯಲ್ಲೂ ಸಾಹಿತಿಗಳು ಕಾದಂಬರಿಗಳನ್ನು ಹೆಸರಿಸಲು ಯೋಗ್ಯ ಎಂದು ಪರಿಗಣಿಸಲಿಲ್ಲ. ಕವಿತೆಗೆ ಚೀನೀಯರು ಅಪಾರ ಪ್ರಾಮುಖ್ಯತೆ ನೀಡಿದರು.

ವಿದ್ಯಾಕ್ಷೇತ್ರದ 'ಅನಭಿಸಕ್ತ ದೊರೆ' ಯಾದ ಕನ್‌ಫ್ಯೂಷಿಯಸ್ ಚೀನಾದ ಶಿಕ್ಷಣ ಕ್ಷೇತ್ರದಲ್ಲಿ ಪ್ರಭಾವಶಾಲಿ ವ್ಯಕ್ತಿಯಾಗಿದ್ದನು. ಶೈಕ್ಷಣಿಕ ಕ್ರಮದ ಬಗೆಗೆ ಅವನ ಚಿಂತನೆಗಳನ್ನು ಹಲವಾರು ಸುಸಂಸ್ಕೃತ ಚೀನೀಯರು ಅನುಸರಿಸಿದರು. ಚಿಂತಿಸಿ ಜೀರ್ಣಿಸಿಕೊಳ್ಳದ ಕಲಿಕೆ ವ್ಯರ್ಥ ಶ್ರಮ. ಕಲಿತು ವರ್ಗಾಯಿಸಲಾಗದ ಚಿಂತನೆ ಅಪಾಯಕಾರಿ. ತನ್ನ ಶೈಕ್ಷಣಿಕ ಪ್ರಗತಿಯನ್ನು ಅವನು ಸಂಕ್ಷಿಪ್ತವಾಗಿ ತಿಳಿಸಿದ್ದಾನೆ. ಶಿಕ್ಷಣ ಸರ್ಕಾರದ ನಿಯಂತ್ರಣದಿಂದ ಮುಕ್ತವಾಗಿರಬೇಕು ಎಂಬುದು ಅವನ ಅಭಿಪ್ರಾಯವಾಗಿತ್ತು. ಚೀನಾದಲ್ಲಿ ವಿದ್ವಾಂಸರಿಗೆ ಅಪಾರ ಗೌರವವಿತ್ತು.

## 126.7 ಕುಶಲ ಕಲೆಗಳು ಮತ್ತು ವಿಜ್ಞಾನ

ಪ್ರಾಚೀನ ಚೀನಾ ಕಂಚು, ಜವಳಿ, ಮಣ್ಣಿನ ಉತ್ಪನ್ನಗಳಿಗೆ ಪ್ರಸಿದ್ಧವಾಗಿತ್ತು. ಚೀನೀಯರ ಚಿತ್ರಕಲೆ ಮತ್ತು ಲಿಪಿಗಾರಿಕೆ ಅವರ ಕಲಾತ್ಮಕ ಭಾವನೆಗಳ ಎತ್ತರವನ್ನು ಪ್ರತಿನಿಧಿಸುತ್ತದೆ. ಭೂದೃಶ್ಯಗಳ ಚಿತ್ರಣ ಬಹಳ ಜನಪ್ರಿಯವಾಗಿತ್ತು. ಗೋಡೆಗಳು, ಕಂಬಗಳು, ಪಿಂಗಾಣಿ ಪಾತ್ರೆಗಳ ಮೇಲೆ ಚಿತ್ರಕಲೆಯನ್ನು ಕಾಣಬಹುದಾಗಿದೆ. ಅವುಗಳು ಕನಸಿನ ಚಿತ್ರಗಳಂತೆ ಕಾಣುತ್ತವೆ. ಅವುಗಳನ್ನು ಆಧ್ಯಾತ್ಮಿಕ ಕವಿತೆಗೆ ಹೋಲಿಸಬಹುದು. ಮುಂದಿನ ದಿನಗಳಲ್ಲಿ ದೇವ, ದೇವತೆಗಳ, ಸ್ವರ್ಗೀಯ ಚಕ್ರವರ್ತಿಗಳ, ಡ್ರ್ಯಾಗನ್‌ಗಳ (ಬಲಿಷ್ಠವಾದ ಪೌರಾಣಿಕ ಪ್ರಾಣಿ) ಚಿತ್ರಗಳು, ನಗರ ಮತ್ತು ಗ್ರಾಮಾಂತರದ ದೃಶ್ಯಗಳ ಚಿತ್ರಣಕ್ಕೆ ಕಾಗದದ ಬಳಕೆ ಆರಂಭವಾಯಿತು.

ಕ್ರಿ.ಪೂ. 200 ರಲ್ಲಿ ಚೀನೀಯರು ಗಾಜು ಮತ್ತು ಪಿಂಗಾಣಿಯನ್ನು ಉತ್ಪಾದಿಸಿದರು. ಅದೇ ಸಮಯದಲ್ಲಿ ಅವರು ಕಾಗದವನ್ನು ಉತ್ಪಾದಿಸಿದರು. ಅದು ಈಜಿಪ್ಟಿನ ಪಾಪಿರಸ್‌ಗಿಂತಲೂ ಉತ್ತಮವಾಗಿತ್ತು. ಚೀನೀಯರಿಂದ ಕಾಗದ ತಯಾರಿಕೆಯ ಕಲೆಯನ್ನು ಕಲಿತುಕೊಂಡ ಅರಬರು ಅದನ್ನು ಯುರೋಪಿಗೆ ಪರಿಚಯಿಸಿದರು. ಚೀನೀಯರು ನಾವಿಕರ ದಿಕ್ಸೂಚಿ, ಮುದ್ರಣಯಂತ್ರ, ನೀರು ಗಡಿಯಾರ, ರೇಷ್ಮೆ, ಚಹ, ಚಿತ್ರಗಾರನ ಕುಂಚವನ್ನು ಜಗತ್ತಿಗೆ ನೀಡಿದವರು. ದ್ರಾಕ್ಷಿಯಿಂದ ದ್ರಾಕ್ಷಾರಸವನ್ನು (ವೈನ್) ತಯಾರಿಸುವುದನ್ನು ಅವರು ಅರಿತಿದ್ದರು.

ಪ್ರಯೋಗವಾದಿ ವಿಜ್ಞಾನ ಕ್ಷೇತ್ರದಲ್ಲಿ ಚೀನಿಯರ ಸಂಶೋಧನೆಗಳು ಬಹಳ ವ್ಯಾಪಕವಾಗಿದ್ದವು. ಅವುಗಳು ಖಗೋಳ ಶಾಸ್ತ್ರ, ಜೀವಶಾಸ್ತ್ರ, ಭೂಗರ್ಭಶಾಸ್ತ್ರ, ಪುರಾತತ್ವಶಾಸ್ತ್ರ, ಗಣಿತಶಾಸ್ತ್ರ ಮತ್ತು ಭೂಗೋಳ ಶಾಸ್ತ್ರವನ್ನು ಒಳಗೊಂಡಿದ್ದವು.

ಚೀನೀಯರು ಆಕಾಶಕಾಯಗಳ ದೂರವನ್ನು ಲೆಕ್ಕ ಹಾಕುವುದನ್ನು ಅರಿತಿದ್ದರು. ಅವರು ಒಂದು ನೂರಕ್ಕೂ ಹೆಚ್ಚು ಸಸ್ಯ ಪ್ರಭೇದಗಳನ್ನು ಕ್ರಿ.ಶ. 500 ಕ್ಕೆ ಮೊದಲೇ ಗುರುತಿಸಿದ್ದರು. ಪಶ್ಚಿಮಕ್ಕಿಂತ 1500 ವರ್ಷ ಮೊದಲೇ ಪಶ್ಚಿಮ ಚೌ ಕಾಲದಲ್ಲಿ ಎರಕ ಹೊಯ್ದ ಕಬ್ಬಿಣವನ್ನು ಉತ್ಪಾದಿಸಲಾಗಿತ್ತು. ಷಾಂಗ್ ಆಳ್ವಿಕೆಯ ಕಾಲದಲ್ಲೆ ಚೀನೀಯರು ಉತ್ತರದ ಅಯಸ್ಕಾಂತೀಯ ಗುಣದ ಬಗೆಗೆ ಅರಿತಿದ್ದರು ಮತ್ತು ಚೌ ಕಾಲದಲ್ಲೇ ದಿಕ್ಕನ್ನು ಸೂಚಿಸುವ ಅಯಸ್ಕಾಂತಿಯ ಗುಣದ ಸೂಚಿಯನ್ನು ಹೊಂದಿದ್ದರು. ಕ್ರಿ.ಶ. 3 ನೇ ಶತಮಾನದ ಚೀನೀಯರ ನಕ್ಷೆ, ಟಾಲೆಮಿಯಷ್ಟೆ ನಿಖರವಾಗಿತ್ತು. ಚೀನೀಯರೇ ಬಹುಷಃ ಗಾಜನ್ನು ಸಂಶೋಧಿಸಿದವರು (ಚೌ ಕಾಲ). ಅವರು ಸಿಡಿ ಮದ್ದನ್ನು ಶೋಧಿಸಿದರು, (ಟ್ಯಾಂಗ್ ಕಾಲ) ಪ್ರಥಮ ಬಾಂಬ್ ತಯಾರಿಸಿದರು (ಕ್ರಿ.ಶ. 1161) ಮತ್ತು ಪ್ರಥಮ ಫಿರಂಗಿಯನ್ನು ತಯಾರಿಸಿದರು (ಕ್ರಿ.ಶ. ಸುಮಾರು 1250). ಅವರೇ ಪ್ರಥಮವಾಗಿ ಕಾಗದ, (ಕ್ರಿ.ಶ. 105) ಪಿಂಗಾಣಿ ಮತ್ತು ಮುದ್ರಣ (ಕ್ರಿ.ಶ. 600) ವನ್ನು ಸಂಶೋಧಿಸಿದವರು.

ಚೀನೀಯರೇ ಪ್ರಥಮ ಯಶಸ್ವಿ ರೋಗನಿರೋಧಕ ತಂತ್ರವನ್ನು ರೂಪಿಸಿದರು. ಕ್ರಿ.ಶ. 2ನೇ ಶತಮಾನದಷ್ಟು ಹಿಂದೆಯೇ ಚೀನಾದಲ್ಲಿ, ಭೂಕಂಪ ಮಾಪಕವನ್ನು ಬಳಸಲಾಗಿತ್ತು. ಚೀನಾದ ಮಹಾಗೋಡೆ ಅವರ ತಾಂತ್ರಿಕ ಕೌಶಲ್ಯಕ್ಕೆ ನಿದರ್ಶನವಾಗಿದೆ. ಹೀಗೆ ಚೀನಾದ ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಪರಂಪರೆ ಸಮೃದ್ಧವಾಗಿದೆ. ಈ ಹಿನ್ನೆಲೆಯೊಂದಿಗೆ ಚೀನಾ ಮಂಚುಗಳ ಕಾಲದಲ್ಲಿ ಆಧುನಿಕ ಪ್ರಪಂಚವನ್ನು ಪ್ರವೇಶಿಸಿತು.

## 126.8 ಘಟಕದ ಸಾರಾಂಶ

ಈ ಘಟಕದಲ್ಲಿ ನಾವು ಚೀನಾದ ಪ್ರಾಚೀನ ಚರಿತ್ರೆಯನ್ನು ಹಾಗೂ ಅದು ಹೇಗೆ ಪ್ರಾಚೀನ ವಿಶ್ವಕ್ಕೆ ಪರಿಚಿತವಾಗಿತ್ತೆಂಬುದನ್ನು ಚರ್ಚಿಸಿದ್ದೇವೆ. ಪ್ರಾಚೀನ ಚೀನಾ ಮತ್ತು ಭಾರತ ಹಿಂದೆ ವಿಶ್ವ ಸಂಸ್ಕೃತಿಯನ್ನು ಹರಡುವಲ್ಲಿ ಜೊತೆಯಾಗಿದ್ದವು. ಭಾರದಂತೆಯೇ ಚೀನಾ ಕೂಡ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ.

ಚೀನಾದ ಚಾರಿತ್ರಿಕ ಹಿನ್ನೆಲೆಯನ್ನು ಈ ಕೆಳಕಂಡಂತೆ ಸಂಕ್ಷಿಪ್ತಗೊಳಿಸಬಹುದು.

* ಚೀನಾ ಫೆಸಿಫಿಕ್ ಸಾಗರ, ಭಾರತ ಮತ್ತು ಇಂಡೋ-ಚೀನಾದಿಂದ ಆವೃತ್ತವಾಗಿದೆ.
* ಚೀನಾ ತನ್ನ ಸುದೀರ್ಘ ಇತಿಹಾಸದಲ್ಲಿ ಹಲವು ರಾಜವಂಶಗಳ ಆಳ್ವಿಕೆಗೆ ಒಳಪಟ್ಟಿದೆ.
* ಚೀನಾದ ಸಾಂಸ್ಕೃತಿಕ ಪರಂಪರೆ ಚರಿತ್ರೆಗೆ ತಿಳಿದಿರುವ ಸುದೀರ್ಘ, ನಿರಂತರ ಬೆಳವಣಿಗೆಯಲ್ಲೊಂದನ್ನು ಪ್ರತಿನಿಧಿಸುತ್ತದೆ.
* ಚೀನೀಯರು ಪ್ರಕೃತಿಯನ್ನು ಪ್ರೀತಿಸುತ್ತಿದ್ದರು ಮತ್ತು ಪ್ರಪಂಚದ ಅಸ್ಥಿತ್ವದಲ್ಲಿ ವಿಶ್ವಾಸ ಹೊಂದಿದ್ದರು.
* ಕನ್‌ಫ್ಯೂಷಿಯಸ್ ಧರ್ಮ, ತಾವೋಧರ್ಮ ಮತ್ತು ಬೌದ್ಧ ಧರ್ಮಗಳು ಚೀನಾದಲ್ಲಿ ಜನಪ್ರಿಯವಾಗಿದ್ದವು ಮತ್ತು ಸಮಾಜದ ಸಾಮೂಹಿಕ ಕ್ಷೇಮಕ್ಕಾಗಿ ಅವುಗಳು ತಮ್ಮ ಕೊಡುಗೆ ನೀಡಿವೆ.

* ಸಾಹಿತ್ಯ ಮತ್ತು ಶಿಕ್ಷಣದ ಪ್ರಗತಿ

* ಕುಶಲ ಕಲೆಗಳು ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಅಸಾಧಾರಣ ಪ್ರಗತಿ.

ಈ ಹಿನ್ನೆಲೆಯೊಂದಿಗೆ ಚೀನಾ ಮಂಚುಗಳ ನಾಯಕತ್ವದಲ್ಲಿ ಆಧುನಿಕ ಯುಗವನ್ನು ಪ್ರವೇಶಿಸಿತು.

## 126.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಉತ್ತರಗಳು

*I.* *ಇವುಗಳಿಗೆ ಐದು ವಾಕ್ಯಗಳಲ್ಲಿ ಉತ್ತರಿಸಿ.*

a) ಚೀನಾದ ಮೂರು ಪ್ರಮುಖ ನದಿ ವ್ಯವಸ್ಥೆಗಳು ಯಾವುವು?

b) ತಾವು ಶ್ರೇಷ್ಠರೆಂದು ಚೀನೀಯರು ಭಾವಿಸಲು ಕಾರಣಗಳೇನು?

c) ಚೌ ವಂಶದ ಪ್ರಾಮುಖ್ಯತೆಯನ್ನು ತಿಳಿಸಿ.

*II* *ಇವುಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.*

a) ಚೀನೀಯರ ಧರ್ಮ

b) ಕನ್‌ಫ್ಯೂಷಿಯಸ್

c) ಲಾವೊತ್ಸೆ

*III* *ಮೂವತ್ತು ಸಾಲುಗಳಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳು*

a) ಪ್ರಾಚೀನ ಚೀನಾದ ಇತಿಹಾಸದ ಅಧ್ಯಯನದ ಪ್ರಾಮುಖ್ಯತೆಯನ್ನು ವಿವರಿಸಿ.

b) ತತ್ವಶಾಸ್ತ್ರ, ಕಲೆಗಳು ಮತ್ತು ವಿಜ್ಞಾನ ಕ್ಷೇತ್ರಕ್ಕೆ ಪ್ರಾಚೀನ ಚೀನೀಯರ ಕೊಡುಗೆಗಳನ್ನು ವಿಮರ್ಷಾತ್ಮಕವಾಗಿ ಪರಿಶೀಲಿಸಿ.

## 126.10 ಪರಾಮರ್ಶನ ಗ್ರಂಥಗಳು


1. Latourette .K.S. : Chinese - Their History and Culture
2. Dawson Raymond : Imperial China



*ಮೂಲ: ಎಸ್. ಮೀರ್ ಸಮಿವುಲ್ಲ*

*ಅನುವಾದಕರು: ಬಿ. ಪರಮೇಶ್ವರ*

# ಟಿಪ್ಪಣಿಗಳು

# ಘಟಕ - 127

# ಮಂಚುಗಳ ಆಳ್ವಿಕೆಯಲ್ಲಿ ಚೀನಾ

*ರಚನೆ*


127.0 ಉದ್ದೇಶಗಳು

127.1 ಪೀಠಿಕೆ

127.2 ಮಂಚುಗಳು

127.3 ಚೀನಿ ಸಂಸ್ಕೃತಿಯ ಸ್ವೀಕಾರ

127.4 ಮಂಚುಗಳ ಕಾಲದಲ್ಲಿ ಚೀನಾದ ವಿಸ್ತರಣೆ

127.5 ಮಂಚು ಚಕ್ರವರ್ತಿಗಳು ಮತ್ತು ಸಾಂಸ್ಕೃತಿಕ ಅವನತಿ

127.6 ಪಾಶ್ಚಾತ್ಯರಿಗೆ ಪ್ರತಿರೋಧ

127.7 ಮಂಚುಗಳ ಅವನತಿ

127.8 ಘಟಕದ ಸಾರಾಂಶ

127.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಉತ್ತರಗಳು

127.10 ಪರಾಮರ್ಶನ ಗ್ರಂಥಗಳು

## 127.0 ಉದ್ದೇಶಗಳು

ಈ ಘಟಕದಲ್ಲಿ ನಾವು ಚೀನಾದಲ್ಲಿ ಮಂಚುಗಳ ಆಡಳಿತದ ಮುಖ್ಯ ಲಕ್ಷಣಗಳನ್ನು ಚರ್ಚಿಸಿದ್ದೇವೆ. ಚೀನಿ ಸಂಸ್ಕೃತಿಯ ಅಳವಡಿಕೆಗೆ ಸಂಬಂಧಿಸಿದ ವಿಷಯವನ್ನು ಇಲ್ಲಿ ಚರ್ಚಿಸಲಾಗಿದೆ. ಮಂಚುಗಳ ಕಾಲದಲ್ಲಿ ಚೀನಾದ ವಿಸ್ತರಣೆಯನ್ನು ವಿವರಿಸಲಾಗಿದೆ. ಅಲ್ಲದೆ ಪಾಶ್ಚಾತ್ಯರಿಗೆ ಚೀನಾ ತೋರಿದ ಪ್ರತಿರೋಧ ಮತ್ತು ಚೀನಾದ ಮೇಲೆ ಪಾಶ್ಚಾತ್ಯರ ಪ್ರಭಾವಗಳನ್ನು ವಿಷದವಾಗಿ ವಿಶ್ಲೇಷಿಸಲಾಗಿದೆ. ಜೊತೆಗೆ ಡಾ. ಸನ್‌ಯಾತ್-ಸೇನ್ ರ ಏಳಿಗೆಯವರೆಗೆ ಮಂಚು ಆಡಳಿತದ ಮುಂದುವರಿಕೆ ಹಾಗೂ ಮಂಚುಗಳ ಪತನಕ್ಕೆ ಕಾರಣಗಳನ್ನು ವಿವರಿಸಲಾಗಿದೆ.

## 127.1 ಪೀಠಿಕೆ

ಮಂಚು ವಂಶ ಸುಮಾರು 300 ವರ್ಷಗಳ ಕಾಲ ಚೀನಾವನ್ನು ಆಳಿತು. ಈ ವಂಶ ಅಧಿಕಾರಕ್ಕೆ ಬರುವುದರೊಂದಿಗೆ ನಾವು ಚೀನಾದ ಆಧುನಿಕ ಯುಗವನ್ನು ಪ್ರವೇಶಿಸುತ್ತೇವೆ. ಈ ಅವಧಿಯಲ್ಲಿ ಎರಡು ಅಫೀಮು ಯುದ್ಧಗಳು ನಡೆದವು ಮತ್ತು ತೈಪಿಂಗ್ ಕ್ರಾಂತಿ ಸಂಭವಿಸಿತ್ತು. ಈ ಅವಧಿಯಲ್ಲೇ ಐರೋಪ್ಯರು ಚೀನಾದ ವಿಷಯದಲ್ಲಿ ಹೆಚ್ಚು ಹೆಚ್ಚು ಆಸಕ್ತಿ ತೋರಲಾರಂಭಿಸಿದರು ಮತ್ತು ಜಪಾನ್ ಚೀನಾದ ಮೇಲೆ ತನ್ನ ಪ್ರಭಾವ ಸ್ಥಾಪಿಸಿಕೊಳ್ಳಲು ಯತ್ನಿಸಿತು. ಅದು ಸಾಮಾಜಿಕ ಮತ್ತು ಧಾರ್ಮಿಕ ಬಿಕ್ಕಟ್ಟಿನ ಕಾಲವೂ ಆಗಿದ್ದು ಅದರಲ್ಲಿ ಕ್ರೈಸ್ತ ಧರ್ಮ ಪ್ರಚಾರಕರು ಪ್ರಮುಖ ಪಾತ್ರ ವಹಿಸಿದರು. ಜೊತೆಗೆ ಈ ಕಾಲದಲ್ಲಿ ಚೀನಾ ಸಾಮ್ರಾಜ್ಯದ ವಿಸ್ತರಣೆಯಾಯಿತು. ಈ ರೀತಿ ಅದು ಚೀನಾಕ್ಕೆ ಬಿರುಸಿನ ಚಟುವಟಿಕೆಗಳ ಮತ್ತು ಹೋರಾಟದ ಕಾಲವಾಗಿತ್ತು.

ಚೀನಾದಲ್ಲಿ ಮಿಂಗ್ ರಾಜವಂಶೀಯರು ಬಹಳ ಕಾಲ ಅಧಿಕಾರವನ್ನು ಉಳಿಸಿಕೊಳ್ಳಲಾಗದೆ ಸಿಂಹಾಸನವನ್ನು ಕಳೆದುಕೊಳ್ಳಬೇಕಾಯಿತು. ಚೀನಾದಲ್ಲಿ ಮಿಂಗರ ಭಗ್ನಾವಶೇಷಗಳ ಮೇಲೆ ಪ್ರಭುತ್ವ ಸ್ಥಾಪಿಸಲು ಮಂಚುಗಳಿಗೆ ಅವಕಾಶ ದೊರೆಯಿತು. ಡಾ. ಸನ್ ಯಾತ್ ಸೇನ್ ರಂಗಭೂಮಿಯ ಮೇಲೆ ಕಾಣಿಸಿಕೊಂಡು ಕೊನೆಯ ಮಂಚು ದೊರೆಯನ್ನು ಅಧಿಕಾರದಿಂದ ಹೊರದೂಡುವವರೆಗೂ ಮಂಚುಗಳು ಅಧಿಕಾರದಲ್ಲಿ ಮುಂದುವರಿದರು.

## 127.2 ಮಂಚುಗಳು

ಮಂಚುಗಳು ಉತ್ತರದ ಬುಡಕಟ್ಟು ಜನರು. ಅವರು 16 ನೇ ಶತಮಾನದ ಪ್ರಾರಂಭದಲ್ಲಿ ಚೀನಾವನ್ನು ಪ್ರವೇಶಿಸಿಲಾರಂಭಿಸಿದರು. ಅವರ ಆಳ್ವಿಕೆಯಲ್ಲಿ ಚೀನಾದ ಗಡಿಗಳು ವಿಸ್ತಾರಗೊಂಡವು. ಅವರು ಮಂಚೂರಿಯಾದಿಂದ ಬಂದವರಾಗಿದ್ದರು. ಅವರು ಮಂಗೋಲರಂತೆ ಟಾರ್ಟರ್ ಬುಡಕಟ್ಟಿಗೆ ಸೇರಿದವರಾಗಿದ್ದರು. ಮಂಚುಗಳ ಕಾಲದಲ್ಲಿ ಚೀನೀ ಸಾಮ್ರಾಜ್ಯ ತನ್ನ ಔನ್ನತ್ಯದ ಶಿಖರವನ್ನು ತಲುಪಿತು. ಅವರು ಮಂಗೋಲರನ್ನು ಹಿಮ್ಮೆಟ್ಟಿಸಿದರು. ಅವರು ಟಿಬೆಟ್‌ನ್ನು ಶಾಂತಗೊಳಿಸಿದರು ಮತ್ತು ಅದನ್ನು ಚೀನಾದ ಆಶ್ರಿತ ರಾಜ್ಯವನ್ನಾಗಿ ಮಾಡಿದರು. ಹೀಗೆ ಮಂಚುಗಳು ಚೀನಾಕ್ಕೆ ಹೊರಗಿನವರಾಗಿದ್ದರು ಮತ್ತು ಅವರು 1644 ರಲ್ಲಿ ತಮ್ಮ ಅಧಿಕಾರ ಸ್ಥಾಪಿಸಿಕೊಂಡರು. ಅದು ಚೀನಾದ ಕೊನೆಯ ರಾಜವಂಶವಾಗಿತ್ತು. ಅವರು ಮಿಂಗ್ ವಂಶದ ಉತ್ತರಾಧಿಕಾರಿಗಳಾಗಿದ್ದರು. ಅದನ್ನು ಚಿಂಗ್ ವಂಶವೆಂದು ಕರೆಯುವುದುಂಟು. ಡಾ. ಸನ್ ಯಾತ್ ಸೇನ್‌ರ ಏಳಿಗೆಯವರೆಗೂ ಮಂಚುಗಳ ಆಡಳಿತ ಮುಂದುವರಿಯಿತು.

ಮಂಚುಗಳ ಪತನಕ್ಕೆ ಹಲವಾರು ಕಾರಣಗಳಿದ್ದವು. ಅವುಗಳಲ್ಲಿ ಮುಖ್ಯವಾದುವು ಯಾವುವೆಂದರೆ, ಕೆಲವು ಮಂಚು ದೊರೆಗಳು ದುರ್ಬಲರಾಗಿದ್ದರು ಮತ್ತು ಅವರಿಗೆ ಸಾಮ್ರಾಜ್ಯದ ಅಖಂಡತೆಯನ್ನು ಕಾಪಾಡುವುದು ಸಾಧ್ಯವಾಗಲಿಲ್ಲ. ಹಲವಾರು ಅರಮನೆ ಪಿತೂರಿಗಳು ಸಂಭವಿಸಿದವು ಮತ್ತು ಹಲವಾರು ರಹಸ್ಯ ಸಂಘಗಳು ಸರ್ಕಾರದ ವಿರುದ್ಧ ಕೆಲಸ ಮಾಡುತ್ತಿದ್ದವು. ಮಂಚುಗಳ ಕಠಿಣ ಆದೇಶಗಳನ್ನು ಪಾಲಿಸಲು ಇಚ್ಛಿಸದ ಬ್ರಿಟಿಷ್ ವರ್ತಕರು ಕೂಡ ಜನರನ್ನು ಪ್ರಚೋದಿಸಿದರು. ಹೀಗೆ ಮಂಚುಗಳ ಪತನದಲ್ಲಿ ಆಂತರಿಕ ಹಾಗೂ ಹೊರಗಿನ ಶಕ್ತಿಗಳ ಕೈವಾಡವಿತ್ತು. ಈ ರೀತಿಯಲ್ಲಿ ವಿದೇಶೀಯರೂ ಕೂಡ ಚೀನಾದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸಲಾರಂಭಿಸಿದರು.

## 127.3 ಚೀನಿ ಸಂಸ್ಕೃತಿಯ ಸ್ವೀಕಾರ

ಮಂಚುಗಳು ವಿದೇಶೀಯರಾದರೂ ಚೀನಿ ಸಾಮ್ರಾಟರಂತೆಯೇ ಚೀನಾವನ್ನು ಆಳಿದರು. ಪೀಕಿಂಗ್ ನಗರದ ಮುಖ್ಯ ಕಛೇರಿಗಳು ಮತ್ತು ಇಲಾಖೆಗಳು ಒಬ್ಬ ಚೀನಿ ಮತ್ತು ಒಬ್ಬ ಮಂಚು ಮುಖ್ಯಸ್ಥನನ್ನು ಹೊಂದಿದ್ದವು. ಪಾರಂಪರಿಕ ಕನ್‌ಫ್ಯೂಷಿಯಸ್ ವಿದ್ವಾಂಸ ಶ್ರೇಣಿಯ ನೌಕರಶಾಹಿ ವ್ಯವಸ್ಥೆ ಮಂಚುಗಳ ಕಾಲದಲ್ಲೂ ಮುಂದುವರಿಯಿತು. ಆಡಳಿತ ಸೇವೆಗೆ ಜನರನ್ನು ಆಯ್ಕೆ ಮಾಡಲು ನಡೆಸಲಾಗುತ್ತಿದ್ದ ಪರೀಕ್ಷಾ ಪದ್ಧತಿಯನ್ನು ಕೆಲವು ಬದಲಾವಣೆಗಳೊಂದಿಗೆ ಮುಂದುವರಿಸಲಾಯಿತು. ಮಿಂಗ್‌ರ ಕಾಲದ ಕಾನೂನು ಸಂಹಿತೆಯನ್ನು ಉಳಿಸಿಕೊಳ್ಳಲಾಯಿತು.

ಆದಾಗ್ಯೂ ಮಂಚುಗಳು ತಮ್ಮದೇ ಕೆಲವು ಪದ್ಧತಿಗಳನ್ನು ಹಾಗೂ ಉಡುಪನ್ನು ಉಳಿಸಿಕೊಂಡರು. ಹಲವಾರು ಆಯಕಟ್ಟಿನ ಸ್ಥಳಗಳಲ್ಲಿ ಮತ್ತು ಪ್ರಮುಖ ನಗರಗಳಲ್ಲಿ ಅವರು ಸೈನ್ಯವನ್ನಿಟ್ಟಿದ್ದರು. ಅವರು ಯಾವುದೇ ಅಧಿಕಾರಿಗೆ ತನ್ನ ಸ್ವಂತ ಪ್ರಾಂತ್ಯದಲ್ಲಿ ಸೇವೆ ಸಲ್ಲಿಸಲು ಅವಕಾಶ ನೀಡುತ್ತಿರಲಿಲ್ಲ. ಅಂತಹ ಅಧಿಕಾರಿಗಳು ರಾಜದ್ರೋಹಿ ಬೆಂಬಲಿಗರೊಂದಿಗೆ ದಂಗೆ ಏಳಬಹುದೆಂಬ ಭೀತಿ ಅದಕ್ಕೆ ಕಾರಣವಾಗಿತ್ತು. ಮಂಚುಗಳು ಅಧಿಕಾರಿಗಳನ್ನು ಆಗಾಗ್ಗೆ ಸ್ಥಳದಿಂದ ಸ್ಥಳಕ್ಕೆ ವರ್ಗಾಯಿಸುತ್ತಿದ್ದರು. ಒಂದೇ ಸ್ಥಳದಲ್ಲಿ ಬಹಳ ಕಾಲ ಉಳಿದರೆ ಅವರು ತಮ್ಮ ಸ್ಥಳೀಯ ಬೆಂಬಲಿಗರ ಪ್ರಬಲ ಗುಂಪನ್ನು ಕಟ್ಟಬಹುದೆಂಬ ಭೀತಿ ಅದಕ್ಕೆ ಕಾರಣವಾಗಿತ್ತು.

ಪ್ರಮುಖ ಪ್ರಾಂತೀಯ ಅಧಿಕಾರಿಗಳ ಪೈಕಿ ಒಬ್ಬರ ವಿರುದ್ಧ ಮತ್ತೊಬ್ಬರನ್ನು ತಡೆಯಾಗಿ ಬಳಸಿಕೊಳ್ಳುವ ವ್ಯವಸ್ಥೆಯನ್ನು ಹೊಂದಿದ್ದರು. ಸ್ಥಳೀಯ ಬೆಳವಣಿಗೆಗಳನ್ನು ಗಮನಿಸಲು ಮತ್ತು ರಾಜಧಾನಿಗೆ ವರದಿ ಸಲ್ಲಿಸಲು ವಿಶೇಷ ಧೂತರನ್ನು ಆಗಾಗ್ಗೆ ಕಳುಹಿಸಲಾಗುತ್ತಿತ್ತು. ವಿಧೇಯತೆಯ ಸಂಕೇತವಾಗಿ ಚೀನಿ ಪುರುಷರನ್ನು ಮಂಚು ಸಂಪ್ರದಾಯದಂತೆ ಹಣೆಯ ಕೂದಲನ್ನು ಬೋಳಿಸುವಂತೆ ಹಾಗೂ ಉದ್ದದ ಜಡೆ ಬಿಡುವಂತೆ ಮಾಡಲಾಯಿತು. ಹೀಗೆ ಮಂಚುಗಳು ಚೀನಿ ಸಂಸ್ಕೃತಿಯನ್ನು ಅಳವಡಿಸಿಕೊಂಡರೂ ತಮ್ಮ ವೈಶಿಷ್ಟ್ಯತೆಯನ್ನು ಉಳಿಸಿಕೊಳ್ಳಲು ಯತ್ನಿಸಿದರು. ಸಂಸ್ಕೃತಿಗೆ ಸಂಬಂಧಿಸಿದಂತೆ ಮಂಚು ಯುಗ ಮಿಂಗ್ ಯುಗದ ಮುಂದುವರಿಕೆಯಾಗಿತ್ತು.

## 127.4 ಮಂಚುಗಳ ಕಾಲದಲ್ಲಿ ಚೀನಾದ ರಾಜಕೀಯ ವಿಸ್ತರಣೆ

ಮಂಚು ಅರಸರು ಮುಖ್ಯವಾಗಿ 17 ಮತ್ತು 18 ನೇ ಶತಮಾನದ ಅರಸರಾದ ಕಾಂಗ್ ಷಿ (1661-1722) ಮತ್ತು ಚೀನ್‌ಲುಂಗ್ (1736-1796) ಚೀನಾ ಸಾಮ್ರಾಜ್ಯದ ಗಡಿಗಳನ್ನು ವಿಸ್ತರಿಸಿದರು. ಅವರ ಕಾಲದಲ್ಲಿ ಚೀನಾ ತನ್ನ ಉನ್ನತಿಯ ತುದಿಯನ್ನು ತಲುಪಿತು. ಸಿಕಿಯಾಂಗ್ ಪ್ರದೇಶವನ್ನು ವಶಪಡಿಸಿಕೊಳ್ಳಲಾಯಿತು. ಅಂತೆಯೇ ಟಿಬೆಟ್ ಮತ್ತು ನೇಪಾಳದ ಮೇಲೆ ಮಾಡಲಾಯಿತು. ಬರ್ಮಾದ ಮೇಲೆ ದಾಳಿ ಮಾಡಿ ಕಪ್ಪ ಕಾಣಿಕೆ ಸಲ್ಲಿಸುವಂತೆ ಮಾಡಲಾಯಿತು. ಅನ್ನಾಮ್ ಚೀನಾದ ಸಾರ್ವಭೌಮತ್ವಕ್ಕೆ ಒಳಪಟ್ಟಿತು. ಫಾರ್ಮೋಸ ಕೂಡ ಸಾಮ್ರಾಜ್ಯದ ಒಂದು ಭಾಗವಾಯಿತು. ಕೊರಿಯ ಪೀಕಿಂಗ್‌ನ ಸಾರ್ವಭೌಮತ್ವವನ್ನು ಒಪ್ಪಿಕೊಂಡಿತು. ಹಿಂದೆಂದಿಗಿಂತಲೂ ಚೀನಾ ಹೆಚ್ಚು ಜನಪ್ರಿಯವಾಯಿತು. 1800 ರಲ್ಲಿ ಚೀನಾ 30 ದಶಲಕ್ಷ ಜನಸಂಖ್ಯೆಯನ್ನು ಹೊಂದಿತ್ತು.

## 127.5 ಮಂಚು ಚಕ್ರವರ್ತಿಗಳು ಮತ್ತು ಸಾಂಸ್ಕೃತಿಕ ಅವನತಿ

ಮಂಚುವಂಶ 10 ಅರಸರನ್ನು ಸೃಷ್ಟಿಸಿತು. ಅವರುಗಳು

ಷಾನ್ ಚಿನ್ : 1644-1661

ಕಾಂಗ್ ಷಿ : 1661-1722

ಯುಂಗ್ ಚೆಂಗ್ : 1722-1735

ಚೀನ್ ಲುಂಗ್ : 1735-1795

ಚಿಯ ಚಿಂಗ್ : 1796-1820

| | |
|---|---|
| ತಾವೋಕುವಾಂಗ್ | : 1820-1850 |
| ಷೀನ್ ಫೆಂಗ್ | : 1850-1861 |
| ತುಂಗ್ ಚಿ | : 1861-1875 |
| ಕುವಾಂಗ್ ಸು | : 1875-1905 |
| ಸುವಾನ್ ತುಂಗ್ | : 1908-1912 |

(ಪು-ಯಿ)

ಮಂಚು ಅರಸರು ಹೊರದೇಶಗಳ ಜೊತೆಗಿನ ಬಹುತೇಕ ಎಲ್ಲ ಸಂಬಂಧಗಳನ್ನು ಮತ್ತು ಆಂತರಿಕ ರಾಜಕೀಯ ಬೆಳವಣಿಗೆಗೆ ಸಂಬಂಧಿಸಿದ ಎಲ್ಲವನ್ನೂ ಒಂದಾಗಿ ಬೆಸೆದರು. ಅರಸ ಬಲಿಷ್ಠನಾಗಿದ್ದಾಗ ದೇಶ ಅಭಿವೃದ್ಧಿ ಹೊಂದಿತು. ಅರಸ ದುರ್ಬಲನಾಗಿದ್ದಾಗ ದೇಶ ತೊಂದರೆ ಅನುಭವಿಸಿತು. ಕಾಂಗ್ ಷಿ ಫ್ರಾನ್ಸ್‌ನ 14 ನೇ ಲೂಯಿ, ರಷ್ಯದ ಪೀಟರ್ ಮಹಾಶಯ ಮತ್ತು ಭಾರತದ ಔರಂಗಜೇಬ್‌ನ ಸಮಕಾಲೀನ ದೊರೆ ಮತ್ತು ಅವರೆಲ್ಲರಿಗಿಂತಲೂ ಬಹುಷಃ ಶ್ರೇಷ್ಠನಾದವನು ಅವನ ಮೊಮ್ಮಗ ಚೀನ್ ಲುಂಗ್‌ನ ಆಡಳಿತ ಅವನ ಸಮಕಾಲೀನರಾದ ರಷ್ಯದ ಕ್ಯಾಥರಿನ್ ಮತ್ತು ಪ್ರಷ್ಯದ ಫ್ರೆಡರಿಕ್ ಮಹಾಶಯನ ಆಡಳಿತಕ್ಕಿಂತಲೂ ಉನ್ನತವಾದುದಾಗಿತ್ತು. ಈ ಇಬ್ಬರು ಶ್ರೇಷ್ಠ ಚೀನಿ ಅರಸರು ಸುಮಾರು ಒಂದೂವರೆ ಶತಮಾನ ಕಾಲ ಆಳಿದರು.

***ಸಾಂಸ್ಕೃತಿಕ ಅವನತಿ:***

ಚೀನ್ ಲುಂಗ್‌ನ ಪ್ರಥಮ ಉತ್ತರಾಧಿಕಾರಿ ಚಿಯ ಚಿಂಗ್‌ನ ಕಾಲದಲ್ಲಿ ಚೀನಾದ ಪ್ರಾಚೀನ ಸಂಸ್ಥೆಗಳು ನಾಶಹೊಂದಲಾರಂಭಿಸಿದವು. ವಿದೇಶೀಯರೊಂದಿಗೆ ಅವನು ಅಹಂಕಾರದಿಂದ ನಡೆದುಕೊಂಡನು. ಬಹುಷಃ ಚೀನಾದ ರಾಜಕೀಯ ವ್ಯವಸ್ಥೆಯ ಅನಿಯಂತ್ರಿತ ವಿನಾಶ ಅದಕ್ಕೆ ಕಾರಣವಾಗಿದ್ದಿತು. ಕಡಲುಗಳ್ಳರು ಕಡಲತೀರದುದ್ದಕ್ಕೂ ತುಂಬಿಕೊಂಡರು. ಒಳನಾಡಿನಲ್ಲಿ ಢಕಾಯಿತರು ಕ್ರೌರ್ಯ ಮೆರೆದರು. ಸೈನ್ಯದಲ್ಲಿ ದಂಗೆಗಳು ಸಂಭವಿಸಿದವು ಮತ್ತು ನೌಕರಶಾಹಿ ಪೂರ್ಣವಾಗಿ ಬ್ರಷ್ಟಗೊಂಡಿತು. ಸಾಮ್ರಾಟನ ಬಗೆಗೆ ಜನರ ಅಸಮಾಧಾನದ ಲಾಭ ಪಡೆಯಲು ರಹಸ್ಯ ಸಂಘಗಳು ಹುಟ್ಟಿಕೊಂಡವು. 19 ನೇ ಶತಮಾನದ ಮಧ್ಯಭಾಗದ ವೇಳೆಗೆ ಮಂಚು ವಂಶ ಮುಳುಗಿಹೋದಂತೆ ಕಂಡು ಬಂದಿತು. ಮಂಚು ಆಸ್ಥಾನ ಜಡವಾಗಿತ್ತು ಮತ್ತು ಅವನತಿಯತ್ತ ಸಾಗುತ್ತಿತ್ತು. ಅದರ ನೈತಿಕ ಸತ್ವ, ಗೊಂದಲದಿಂದ ಕೂಡಿದ ಮತ್ತು ಆಡಂಬರದ ಬದುಕಿನಿಂದಾಗಿ ದುರ್ಬಲಗೊಂಡಿತು. ರಾಜ್ಯದ ವ್ಯವಹಾರಗಳು ಅಸಮರ್ಥರಾದ ರಾಜಕೀಯ ಸಲಹೆಗಾರರು, ಶಿಖಂಡಿಗಳು ಮತ್ತು ಉಪಪತ್ನಿಯರ ಕೈಸೇರಿತು. ಚಕ್ರವರ್ತಿ ತಾವೊಕುವಾಂಗ್ ನ ಕಾಲದಲ್ಲಿ ಅರಾಜಕತೆ ತೀವ್ರಗೊಂಡಿತು ಮತ್ತು ತೈಪಿಂಗ್ ದಂಗೆಯಲ್ಲಿ ಪರ್ಯವಸಾನಗೊಂಡಿತು. ಈ ದಂಗೆ 20 ದಶಲಕ್ಷ ಜನರನ್ನು ಬಲಿ ತೆಗೆದುಕೊಂಡಿತು ಮತ್ತು ದುರ್ಬಲನಾದ ಅರಸ ಷೀನ್ ಹಾಗೂ ಹಸುಳೆ ದೊರೆ ತುಂಗ್ ಚಿಯ ಕಾಲದಲ್ಲಿ ಹಲವಾರು ಪ್ರಾಂತ್ಯಗಳಿಗೆ ಹರಡಿತು. ಮಂಚುಗಳ ನಾಯಕತ್ವದ ಚೀನಾ ಹಲವು ದೌರ್ಬಲ್ಯಗಳನ್ನು ಹೊಂದಿತ್ತು. ಮೊದಲನೆಯದಾಗಿ ಸಾಮ್ರಾಟನ ಸ್ಥಾನ ಸುರಕ್ಷಿತವಾಗಿರಲಿಲ್ಲ. ದೇಶದಲ್ಲಿ ಸೇನಾನಾಯಕರಿದ್ದು ಜನರಿಗೆ ಕಿರುಕುಳ ಕೊಡುತ್ತಿದ್ದರು. ರೈತರು ಬಡತನ ಮತ್ತು ಅಜ್ಞಾನದಿಂದ ಬಳಲುತ್ತಿದ್ದರು. ಪ್ರಾಂತೀಯ ರಾಜ್ಯಪಾಲರುಗಳು ರೈತರನ್ನು ತೀವ್ರವಾಗಿ ಶೋಷಿಸುತ್ತಿದ್ದರು. ಮಂಚು ಕುಟುಂಬ ಮಾತ್ರ ಆಡಂಬರದ ಜೀವನ ನಡೆಸುತ್ತಿತ್ತು. ಚೀನಾದಲ್ಲಿ ಒಂದು ಉದಾತ್ತ ಆದರ್ಶಗಳನ್ನು ಹೊಂದಿದ್ದ ಶ್ರೀಮಂತ ಶ್ರೇಣಿಯ ಕೆಳಗಿನ ವರ್ಗವಿತ್ತು. ಈ ವಿದ್ವಾಂಸವರ್ಗ ದೇಶದ ಆಡಳಿತವನ್ನು ಮುನ್ನಡೆಸಿತು. ಅವರೆ ಚೀನಾದ ಬುದ್ಧಿಜೀವಿಗಳು.

## 127.6 ಪಾಶ್ಚಾತ್ಯರಿಗೆ ಪ್ರತಿರೋಧ

ಹಲವಾರು ಐರೋಪ್ಯ ದೇಶಗಳು ಚೀನಾದೊಂದಿಗೆ ವ್ಯಾಪಾರ ಮಾಡಲು ಆಸಕ್ತವಾಗಿದ್ದವು. ಈ ಹಿನ್ನೆಲೆಯಲ್ಲಿ ಚೀನಾದೊಂದಿಗೆ ಐರೋಪ್ಯ ದೇಶಗಳ ವ್ಯಾಪಾರವನ್ನು ಹೇಗೆ ವಿಧಿಬದ್ಧ ಮಾಡುವುದು ಎಂಬ ಸಮಸ್ಯೆ ಉದ್ಭವಿಸಿತು. ಚೀನೀಯರು ಪಾರಂಪರಿಕವಾಗಿ ಅತಿಥಿ ಸತ್ಕಾರಕ್ಕೆ ಹೆಸರಾಗಿದ್ದರು ಮತ್ತು ಅವರು ವ್ಯಾಪಾರ ವ್ಯವಹಾರಗಳ ಬಗೆಗೆ ಆತಂಕ ಪಡುತ್ತಿರಲಿಲ್ಲ. ಆದರೆ ಐರೋಪ್ಯ ವರ್ತಕರು

ರಾಜಕೀಯ ಉದ್ದೇಶಗಳನ್ನು ಹೊಂದಿದ್ದು ಚೀನಿ ಚಕ್ರವರ್ತಿಗಳ ತೀವ್ರ ಆತಂಕಕ್ಕೆ ಕಾರಣವಾಯಿತು. ಚೀನಾದ ದೊರೆಗಳು ತಮ್ಮ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಐರೋಪ್ಯ ದೇಶಗಳ ವ್ಯಾಪಾರವನ್ನು ಪೂರ್ಣವಾಗಿ ನಿಲ್ಲಿಸಿಬಿಡುತ್ತಿದ್ದರು, ಆದರೆ ತಮ್ಮ ಸಮುದ್ರ ತೀರಪ್ರದೇಶಕ್ಕೂ ಪರಿಣಾಮಕಾರಿ ನಿಯಂತ್ರಣವನ್ನು ತಾವು ಹೊಂದಿಲ್ಲವೆಂಬುದನ್ನು ಅವರು ಅರಿತಿದ್ದರು. ಆದ್ದರಿಂದಲೇ 1685 ರಲ್ಲಿ ಚಕ್ರವರ್ತಿ ಸ್ವಲ್ಪ ಪ್ರಮಾಣದ ನಿಯಂತ್ರಿತ ವ್ಯಾಪಾರಕ್ಕೆ ಅನುಮತಿಸಿದನು. ಆದರೆ ದುರ್ದೈವದಿಂದ ವಿದೇಶಿ ವರ್ತಕರು ತಮಗೆ ದೊರೆತ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡರು. ಚೀನಾದ ಆಂತರಿಕ ವ್ಯವಹಾರಗಳಲ್ಲಿ ಅವರು ಹಸ್ತಕ್ಷೇಪ ಮಾಡಲಾರಂಭಿಸಿದರು. ಈ ಹಸ್ತಕ್ಷೇಪ ತೀವ್ರಗೊಂಡಾಗ ಚಕ್ರವರ್ತಿ ಒಂದು ಘೋಷಣೆ ಹೊರಡಿಸಿ ಐರೋಪ್ಯರು ಕೇವಲ ಕ್ಯಾಂಟನ್ ಬಂದರಿನ ಮೂಲಕ ಮಾತ್ರ ವ್ಯಾಪಾರ ನಡೆಸಬಹುದೆಂದು ಆದೇಶಿಸಿದನು.

ಚಕ್ರವರ್ತಿಯ ಘೋಷಣೆಯಂತೆ ಐರೋಪ್ಯರು ಕೇವಲ ಕ್ಯಾಂಟನ್ ಬಂದರಿನ ಮೂಲಕ ವ್ಯಾಪಾರ ನಡೆಸಬೇಕಿತ್ತು. ಅಲ್ಲದೆ ಐರೋಪ್ಯರು ಎಲ್ಲ ಚೀನಿ ವರ್ತಕರೊಂದಿಗೆ ವ್ಯಾಪಾರ ನಡೆಸುವಂತಿರಲಿಲ್ಲ. ಆದರೆ ಚಕ್ರವರ್ತಿಯಿಂದ ನೇಮಕಗೊಂಡ ವ್ಯಾಪಾರದ ಕಮೀಷನರ್‌ನ ಮೂಲಕ ಮಾತ್ರ ವ್ಯಾಪಾರ ನಡೆಸಬೇಕಿತ್ತು. ಎಲ್ಲ ಬಗೆಯ ವ್ಯಾಪಾರ ವ್ಯವಹಾರಗಳನ್ನು ಅಂತಿಮಗೊಳಿಸುವುದು ಈ ಅಧಿಕಾರಿಯ ಹೊಣೆಗಾರಿಕೆಯಾಗಿತ್ತು. ಎಲ್ಲ ಮಾತುಕತೆಗಳು ಅವನ ಮೂಲಕವೇ ನಡೆಯಬೇಕಿತ್ತು. ಇದರಿಂದಾಗಿ ಐರೋಪ್ಯ ವರ್ತಕರ ವ್ಯಾಪಾರದ ಸ್ವಾತಂತ್ರ್ಯ ನಿರ್ಬಂಧಕ್ಕೊಳಪಟ್ಟಿತು. ಆದರೂ ವರ್ತಕರು ಕ್ಯಾಂಟನ್ ನಗರದ ಹೊರವಲಯದಲ್ಲಿ ಕೇಂದ್ರಗಳನ್ನು ಸ್ಥಾಪಿಸಿಕೊಂಡು ಬಿರುಸಿನ ವ್ಯಾಪಾರವನ್ನು ಮುಂದುವರಿಸಿದರು. ಅವರು ತಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಸಹಾಯ ಪಡೆಯಲು ತಮ್ಮವರೇ ಆದ ದ್ವಿಭಾಷಿಗಳನ್ನು ನೇಮಕ ಮಾಡಿಕೊಂಡರು.

ಮುಂದಿನ ದಿನಗಳಲ್ಲಿ ಚಕ್ರವರ್ತಿ ವ್ಯಾಪಾರದ ನಿಯಮಗಳಲ್ಲಿ ಬದಲಾವಣೆ ಮಾಡಿದನು. 13 ವರ್ತಕರನ್ನೊಳಗೊಂಡ 'ಕೊ-ಹಾಂಗ್' ನ್ನು ಚಕ್ರವರ್ತಿಯು ನೇಮಿಸಿದನು. ಐರೋಪ್ಯ ವರ್ತಕರು ಇದರೊಂದಿಗೆ ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದ ಮಾತುಕತೆ ನಡೆಸಬೇಕಿತ್ತು. ಈಗ ವಿದೇಶಿ ವರ್ತಕರು, ಒಬ್ಬ ವ್ಯಕ್ತಿಯ ಬದಲು, ಹದಿಮೂರು ಜನರಲ್ಲಿ ಯಾರಾದರೂ ಒಬ್ಬನೊಂದಿಗೆ ತಮ್ಮ ವ್ಯಾಪಾರ ವ್ಯವಹಾರ ನಡೆಸುವ ಅವಕಾಶ ಪಡೆದರು. 1757 ರಲ್ಲಿ ಚಕ್ರವರ್ತಿಯು ಒಂದು ಘೋಷಣೆಯಲ್ಲಿ ಐರೋಪ್ಯರು ಕ್ಯಾಂಟನ್ ಅಲ್ಲದೆ ಇತರ ಬಂದರುಗಳ ಮೂಲಕವೂ ವ್ಯಾಪಾರ ನಡೆಸಬಹುದೆಂದು ತಿಳಿಸಿದನು. ಆದರೆ ವರ್ತಕರು ಒಂದು ಗಂಭೀರವಾದ ಸಮಸ್ಯೆ ಎದುರಿಸಬೇಕಾಯಿತು. ಚೀನಾದ ರೇಷ್ಮೆಗೆ ಯುರೋಪಿನ ಎಲ್ಲ ದೇಶಗಳಲ್ಲೂ ಅಪಾರ ಬೇಡಿಕೆಯಿತ್ತು. ಅವರು ಚೀನೀಯರಿಂದ ಕೊಂಡುಕೊಂಡ ರೇಷ್ಮೆ, ಪಿಂಗಾಣಿ, ಚಹ ಮೊದಲಾದವುಗಳಿಗೆ ಪ್ರತಿಯಾಗಿ ಚಿನ್ನ ಮತ್ತು ಬೆಳ್ಳಿಯನ್ನು ಕೊಡಬೇಕಿತ್ತು. "ಚೀನಿಯರಿಗೆ ಮಾರಲು ಅವರ ಬಳಿ ಏನೂ ಇರಲಿಲ್ಲ".

ಇದು ವರ್ತಕರಿಗೆ ದಿಗ್ಭ್ರಮೆಗೊಳಿಸುವ ಸಮಸ್ಯೆಯಾಯಿತು ಮತ್ತು ಅವರು ತಾವು ಕೂಡ ಚೀನೀಯರಿಗೆ ಮಾರಬಹುದಾದ ಸರಕುಗಳನ್ನು ಹುಡುಕಲಾರಂಭಿಸಿದರು. ಅಮೆರಿಕದ ಕಾಡುಗಳಲ್ಲಿ ಪಡೆಯಬಹುದಾಗಿದ್ದ ತುಪ್ಪಳ ಮತ್ತು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಬೆಳೆಸುತ್ತಿದ್ದ ಅಫೀಮನ್ನು ಚೀನೀಯರಿಗೆ ಮಾರಲು ನಿರ್ಧರಿಸಿದರು. ಚೀನಿಯರು ಮೊದಲಿನಿಂದಲೂ ಅನುಕೂಲಕರ ವಿದೇಶ ವ್ಯಾಪಾರ ಹೊಂದಿದ್ದರು. ಐರೋಪ್ಯ ವರ್ತಕರು ತಮ್ಮನ್ನು ಕ್ಯಾಂಟನ್ ನಗರಕ್ಕೆ ಸೀಮಿತಗೊಳಿಸಿದ ಮತ್ತು ನಿರ್ದಿಷ್ಟ ವರ್ತಕರೊಂದಿಗೆ ಮಾತ್ರ ವ್ಯಾಪಾರ ನಡೆಸುವಂತೆ ನಿರ್ಬಂಧಿಸಿದ್ದರಿಂದ ಅಸಮಾಧಾನಗೊಂಡಿದ್ದರು. ಅಲ್ಲದೆ ಚೀನಾಕ್ಕೆ ಏನನ್ನೂ ರಫ್ತು ಮಾಡದೆ ಕೇವಲ ಚೀನಾದಿಂದ ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿಯಿಂದ ಅಸಮಾಧಾನಗೊಂಡಿದ್ದರು.

## 127.7 ಮಂಚುಗಳ ಅವನತಿ

19 ನೇ ಶತಮಾನದ ಉತ್ತರಾರ್ಧದಲ್ಲಿ ರಾಜಕೀಯ ಅಧಿಕಾರ ಚೀನಾದ ಅಸಾಧಾರಣ ಮಹಿಳೆಯಾದ ವಿಧವಾರಾಣಿ ತ್ಸು-ಷಿಯ ಕೈಯಲ್ಲಿತ್ತು. ಅವಳು ಷೀನ್‌ನ (ಮಂಚು ದೊರೆ) ಪತ್ನಿ ಮತ್ತು ಕ್ವಾಂಗ್ ಸುನ ಚಿಕ್ಕಮ್ಮನಾಗಿದ್ದಳು. ಅವಳು ಕ್ರೂರಿಯೂ ಮತ್ತು ದೃಢ ನಿರ್ಧಾರದವಳೂ ಆಗಿದ್ದಳು. ಅಗತ್ಯವಾದಗಲೆಲ್ಲ ಅವಳು ವಿದೇಶೀಯರೊಂದಿಗೆ ರಾಜಿ ಮಾಡಿಕೊಂಡಳು ಮತ್ತು ಆಂತರಿಕ ಬದಲಾವಣೆಗಳಿಗೆ ಅವಕಾಶ ಮಾಡಿಕೊಟ್ಟಳು.

ಚಕ್ರವರ್ತಿ ಆರಂಭಿಸಿದ ಸುಧಾರಣಾ ಚಳುವಳಿಗೆ ತ್ಸು-ಷಿಯಿಂದಲೇ ವಿರೋಧ ವ್ಯಕ್ತವಾಯಿತು. ಈ ಮೂಲಕ ವಂಶದ ಆಡಳಿತವನ್ನು ರಕ್ಷಿಸುವ ಅವಕಾಶವನ್ನು ಕಳೆದುಕೊಂಡಂತಾಯಿತು. ಅಲ್ಲದೆ ಅವಳು ವಿದೇಶೀಯರನ್ನು ವಿರೋಧಿಸುವ ಮತ್ತು ಚೀನಾದ ಮೇಲೆ ಅವರ ಪ್ರಭಾವವನ್ನು ಕಡಿಮೆ ಮಾಡುವ ಪ್ರಯತ್ನ ನಡೆಸಿದಳು. 1899 ರ ಬಾಕ್ಸರ್ ದಂಗೆ ವಿದೇಶೀಯರನ್ನು ವಿರೋಧಿಸಲು ಮಂಚುಗಳಿಗೆ ಅವಕಾಶವನ್ನು ಕಲ್ಪಿಸಿತು. ಸಂಪ್ರದಾಯನಿಷ್ಠ ಬಾಕ್ಸರ್‌ಗಳು ಮಂಚುಗಳ ಬೆಂಬಲ ಪಡೆದುಕೊಂಡರು.

ಬಾಕ್ಸರ್‌ಗಳು ಆತ್ಮ ರಕ್ಷಣೆಗಾಗಿ ರಚಿಸಿಕೊಳ್ಳಲಾದ ಸ್ಥಳೀಯ ಗುಂಪುಗಳು. ಅವರು ವಿದೇಶೀಯರು ಮತ್ತು ಕ್ರೈಸ್ತರನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಅವರಿಗೆ ರಹಸ್ಯ ಸಂಘಟನೆಗಳ ಬೆಂಬಲವಿತ್ತು. ಅವರು ನಡೆಸಿದ ಕ್ರೂರ ಕೃತ್ಯಗಳು ವಿದೇಶೀಯರ ಮಧ್ಯ ಪ್ರವೇಶಕ್ಕೆ ಕಾರಣವಾದವು. 1900 ಬಾಕ್ಸರ್ ದಂಗೆ ಹತ್ತಿಕ್ಕಲ್ಪಟ್ಟು ಮಂಚು ಸರ್ಕಾರ ತೀವ್ರ ಅವಮಾನಕ್ಕೆ ಗುರಿಯಾಯಿತು. ರಾಜಧಾನಿಗೆ ಹಿಂದಿರುಗಿದ ವೃದ್ಧ ರಾಣಿ ಕೂಡ, ತೀವ್ರ ಸ್ವರೂಪದ ಬದಲಾವಣೆಗಳನ್ನು ಜಾರಿಗೆ ತಂದಿದ್ದರೆ.ಮಂಚು ಆಡಳಿತ ಅಂತ್ಯವನ್ನು ಕಾಣಬೇಕಾಗುತ್ತದೆ ಎಂಬುದನ್ನು ಗುರುತಿಸಿದಳು. ಚಕ್ರವರ್ತಿ ಸೂಚಿಸಿದ ಕ್ರಾಂತಿಕಾರಿ ಸುಧಾರಣೆಗಳನ್ನು ಒಪ್ಪಿಕೊಳ್ಳದಿದ್ದರೂ, ಅವಳು ಸಂಪ್ರದಾಯ ಬದ್ಧ ದೀರ್ಘಕಾಲಿಕ ಯೋಜನೆಗಳ ಮೂಲಕ ತನ್ನ ಸ್ಥಾನವನ್ನು ಬಲಪಡಿಸಿಕೊಳ್ಳಬಹುದೆಂಬುದನ್ನು ಕಂಡುಕೊಂಡಳು. ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಜಾರಿಗೆ ತಂದಳು. ನೂತನ ಕಾನೂನು ಸಂಹಿತೆಯನ್ನು ಜಾರಿಗೆ ತರಲಾಯಿತು ಮತ್ತು ಹಳೆಯ ಆಡಳಿತ ಸೇವಾ ಪರೀಕ್ಷೆಗಳನ್ನು ರದ್ದು ಪಡಿಸಲಾಯಿತು. ಆರ್ಥಿಕ ಸುಧಾರಣೆಗಳ ಯೋಜನೆ ಸಿದ್ಧಪಡಿಸಲಾಯಿತು ಮತ್ತು ಸೈನ್ಯವನ್ನು ಪುನರ್ ರಚಿಸಲು ಮತ್ತು ಆಧುನಿಕರಿಸಲು ಯುವಾನ್ ಷಿ ಕಾಯ್‌ಗೆ ನಿರ್ದೇಶಿಸಲಾಯಿತು. ಒಂದು ಸಂವಿಧಾನ ಮತ್ತು ಪ್ರಾತನಿಧಿಕ ಸರ್ಕಾರವನ್ನು ಸ್ಥಾಪಿಸುವ ಭರವಸೆಯನ್ನು ರಾಣಿ ನೀಡಿದಳು.

ಬಹುತೇಕ ಸಂದರ್ಭಗಳಲ್ಲಿ ಸುಧಾರಣೆಗಳ ಬಗೆಗಿನ ಭರವಸೆಗಳು ಕಾಗದದ ಹಂತವನ್ನು ದಾಟಲೇ ಇಲ್ಲ. ಸಮರ್ಥ ನಾಯಕತ್ವ, ಪರಿಸ್ಥಿತಿಯ ಅರಿವು ಮತ್ತು ಪ್ರಾಮಾಣಿಕ ಉದ್ದೇಶವಿದ್ದಿದ್ದರೆ ಈ ರಾಜವಂಶ ಅಗತ್ಯ ಬದಲಾವಣೆಗಳನ್ನು ಜಾರಿಗೊಳಿಸುತ್ತಿತ್ತು. 1908 ರ ನವೆಂಬರ್ 15ರಂದು ಚಕ್ರವರ್ತಿ ಮತ್ತು ವಿಧವಾ ರಾಣಿ ಮರಣ ಹೊಂದಿದರು. ಹಸುಳೆ ಪೂಯಿ ಅಧಿಕಾರಕ್ಕೆ ಬಂದನು. ಯಾವುದೇ ವ್ಯಕ್ತಿ ಅಥವಾ ಆಸ್ಥಾನದ ಯಾವುದೇ ಗುಂಪು 1911 ರ ಕ್ರಾಂತಿಯನ್ನು ತಡೆಯುವ ಅಥವಾ ನಿಯಂತ್ರಿಸುವ ವಿವೇಕ ಅಥವಾ ಸಾಮರ್ಥ್ಯವನ್ನು ಹೊಂದಿರಲಿಲ್ಲ. ಈ ಕ್ರಾಂತಿ ಮಂಚುಗಳನ್ನು ಪದಚ್ಯುತಗೊಳಿಸಿತು ಮತ್ತು 1912 ರಲ್ಲಿ ಗಣರಾಜ್ಯವನ್ನು ಸ್ಥಾಪಿಸಿತು.

## 127.8 ಘಟಕದ ಸಾರಾಂಶ

ಈ ಘಟಕದಲ್ಲಿ ನೀವು ಮಂಚೂರಿಯಾದಿಂದ ಬಂದ ಮಂಚುಗಳು ಕ್ರಿ.ಶ. 1644 ರಿಂದ ಡಾ. ಸನ್‌ಯಾತ್‌ಸೇನ್‌ರ ಏಳಿಗೆಯವರೆಗೆ ಚೀನಾವನ್ನು ಆಳಿದ್ದರ ಬಗೆಗೆ ತಿಳಿದುಕೊಂಡಿದ್ದೀರಿ. ಹತ್ತು ಅರಸರ ಈ ವಂಶ ಚೀನಾದ ಕೊನೆಯ ರಾಜಮನೆತನವಾಗಿತ್ತು. ಪ್ರಾರಂಭದ ಮಂಚು ಅರಸರು ಸಮರ್ಥರಾಗಿದ್ದರು ಮತ್ತು ಉದಾರಿಗಳು ಹಾಗೂ ಪ್ರಗತಿಪರರು ಆಗಿದ್ದರು. ಅವರು ಚೀನಾದ ಗಡಿಗಳನ್ನು ವಿಸ್ತರಿಸಿದ್ದಲ್ಲದೆ ಚೀನಾದ ಘನತೆಯನ್ನು ಹೆಚ್ಚಿಸಿದರು. ಅವರ ಕಾಲದಲ್ಲಿ ಚೀನಿ ಸಾಮ್ರಾಜ್ಯ ತನ್ನ ವೈಭವದ ಶಿಖರವನ್ನು ತಲುಪಿತು.

ಅಲ್ಲದೆ ಕ್ಯಾಂಗ್-ಷಿ (1661-1722) ಮತ್ತು ಚೀನ್ ಲುಂಗ್ (1735-1796) ಚೀನಾ ಸಾಮ್ರಾಜ್ಯವನ್ನು ವಿಸ್ತರಿಸಿದರು. ಐರೋಪ್ಯರು, ಚೀನಾದೊಂದಿಗೆ ವ್ಯಾಪಾರ ಸಂಪರ್ಕ ಹೊಂದಲು ತೀವ್ರ ಆಸಕ್ತಿ ಹೊಂದಿದ್ದರು. ಆದರೆ ಚೀನೀಯರಿಂದ ತೀವ್ರ ವಿರೋಧ ವ್ಯಕ್ತವಾಯಿತು. ನಿಯಮಿತವಾದ ವ್ಯಾಪಾರಕ್ಕೆ ಚಕ್ರವರ್ತಿ ಸಮ್ಮತಿಸಿದನು ಮತ್ತು ಕ್ಯಾಂಟನ್ ಮೂಲಕ ಮಾತ್ರ ವ್ಯಾಪಾರಕ್ಕೆ ಅವಕಾಶ ನೀಡಲಾಯಿತು. ಆದರೆ ಐರೋಪ್ಯರು ಈ ಬಗೆಯ ನಿರ್ಬಂಧಗಳಿಂದ ಕೂಡಿದ ವ್ಯಾಪಾರಕ್ಕೆ ಒಪ್ಪಿಗೆ ಸೂಚಿಸಲು ಸಿದ್ಧರಾಗಿರಲಿಲ್ಲ.

ಮಂಚು ವಂಶದ ಪತನದ ಕಾರಣಗಳು, 1911 ರ ಕ್ರಾಂತಿ ಹೇಗೆ ಮಂಚುಗಳನ್ನು ಪದಚ್ಯುತಿಗೊಳಿಸಿತು ಮತ್ತು 1912 ರಲ್ಲಿ ಚೀನಾದಲ್ಲಿ ಗಣರಾಜ್ಯವನ್ನು ಸ್ಥಾಪಿಸಿತು ಎಂಬುದನ್ನು ನೀವು ಅರಿತುಕೊಂಡಿರುವಿರಿ.

## 127.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಉತ್ತರಗಳು

ಕೆಳಗಿನ ಹೇಳಿಕೆಗಳನ್ನು ಓದಿ ಮತ್ತು ಸರಿ ( ) ಅಥವಾ ತಪ್ಪು ( ) ಗುರುತಿಸಿ.

1) ಹಾಂಗ್‌ಕಾಂಗ್ ಮಂಚುಗಳ ಮೂಲ ಸ್ಥಾನವಾಗಿತ್ತು ( )

2) ಮಂಚುವಂಶ ಹತ್ತು ಚಕ್ರವರ್ತಿಗಳನ್ನು ಹೊಂದಿತು( )

3) ತ್ಜು-ಷಿ ಕ್ಯಾಂಟನ್‌ನ ಗೌರ್ನರ್ ಆಗಿದ್ದಳು ( )

4) ವಿಧವಾ ರಾಣಿ 1908 ರಲ್ಲಿ ಮರಣ ಹೊಂದಿದಳು ( )

5) 1911 ರ ಕ್ರಾಂತಿ ಮಂಚು ಆಡಳಿತವನ್ನು ಅಂತ್ಯಗೊಳಿಸಿತು ( )

*II ಈ ಕೆಳಗಿನವುಗಳಿಗೆ 15 ಸಾಲುಗಳ ಉತ್ತರ ಬರೆಯಿರಿ.*

1. ಚೀನಾದ ಮಂಚು ವಂಶದ ಏಳಿಗೆಯನ್ನು ವಿವರಿಸಿ.
2. ಅಫೀಮು ಯುದ್ಧಗಳಿಗೆ ಮುಂಚೆ ಯುರೋಪ್‌ನೊಂದಿಗೆ ಚೀನಾದ ಸಂಬಂಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

## 127.10 ಪರಾಮರ್ಶನ ಗ್ರಂಥಗಳು


1. Carrington .L.Goodrich : A Short History of Chinese People
2. Clog Arethus : The Birth of New China
3. Fitzegerald .C.P. : China, A Short Cultural History


*ಮೂಲ: ಎಸ್. ಮೀರ್ ಸಮಿವುಲ್ಲ*
*ಅನುವಾದಕರು: ಬಿ. ಪರಮೇಶ್ವರ*

# ಟಿಪ್ಪಣಿಗಳು

## ಘಟಕ - 128

# ಚೀನಾ ಮತ್ತು ಪಶ್ಚಿಮ ರಾಷ್ಟ್ರಗಳು (1839 ರವರೆಗೆ)

ರಚನೆ


128.0 ಉದ್ದೇಶಗಳು

128.1 ಪೀಠಿಕೆ

128.2 ಚೀನಾಕ್ಕೆ ಐರೋಪ್ಯರ ಆಗಮನ

128.3 ಚೀನಾದ ವ್ಯಾಪಾರದ ಸಮಸ್ಯೆಗಳು

128.4 ವಿದೇಶ ವ್ಯಾಪಾರದ ಸಮಸ್ಯೆಗಳು

128.5 ಪೋರ್ಚುಗೀಸರು ಮತ್ತು ಸ್ಪ್ಯಾನಿಷರು

128.6 ಡಚ್ಚರು, ಫ್ರೆಂಚರು ಮತ್ತು ಬ್ರಿಟಿಷರು

128.7 ಕ್ಯಾಂಟನ್ ವ್ಯಾಪಾರ

128.8 ಘಟಕದ ಸಾರಾಂಶ

128.9 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

128.10 ಪರಾಮರ್ಶನ ಗ್ರಂಥಗಳು

## 128.0 ಉದ್ದೇಶಗಳು

ಅಫೀಮು ಯುದ್ಧಕ್ಕೆ ಮುಂಚಿನ ಯುರೋಪ್ ಚೀನಾ ಸಂಬಂಧಗಳನ್ನು ಚರ್ಚಿಸುವುದು ಈ ಘಟಕದ ಉದ್ದೇಶವಾಗಿದೆ. ಹಿಂದೆ ಯಾವಾಗಲೂ ಚೀನಾ ಅನುಕೂಲಕರವಾದ ವ್ಯಾಪಾರ ಸಂಬಂಧ ಹೊಂದಿತ್ತು. ಚೀನಾದ ವರ್ತಕರು ರೇಷ್ಮೆ ವ್ಯಾಪಾರಕ್ಕಾಗಿ ಯುರೋಪಿನ ಮಾರುಕಟ್ಟೆಗಳಿಗೆ ಹೋಗುತ್ತಿದ್ದರು. ಈಗ ಚೀನಾದ ಸಮಸ್ಯೆ ಯಾವುದೆಂದರೆ ಐರೋಪ್ಯ ದೇಶಗಳೊಂದಿಗೆ ವ್ಯಾಪಾರವನ್ನು ಹೇಗೆ ನಿಯಂತ್ರಿಸಬಹುದು ಎಂಬುದು, ಜೊತೆಗೆ ಈ ಘಟಕದಲ್ಲಿ ಚೀನಾದ ಸಾಮ್ರಾಟ 1685 ರಲ್ಲಿ ನಿಬಂಧನೆಗಳಿಗೊಳಪಟ್ಟ ಕೆಲವು ರಿಯಾಯಿತಿಗಳನ್ನು ವಿದೇಶಿ ವರ್ತಕರಿಗೆ ನೀಡಿದ್ದು ಮತ್ತು ಕ್ಯಾಂಟನ್ ಬಂದರಿನ ಮೂಲಕ ಮಾತ್ರ ವ್ಯಾಪಾರ ನಡೆಸಲು ಅನುಮತಿ ನೀಡಿದ ಬಗೆಗೆ ತಿಳಿದುಕೊಳ್ಳಬಹುದು.

ಚೀನೀಯರಿಗೆ ಮಾರಲು ತಮ್ಮ ಬಳಿ ಏನೂ ಇಲ್ಲ ಎಂಬುದು ಐರೋಪ್ಯ ವರ್ತಕರ ಸಮಸ್ಯೆಯಾಗಿತ್ತು. ಅಲ್ಲದೆ ಅವರು ವ್ಯಾಪಾರದ ಮೇಲೆ ಚೀನಿ ಚಕ್ರವರ್ತಿ ವಿಧಿಸಿದ್ದ ನಿರ್ಬಂಧಗಳನ್ನು ಒಪ್ಪಿಕೊಳ್ಳಲು ಸಿದ್ಧರಾಗಿರಲಿಲ್ಲ. ಕ್ಯಾಂಟನ್‌ನಲ್ಲಿ ಐರೋಪ್ಯರ ಮೇಲೆ ವಿಧಿಸಲಾಗಿದ್ದ ನಿರ್ಬಂಧಗಳು ಸಹಿಸಲಸಾಧ್ಯವಾಗಿದ್ದವು. ಅವುಗಳು, ಚೀನೀಯರು ಐರೋಪ್ಯರನ್ನು ಕೆಳದರ್ಜೆಯವರು ಎಂದು ಪರಿಗಣಿಸಿದ್ದರೆಂಬುದರ ಸೂಚನೆಗಳಾಗಿದ್ದವು.

## 128.1 ಪೀಠಿಕೆ

19 ನೇ ಶತಮಾನದವರೆಗೆ ಚೀನಾದಲ್ಲಿ ಐರೋಪ್ಯರಿಗೆ ಪ್ರವೇಶವಿರಲಿಲ್ಲ. ಈ "ಸ್ವರ್ಗೀಯ ಸಾಮ್ರಾಜ್ಯ" ಪ್ರಪಂಚದ ಅತ್ಯಂತ ಪ್ರಾಚೀನ ಸಾಮ್ರಾಜ್ಯಗಳಲ್ಲೊಂದಾಗಿತ್ತು ಮತ್ತು ಇಡೀ ಯುರೋಪಿಗಿಂತಲೂ ಹೆಚ್ಚು ವಿಸ್ತಾರ ಮತ್ತು ಜನಸಂಖ್ಯೆಯನ್ನು ಹೊಂದಿತ್ತು. ಉನ್ನತ ನಾಗರಿಕತೆ ಹೊಂದಿದ್ದ ಚೀನೀಯರು ಐರೋಪ್ಯ ಶೋಷಕರಿಗಿಂತಲೂ ಶತಮಾನಗಳ ಮೊದಲೇ ದಿಕ್ಸೂಚಿ, ಸಿಡಿಮದ್ದು, ಪಿಂಗಾಣಿ ಕಾಗದ ಮೊದಲಾದುವನ್ನು ಬಳಸಿದ್ದರು. ತಮ್ಮ ಪ್ರಾಚೀನ ಸಂಸ್ಕೃತಿಯ ಬಗೆಗೆ ಅಭಿಮಾನ ಹೊಂದಿದ್ದ ಚೀನೀಯರು ಗ್ರೀಕರಂತೆ ಎಲ್ಲ ವಿದೇಶಿಯರನ್ನು ಅನಾಗರಿಕರೆಂದು ಉಪೇಕ್ಷಿಸಿದರು. ಆದ್ದರಿಂದಲೇ ಅವರ ನಾಗರಿಕತೆ, ಹಲವು ವಿಷಯಗಳಲ್ಲಿ ಅತ್ಯುತ್ತಮವಾಗಿದ್ದರೂ, ಹೊರ ಪ್ರಪಂಚದೊಂದಿಗೆ ಬಲವಾದ ಸಂಪರ್ಕದಿಂದ ದೊರೆಯಬಹುದಾಗಿದ್ದ ಉತ್ತೇಜನದಿಂದ ವಂಚಿತವಾಗಿತ್ತು. ಅದರ ಅನಿವಾರ್ಯ ಪರಿಣಾಮವೇ ಜಡತೆ. ಚೀನಾ, ಗರ್ವದ ಏಕಾಂತತೆಯಲ್ಲಿ ತನ್ನನ್ನು ಮುಚ್ಚಿಕೊಳ್ಳಲು ಯತ್ನಿಸಿತು. ವಿದೇಶೀಯರ ಬಗೆಗೆ ತಿರಸ್ಕಾರ ಮತ್ತು ಅವರ ಸ್ನೇಹ ಹಸ್ತಕ್ಕೆ ವಿರೋಧ ಸೂಚಿಸುತ್ತಾ ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಳ್ಳಲು ಯತ್ನಿಸಿತು. ಆದರೆ 15 ನೇ ಶತಮಾನದ ಭೌಗೋಳಿಕ ಅನ್ವೇಷಣೆಗಳ ಪರಿಣಾಮವಾಗಿ ಸಮುದ್ರಯಾನ ಸುಗಮಗೊಂಡು ಐರೋಪ್ಯರು ಪೂರ್ವ ಏಷ್ಯಾದಲ್ಲಿ ಕಾಣಿಸಿಕೊಳ್ಳಲಾರಂಭಿಸಿತು.

16 ನೇ ಶತಮಾನದಲ್ಲಿ ಪೋರ್ಚುಗೀಸರು ಚೀನಾದ ದಕ್ಷಿಣ ಕರಾವಳಿಯಲ್ಲಿ ಕಾಣಿಸಿಕೊಂಡರು ಮತ್ತು ಮೆಕಾವ್‌ನಲ್ಲಿ ನೆಲೆಗೊಂಡರು ಹಾಗೂ ಇನ್ನೂ ಅಲ್ಲಿಯೇ ಇದ್ದಾರೆ. ಮುಂದಿನ ಶತಮಾನದಲ್ಲಿ ಡಚ್ಚರು ಫಾರ್ಮೋಸ ದ್ವೀಪದಲ್ಲಿ ನೆಲೆಗೊಂಡರು ಮತ್ತು ಬ್ರಿಟಿಷರು ಕ್ಯಾಂಟನ್ ನಗರಕ್ಕೆ ಆಗಮಿಸಿದರು. ಮಂಚು ಸರ್ಕಾರ ಈ ವಿದೇಶಿಯರನ್ನು ಅಸ್ವಾಗತಾರ್ಹ ಅತಿಕ್ರಮಣಕಾರರೆಂದು ಪರಿಗಣಿಸಿತು, ಅವಹೇಳನ ಮಾಡಿತು ಮತ್ತು ಹೆಚ್ಚಿನ ತೆರಿಗೆಗಳು ಹಾಗೂ ಪೀಡಿಸುವ ನಿರ್ಬಂಧಗಳಿಂದ ಅವರ ವ್ಯಾಪಾರವನ್ನು ಅಡ್ಡಿಪಡಿಸಿತು.

## 128.2 ಚೀನಾಕ್ಕೆ ಐರೋಪ್ಯರ ಆಗಮನ

18 ಮತ್ತು 19 ನೇ ಶತಮಾನಪಲ್ಲಿ ಚೀನಾಕ್ಕೆ ಐರೋಪ್ಯರ ಆಗಮನ ಆದೇಶದ ಇತಿಹಾಸದ ಮೇಲೆ ಗಮನಾರ್ಹ ಪ್ರಭಾವ ಬೀರಿತು. ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಬ್ರಿಟಿಷರು ಮೊದಲಾದ ಪಾಶ್ಚಾತ್ಯರ ಮುಖ್ಯವಾದ ಗುರಿ ಚೀನಾದೊಂದಿಗೆ ವ್ಯಾಪಾರ ಸಂಬಂಧ ಸ್ಥಾಪಿಸಿಕೊಳ್ಳುವುದಾಗಿತ್ತು. ಚೀನಾದ ವಸ್ತುಗಳು ಯೂರೋಪಿನಲ್ಲಿ 19 ನೇ ಶತಮಾನದಲ್ಲಿ ಅಪಾರ ಜನಪ್ರಿಯವಾಗಿದ್ದರಿಂದ ಚೀನಾವನ್ನು ಪ್ರತ್ಯೇಕವಾಗಿ ಉಳಿಸುವುದು ಕಠಿಣವಾಗಿತ್ತು. ಚೀನಾದ ದಂತದ ಬೀಸಣಿಕೆಗಳು, ಪಿಂಗಾಣಿಯ ಪುಷ್ಪಕುಂಭಗಳು, ಚಹ, ರೇಷ್ಮೆ ಮೊದಲಾದ ವಸ್ತುಗಳಿಗೆ ಯುರೋಪಿನಲ್ಲಿ ಅಪಾರವಾದ ಬೇಡಿಕೆಯಿತ್ತು. ವಾಸ್ತವವಾಗಿ ಪಾಶ್ಚಾತ್ಯರು ಚೀನೀಯರ ಪಗೋಡ

ಮಾದರಿಯ ಬೇಸಿಗೆ ಮನೆಗಳನ್ನು ನಿರ್ಮಿಸಿ, ಚೀನಿ ಮಾದರಿ ಹೂತೋಟಗಳನ್ನು ಮಾಡಿ ಮತ್ತು ತಮ್ಮ ಮನೆಗಳನ್ನು ಚೀನೀಯರ ಗೋಡೆ ಕಾಗದದಿಂದ ಶೃಂಗರಿಸುವ ಮೂಲಕ ಚೀನೀಯರನ್ನು ಅನುಕರಿಸಲಾರಂಭಿಸಿದ್ದರು.

ಮತ್ತೊಂದು ಮಹತ್ವದ ವಿಷಯವೆಂದರೆ 1840 ರ ವೇಳೆಗೆ ಯುರೋಪಿನ ಕಾರ್ಖಾನೆಗಳಲ್ಲಿ ಯಂತ್ರಗಳು ಭಾರೀ ಪ್ರಮಾಣದಲ್ಲಿ ಸರಕುಗಳು ಉತ್ಪಾದಿಸುತ್ತಿದ್ದವು. ಯುರೋಪಿನ ಪ್ರಬಲ ರಾಷ್ಟ್ರಗಳು ಚೀನಾವನ್ನು ತನ್ನ ಬಂದರುಗಳನ್ನು ಐರೋಪ್ಯರ ವ್ಯಾಪಾರಕ್ಕೆ ತೆರೆಯುವಂತೆ ಒತ್ತಾಯಿಸಿದವು. ಚೀನಾ ಸಾಂಪ್ರದಾಯಿಕ ವಸ್ತುಗಳಿಂದ ಶ್ರೀಮಂತವಾಗಿತ್ತು ಮತ್ತು ಅಪಾರ ಜನ ಸಂಖ್ಯೆಯನ್ನು ಹೊಂದಿತ್ತು. ಐರೋಪ್ಯರು ಭೂಮಿ ಮತ್ತು ಸಮುದ್ರ ಮಾರ್ಗಗಳಿಂದ ಆಗಮಿಸಿದರು. ಪೋರ್ಚುಗೀಸರು, ಸ್ಪ್ಯಾನಿಷರು, ಡಚ್ಚರು, ಫ್ರೆಂಚರು ಮತ್ತು ಬ್ರಿಟಿಷರು ಮತ್ತು ಕೆಲವು ಭಾರತೀಯರು ಹಾಗೂ ಜರ್ಮನ್ನರು, ಸಮುದ್ರ ಮಾರ್ಗದಿಂದ ಆಗಮಿಸಿದರು. ಅಮೇರಿಕನ್ನರು 1784 ರ ನಂತರ ಬಂದರು. ಕೆಲವರು ವ್ಯಾಪಾರಕ್ಕಾಗಿ ಬಂದರೆ ಕೆಲವರು ಕ್ರೈಸ್ತ ಧರ್ಮ ಪ್ರಚಾರಕ್ಕಾಗಿ ಬಂದರು.

## 128.3 ಚೀನಾದ ವ್ಯಾಪಾರ ಸಮಸ್ಯೆಗಳು

ಹಲವಾರು ಐರೋಪ್ಯ ದೇಶಗಳು ಚೀನಾದೊಂದಿಗೆ ವ್ಯಾಪಾರ ನಡೆಸಲು ಆಸಕ್ತವಾಗಿದ್ದರಿಂದ ಈ ವ್ಯಾಪಾರವನ್ನು ಹೇಗೆ ನಿಯಂತ್ರಿಸಬೇಕೆಂಬುದು ಒಂದು ಸಮಸ್ಯೆಯಾಯಿತು. ಚೀನೀಯರು ಅತಿಥಿ ಸತ್ಕಾರಕ್ಕೆ ಹೆಸರಾಗಿದ್ದರು ಮತ್ತು ಅವರು ವ್ಯಾಪಾರ ವಿಷಯಗಳ ಬಗೆಗೆ ಅಷ್ಟೇನು ಆಸಕ್ತಿ ವಹಿಸುತ್ತಿರಲಿಲ್ಲ. ಆದರೆ ಪರಿಸ್ಥಿತಿ ಭಿನ್ನವಾಗಿತ್ತು. ಐರೋಪ್ಯ ವರ್ತಕರು ರಾಜಕೀಯ ಉದ್ದೇಶಗಳನ್ನು ಹೊಂದಿದ್ದುದು ಚೀನಿ ಸಾಮ್ರಾಟರ ತೀವ್ರ ಆತಂಕಕ್ಕೆ ಕಾರಣವಾಯಿತು. ತಮ್ಮ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಅವರು ಐರೋಪ್ಯ ದೇಶಗಳೊಂದಿಗೆ ಎಲ್ಲ ವ್ಯಾಪಾರವನ್ನು ನಿಲ್ಲಿಸಿಬಿಡುತ್ತಿದ್ದರು. ಆದರೆ ಅವರಿಗೆ ಚೀನಾದ ಕರಾವಳಿ ಪ್ರದೇಶದ ಮೇಲೆ ಪರಿಣಾಮಕಾರಿ ನಿಯಂತ್ರಣವಿರಲಿಲ್ಲ. ಆದ್ದರಿಂದ 1685 ರಲ್ಲಿ ಸಾಮ್ರಾಟ ಸ್ವಲ್ಪ ಪ್ರಮಾಣದ ನಿರ್ಬಂಧಿತ ವ್ಯಾಪಾರಕ್ಕೆ ಅವಕಾಶ ನೀಡಿದನು. ಆದರೆ ದುರ್ದೈವದಿಂದ ವರ್ತಕರು ತಮಗೆ ದೊರೆತ ಅಧಿಕಾರವನ್ನು ದುರುಪಯೋಗ ಮಾಡಿಕೊಂಡರು. ಚೀನಾದ ಆಂತರಿಕ ವ್ಯವಹಾರಗಳಲ್ಲಿಯೂ ಅವರು ಹಸ್ತಕ್ಷೇಪ ಮಾಡಲಾರಂಭಿಸಿದರು. ಈ ಹಸ್ತಕ್ಷೇಪ ತೀವ್ರಗೊಂಡ ಪರಿಣಾಮವಾಗಿ ಚಕ್ರವರ್ತಿ ಒಂದು ಘೋಷಣೆಯನ್ನು ಹೊರಡಿಸಿ ಕ್ಯಾಂಟನ್ ಬಂದರಿನ ಮೂಲಕ ಮಾತ್ರವೇ ವ್ಯಾಪಾರ ನಡೆಸುವಂತೆ ಐರೋಪ್ಯರಿಗೆ ಸೂಚಿಸಿದನು. ಈ ಘೋಷಣೆಯ ಪ್ರಕಾರ ಐರೋಪ್ಯರು ಕ್ಯಾಂಟನ್ ಬಂದರಿನ ಮೂಲಕ ಮಾತ್ರವೇ ವ್ಯಾಪಾರ ನಡೆಸಬೇಕಾಯಿತು. ಅಲ್ಲದೆ ಅವರು ಎಲ್ಲ ಚೀನಿ ವರ್ತಕರೊಂದಿಗೆ ನೇರವಾಗಿ ವ್ಯಾಪಾರ ನಡೆಸುವಂತಿರಲಿಲ್ಲ. ಆದರೆ ಚಕ್ರವರ್ತಿಯಿಂದ ನೇಮಕಗೊಂಡ ವ್ಯಾಪಾರದ ಕಮೀಷನರ್ ಮೂಲಕ ಮಾತ್ರ ವ್ಯಾಪಾರ ವಹಿವಾಟು ನಡೆಸಬೇಕಿತ್ತು. ಈ ಅಧಿಕಾರಿ ಎಲ್ಲ ಬಗೆಯ ವ್ಯಾಪಾರ ವ್ಯವಹಾರಗಳನ್ನು ಕುರಿತು ನಿರ್ಣಯ ತೆಗೆದುಕೊಳ್ಳುವ ಅಧಿಕಾರ ಹೊಂದಿದ್ದನು. ಇದರಿಂದಾಗಿ ಐರೋಪ್ಯರ ವ್ಯಾಪಾರದ ಸ್ವಾತಂತ್ರ್ಯ ತೀವ್ರವಾಗಿ ಮೊಟಕಾಯಿತು. ಆದರೂ ವರ್ತಕರು ಕ್ಯಾಂಟನ್‌ನಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿಕೊಂಡು ವ್ಯಾಪಾರ ವಹಿವಾಟು ಮುಂದುವರಿಸಿದರು. ಜೊತೆಗೆ ತಮ್ಮ ವ್ಯಾಪಾರ ವ್ಯವಹಾರದಲ್ಲಿ ಸಹಾಯ ಪಡೆಯಲು ತಮ್ಮವರೇ ಆದ ದ್ವಿಭಾಷಿಗಳನ್ನು ನೇಮಕ ಮಾಡಿದರು.

ಮುಂದಿನ ದಿನಗಳಲ್ಲಿ ಚಕ್ರವರ್ತಿ ವ್ಯಾಪಾರದ ನಿಯಮಗಳಲ್ಲಿ ಬದಲಾವಣೆಗಳನ್ನು ಮಾಡಿದನು. 13 ವರ್ತಕರನ್ನೊಳಗೊಂಡ "ಕೊ-ಹಾಂಗ್" ನ್ನು ಅವನು ನೇಮಕ ಮಾಡಿದನು. ಅದರೊಂದಿಗೆ ಐರೋಪ್ಯ ವರ್ತಕರು ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದ ಒಪ್ಪಂದಗಳನ್ನು ಅಂತಿಮಗೊಳಿಸಿಕೊಳ್ಳಬೇಕಿತ್ತು. ಹೀಗೆ ಒಬ್ಬ ವ್ಯಕ್ತಿಯ ಬದಲು 13 ಜನರಲ್ಲಿ ಯಾರಾದರೂ ಒಬ್ಬನೊಂದಿಗೆ ತಮ್ಮ ವ್ಯಾಪಾರ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳುವ ಅವಕಾಶ ಪಡೆದರು. 1757 ರಲ್ಲಿ ಚಕ್ರವರ್ತಿ ಒಂದು ಘೋಷಣೆಯ ಮೂಲಕ ಐರೋಪ್ಯರು ಕ್ಯಾಂಟನ್ ಅಲ್ಲದೆ ಇತರ ಬಂದರುಗಳ ಮೂಲಕವೂ ವ್ಯಾಪಾರ ನಡೆಸಬಹುದೆಂದು ತಿಳಿಸಿದನು.

ಚೀನೀಯರು ಯಾವಾಗಲೂ ತಮಗೆ ಅನುಕೂಲಕರವಾದ ವ್ಯಾಪಾರ ಸಮತೋಲನ ಹೊಂದಿದ್ದರು. ಐರೋಪ್ಯ ವರ್ತಕರು ತಮ್ಮನ್ನು ಕ್ಯಾಂಟಿನ್ ನಗರಕ್ಕೆ ಸೀಮಿತಗೊಳಿಸಿದ ಮತ್ತು ನಿರ್ದಿಷ್ಟ ವರ್ತಕರೊಂದಿಗೆ ಮಾತ್ರ ವ್ಯಾಪಾರ ನಡೆಸುವಂತೆ ನಿರ್ಬಂಧಿಸಿದ ಚೀನೀಯರ ಕ್ರಮದ ಬಗೆಗೆ ತೀವ್ರವಾಗಿ ಅಸಮಾಧಾನಗೊಂಡಿದ್ದರು. ಅಲ್ಲದೆ ಚೀನಾಕ್ಕೆ ಏನನ್ನೂ ರಫ್ತುಮಾಡದೆ ಕೇವಲ ಚೀನಾದಿಂದ ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿಯಿಂದಲೂ ಅವರು ಅಸಮಾಧಾನಗೊಂಡಿದ್ದರು.

## 128.4 ವಿದೇಶಿ ವ್ಯಾಪಾರದ ಸಮಸ್ಯೆಗಳು

ವಿದೇಶಿ ವರ್ತಕರು ಒಂದು ಗಂಭೀರ ಸಮಸ್ಯೆಯನ್ನು ಎದುರಿಸಬೇಕಾಯಿತು. ಎಲ್ಲ ಐರೋಪ್ಯ ಮಾರುಕಟ್ಟೆಗಳಲ್ಲೂ ಚೀನಾದ ರೇಷ್ಮೆಗೆ ಅಪಾರ ಬೇಡಿಕೆಯಿತ್ತು. ಯುರೋಪಿನ ವರ್ತಕರು ಚೀನಾದ ರೇಷ್ಮೆ, ಪಿಂಗಾಣಿ ವಸ್ತುಗಳು, ಚಹ, ಕಾಗದ ಮೊದಾಲದುವನ್ನು ಕೊಳ್ಳುತ್ತಿದ್ದರು. ಈ ವಸ್ತುಗಳಿಗೆ ಪ್ರತಿಯಾಗಿ ಚಿನ್ನ ಮತ್ತು ಬೆಳ್ಳಿಯನ್ನು ಕೊಡಬೇಕಾಗಿತ್ತು. ಆದರೆ ಚೀನೀಯರಿಗೆ ಮಾರಲು ಅವರ ಬಳಿ ಯಾವ ವಸ್ತುವೂ ಇರಲಿಲ್ಲ. ಇದು ಐರೋಪ್ಯ ವರ್ತಕರಿಗೆ ಗಂಭೀರವಾದ ಸಮಸ್ಯೆಯಾಗಿತ್ತು. ಈ ಕಾರಣದಿಂದ ಚೀನೀಯರಿಗೆ ಮಾರಬಹುದಾದ ಸರಕುಗಳಿಗಾಗಿ ಹುಡುಕಲಾರಂಭಿಸಿದರು. ಅಮೆರಿಕದ ಕಾಡುಗಳಲ್ಲಿ ಪಡೆಯಬಹುದಾಗಿದ್ದ ತುಪ್ಪಳ ಮತ್ತು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ಬೆಳೆಸುತ್ತಿದ್ದ ಅಫೀಮನ್ನು ಚೀನೀಯರಿಗೆ ಮಾರಲು ನಿರ್ಧರಿಸಿದರು. ಅಫೀಮು ರಜಪೂತರು ಮತ್ತು ಮೊಘಲರಲ್ಲಿ ಜನಪ್ರಿಯವಾಗಿತ್ತು. ಆದ್ದರಿಂದ ಅದನ್ನು ಚೀನಾದಲ್ಲೂ ಜನಪ್ರಿಯಗೊಳಿಸಬಹುದೆಂದು ಬ್ರಿಟಿಷರು ಭಾವಿಸಿದ್ದರು. ಚೀನೀಯರು ಯಾವಾಗಲೂ ಅನುಕೂಲಕರ ವ್ಯಾಪಾರ ಸಮತೋಲನ ಹೊಂದಿದ್ದರು. ಐರೋಪ್ಯ ವರ್ತಕರು, ತಮ್ಮನ್ನು ಕ್ಯಾಂಟನ್ ನಗರಕ್ಕೆ ಸೀಮಿತಗೊಳಿಸಿದ ಮತ್ತು ನಿರ್ದಿಷ್ಟ ವರ್ತಕರೊಂದಿಗೆ ಮಾತ್ರ ವ್ಯವಹರಿಸುವಂತೆ ನಿರ್ಬಂಧಿಸಿದ್ದರಿಂದ ಅಸಮಾಧಾನಗೊಂಡಿದ್ದರು. ಅಲ್ಲದೆ ಚೀನಾಕ್ಕೆ ಏನನ್ನು ರಫ್ತು ಮಾಡದೆ ಕೇವಲ ಚೀನಾದಿಂದ ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿಯಿಂದಲೂ ಅಸಮಾಧಾನಗೊಂಡಿದ್ದರು. ವಸಾಹತುಶಾಹಿ ದೇಶಗಳು ಭಾರತದಂತೆಯೇ ಚೀನಾದಲ್ಲೂ ವ್ಯಾಪಾರ ನಡೆಸಲು ಬಯಸಿದ್ದವು. ಅವು ಜಪಾನ್‌ನಲ್ಲಿ ಬಲ ಪ್ರಯೋಗ ಮಾಡಿದ್ದವು. ಆದರೆ ಚೀನೀಯರನ್ನು ವ್ಯಾಪಾರಕ್ಕೆ ಒಪ್ಪಿಕೊಳ್ಳುವಂತೆ ಮನವೊಲಿಸುವ ಪ್ರಯತ್ನ ನಡೆಸಿದವು. ಆದರೆ ಚೀನೀಯರನ್ನು ಮನವೊಲಿಸುವ ಯತ್ನ ವಿಫಲವಾಯಿತು. ಐರೋಪ್ಯರ ವ್ಯಾಪಾರದ ದಾಹವನ್ನು ತಣಿಸಲು ಚೀನೀಯರ ಮೇಲೆ ಬಲಪ್ರಯೋಗ ಮಾಡಬೇಕಾಯಿತು. ಈ ವಿಷಯದಲ್ಲಿ ಗ್ರೇಟ್‌ಬ್ರಿಟನ್ ನಾಯಕತ್ವ ವಹಿಸಿತು. ಈಸ್ಟ್ ಇಂಡಿಯಾ ಕಂಪನಿ ಚೀನಾದೊಂದಿಗೆ ಅತ್ಯಂತ ಲಾಭದಾಯಕವಾದ ಅಫೀಮು ವ್ಯಾಪಾರವನ್ನು ಆರಂಭಿಸಿತು. ಆದರೆ ಚೀನಾ ಸರ್ಕಾರ ಅಫೀಮಿನ ಆಮದನ್ನು ಪದೇ ಪದೇ ನಿಷೇಧಿಸಿತು. 1800 ರಲ್ಲಿ ಅಫೀಮು ವ್ಯಾಪಾರವನ್ನು ಕಾನೂನು ಬಾಹಿರ ಎಂದು ಘೋಷಿಸಿತು. ಆದರೂ ಬ್ರಿಟಿಷ್ ವರ್ತಕರು, ಸ್ಥಳೀಯ ಚೀನಿ ಅಧಿಕಾರಿಗಳ ಸಹಯೋಗದೊಂದಿಗೆ, ಚೀನಾಕ್ಕೆ ಅಫೀಮನ್ನು ಕಳ್ಳ ಸಾಗಣೆ ಮಾಡಲಾರಂಭಿಸಿದರು. ಈ ಪರಿಸ್ಥಿತಿಯಿಂದಾಗಿ ಚೀನಾದಲ್ಲಿ 1839 ರಲ್ಲಿ ಯುದ್ಧ ಆರಂಭವಾಯಿತು ಮತ್ತು ಎರಡು ವರ್ಷ ಮುಂದುವರಿದು ಗ್ರೇಟ್ ಬ್ರಿಟನ್ನಿನ ವಿಜಯದಲ್ಲಿ ಅಂತ್ಯಗೊಂಡಿತು. ಚೀನಾ ಹಾಂಗ್‌ಕಾಂಗ್‌ನ್ನು ಇಂಗ್ಲೆಂಡಿಗೆ ಬಿಟ್ಟುಕೊಟ್ಟಿತು ಮತ್ತು ಐದು ಹೆಚ್ಚುವರಿ ಬಂದರುಗಳನ್ನು ಐರೋಪ್ಯರ ವ್ಯಾಪಾರಕ್ಕೆ ತೆರೆಯಿತು. ಬ್ರಿಟಿಷರ ವಿಜಯದ ಲಾಭವನ್ನು ಹಂಚಿಕೊಳ್ಳಲು ಅಮೆರಿಕನ್ನರು ಮತ್ತು ಫ್ರೆಂಚರು 1844 ರಲ್ಲಿ ಆಗಮಿಸಿದರು. ಒಂದು ದಶಕದ ನಂತರ ಹಾಲೆಂಡ್, ಬೆಲ್ಜಿಯಂ, ಪೋರ್ಚುಗಲ್ ಮತ್ತು ಪ್ರಷ್ಯ ಚೀನಾದ ಐದು ಮುಕ್ತ ಬಂದರುಗಳಲ್ಲಿ ವ್ಯಾಪಾರ ನಡೆಸುವ ಅವಕಾಶ ಪಡೆದುಕೊಂಡವು. ಹೀಗೆ ಬ್ರಿಟಿಷ್ ಫಿರಂಗಿಗಳು ಸೃಷ್ಟಿಸಿದ ಬಿರುಕುಗಳ ಮೂಲಕ ಅಫೀಮು ಮಾತ್ರ ಚೀನಾವನ್ನು ಪ್ರವೇಶಿಸಲಿಲ್ಲ, ಇತರ ಐರೋಪ್ಯರೂ ಪ್ರವೇಶಿಸಿದರು.

## 128.5 ಪೋರ್ಚುಗೀಸರು ಮತ್ತು ಸ್ಪಾನಿಷರು

ಚೀನಾಕ್ಕೆ ಆಗಮಿಸಿದ ಐರೋಪ್ಯರಲ್ಲಿ ಪೋರ್ಚುಗೀಸರೇ ಮೊದಲಿಗರು. 1517 ರಲ್ಲಿ ಅವರು ಥಾಮಸ್ ಪೈರ್ಸ್ ನಾಯಕತ್ವದಲ್ಲಿ ಒಂದು ಅಧಿಕೃತ ನಿಯೋಗವನ್ನು ಮೆಣಸು ತುಂಬಿದ ಹಡಗಿನಲ್ಲಿ ಕ್ಯಾಂಟನ್‌ಗೆ ಕಳುಹಿಸಿದರು. ಕ್ಯಾಂಟನ್ನಿನ ಜನರು ಅವನನ್ನು ಒಪ್ಪಿಕೊಂಡರು ಮತ್ತು ಅವನು ಪೀಕಿಂಗ್ ನಗರಕ್ಕೂ ಭೇಟಿ ನೀಡಿದನು. ವ್ಯಾಪಾರದ ಲಾಭವೇ ಅದಕ್ಕೆ ಪ್ರೇರಣೆಯಾಯಿತು. ಆದರೆ ದುರ್ದೈವದಿಂದ ಪೋರ್ಚುಗೀಸರು ಅರಬರೊಂದಿಗೆ ನಡೆದುಕೊಂಡಿದ್ದಂತೆಯೇ ಚೀನಾದಲ್ಲಿಯೂ ನಡೆದುಕೊಂಡರು. ಅವರು ಉದ್ಧಟತನ ಮತ್ತು ಕ್ರೂರವಾಗಿ ವರ್ತಿಸಿದರು ಮತ್ತು ಚೀನೀಯರನ್ನು ಕ್ರೈಸ್ತರಲ್ಲದವರು ಮತ್ತು ತಮ್ಮ ನ್ಯಾಯಬದ್ಧ ಬಲಿ ಎಂದು ಭಾವಿಸಿದರು. ಈ ಕಾರಣದಿಂದ ಪೈರ್ಸ್‌ನನ್ನು ಕ್ಯಾಂಟನ್‌ಗೆ ಕಳುಹಿಸಿ ಅಲ್ಲಿ ಬಂಧನದಲ್ಲಿಡಲಾಯಿತು. ಬಂದನದಲ್ಲಿಯೇ ಅವನು ಮರಣ ಹೊಂದಿದನು. ಎಲ್ಲ ಚೀನಿ ಬಂದರುಗಳಿಂದ ಪೋರ್ಚುಗೀಸರನ್ನು ಹೊರದೂಡಲಾಯಿತು. ಆದರೂ ಅವರು ಅಧಿಕಾರಿಗಳಿಗೆ ಅಪಾರ ಲಂಚ ನೀಡುವ ಮೂಲಕ ಕ್ಯಾಂಟನ್ ಸಮೀಪ ನಿರ್ಜನವಾದ ಮಕಾವ್‌ನಲ್ಲಿ ನೆಲೆಗೊಂಡರು. 1580 ರಲ್ಲಿ ಸ್ಪೈನ್‌ನ 2ನೇ ಫಿಲಿಪ್ ಪೋರ್ಚುಗಲ್ಲನ್ನು ವಶಪಡಿಸಿಕೊಳ್ಳುವುದರೊಂದಿಗೆ ಪೋರ್ಚುಗಲ್‌ನ ಪ್ರಾಮುಖ್ಯತೆ ಅಂತ್ಯಗೊಂಡಿತು.

ಸ್ಪೈನ್‌ನ ನಾವಿಕರು ಪರ್ಯಾಯ ಮಾರ್ಗವನ್ನು ಬಳಸಿಕೊಂಡು ಪಶ್ಚಿಮಾಭಿಮುಖವಾಗಿ ಪ್ರಯಾಣಿಸಿ ಹೊಸ ವಿಶ್ವ ಮತ್ತು ಪೆಸಿಫಿಕ್ ಸಾಗರದ ಮೂಲಕ ಫಿಲಿಪೈನ್ಸ್ ತಲುಪಿದರು. ಅಲ್ಲಿಂದ ಅವರು ಚೀನಾದೊಂದಿಗೆ ಸಂಪರ್ಕ ಸ್ಥಾಪಿಸಿಕೊಂಡರು. ಈ ಸಾಧನೆಗೆ ಕಾರಣನಾದವನು ಫರ್ಡಿನೆಂಡ್ ಮಗೆಲಾನ್. ಆದರೆ ಸ್ಪಾನಿಷರಿಗೆ ಚೀನಾ ಪ್ರವೇಶಿಸುವುದು ಸಾಧ್ಯವಾಗಲಿಲ್ಲ. ಏಕೆಂದರೆ ಚೀನಾ ಈಗಾಗಲೇ ಪೋರ್ಚುಗೀಸರ ಪ್ರಭಾವ ವಲಯದಲ್ಲಿತ್ತು. ಕೆಲವು ಸ್ಪಾನಿಷರು ಈ ನಿಷೇಧವನ್ನು ಉಲ್ಲಂಘಿಸಿದರು ಮತ್ತು ಚೀನಾವನ್ನು ಆಕ್ರಮಿಸುವ ಕನಸು ಕಂಡರು. ಆದರೆ ಅವರ ಎಲ್ಲ ಯೋಜನೆಗಳು ವಿಫಲವಾದವು. ಪೋರ್ಚುಗಿಸರು ಮತ್ತು ಸ್ಪಾನಿಷರ ಜೊತೆಯಲ್ಲಿ ಕ್ರೈಸ್ತ ಧರ್ಮ ಪ್ರಚಾರಕರು ದೂರ ಪ್ರಾಚ್ಯಕ್ಕೆ ಬಂದರು. ಫ್ರಾನ್ಸಿಸ್ ಕ್ಸೆವಿಯರ್ 1552 ರಲ್ಲಿ ಮಕಾವ್‌ನಲ್ಲಿ ಮರಣ ಹೊಂದಿದನು. 1580 ರಲ್ಲಿ ಮಾಟಿನ್ ಇಗ್ನೇಟಿನ್ಸ್ ಚೀನಾದ ಸಾಮ್ರಾಟನನ್ನು ಭೇಟಿಯಾಗಲು ಆಗಮಿಸಿದನು. ಎರಡು ವರ್ಷಗಳ ನಂತರ ಇಟಲಿಯ ಖಗೋಳಶಾಸ್ತ್ರ ಮತ್ತು ಗಣಿತಶಾಸ್ತ್ರದ ವಿದ್ಯಾರ್ಥಿ ಮಾಟ್ಟಿಯೋ ರೀಯಿ ಮಕಾವ್‌ಗೆ ಬಂದನು. ಮೊದಲು ಅವನು ಒಬ್ಬ ಬೌದ್ಧ ಯತಿಯಂತೆ ಮತ್ತು ನಂತರ ಕನ್‌ಫ್ಯೂಷಿಯಸ್ ವಿದ್ವಾಂಸನಂತೆ ವೇಷ ಧರಿಸಿದನು. ಅವನು ಚೀನಿ ಭಾಷೆಯನ್ನು ಕಲಿತನು ಮತ್ತು 20 ವರ್ಷಗಳ ನಂತರ ಪೀಕಿಂಗ್‌ಗೆ ತೆರಳಿದನು. ಅವನು ಗಡಿಯಾರ, ವಿಜ್ಞಾನ, ಭೂಗೋಳಶಾಸ್ತ್ರ, ವಾಸ್ತುಶಿಲ್ಪ ಮತ್ತು ಗಣಿತಶಾಸ್ತ್ರದ ಐರೋಪ್ಯರ ಪರಿಣಿತಿಯನ್ನು ತನ್ನೊಂದಿಗೆ ಕೊಂಡೊಯ್ದನು. ಅವನು ಆಸ್ಥಾನ ಜ್ಯೋತಿಷ್ಯಕಾರರಿಗೆ ಸಹಾಯ ಮಾಡಿದನು. ಚೀನೀಯರ ಪಂಚಾಂಗವನ್ನು ನವೀಕರಿಸಿದನು ಮತ್ತು ವಿಶ್ವದ ನೂತನ ನಕ್ಷೆಯನ್ನು ತಯಾರಿಸಿ, ಬುದ್ಧಿವಂತಿಕೆಯಿಂದ ಚೀನಾವನ್ನು ಕೇಂದ್ರ ಸ್ಥಾನದಲ್ಲಿ ತೋರಿಸಿದನು. ಇತರ ಧಾರ್ಮಿಕ ಪಂಥಗಳ ಪ್ರಚಾರಕರೂ ಚೀನಾಕ್ಕೆ ಆಗಮಿಸಿದರು. ಅವರುಗಳು ಚೀನೀಯರ ಧಾರ್ಮಿಕ ನಂಬಿಕೆಗಳನ್ನು ಟೀಕಿಸಲಾರಂಭಿಸಿದಾಗ ಮಂಚು ಚಕ್ರವರ್ತಿ ಅವರನ್ನು ಹೊರದೂಡಿದನು.

## 128.6 ಡಚ್ಚರು, ಫ್ರೆಂಚರು ಮತ್ತು ಬ್ರಿಟಿಷರು

ಪೋರ್ಚುಗೀಸರು ಮತ್ತು ಸ್ಪಾನಿಷರು ವಸಾಹತುಶಾಹಿ ವಿಸ್ತರಣೆಯ ಪ್ರಥಮ ಅಲೆಯಾದರೆ, ಡಚ್ಚರು, ಫ್ರೆಂಚರು ಮತ್ತು ಬ್ರಿಟಿಷರು ದ್ವಿತೀಯ ಅಲೆಯಾಗಿದ್ದರು. ಡಚ್ಚರು, ಸ್ಪೈನ್‌ನಿಂದ ಸ್ವಾತಂತ್ರ್ಯಪಡೆದ ನಂತರ, ಲಿಸ್ಬನ್ ಮುಕ್ತ ಮಾರುಕಟ್ಟೆಯಲ್ಲಿ ಸಾಂಬಾರ ಪದಾರ್ಥಗಳನ್ನು ಕೊಳ್ಳುವ ಮತ್ತು ಮಾರುವ ತಮ್ಮ ಹಕ್ಕನ್ನು ಕಳೆದುಕೊಂಡರು. ಅವರು ಪೋರ್ಚುಗೀಸರಿಗೆ ಭೂಗೋಳಶಾಸ್ತ್ರಜ್ಞರು, ನಾವಿಕರು, ಬ್ಯಾಂಕರ್‌ಗಳು ಮತ್ತು ನಕ್ಷೆ ತಯಾರಿಸುವವರಾಗಿ ಕೆಲಸ ಮಾಡಿದ್ದರಿಂದ ಈಗ ತಾವೇ ದೂರ ಪ್ರಾಚ್ಯದ ಲಾಭದಾಯಕ ವ್ಯಾಪಾರದಲ್ಲಿ ತೊಡಗಲು ನಿರ್ಧರಿಸಿದರು. ಅವರು ಜಾವ ಮತ್ತು ಸುಮಾತ್ರದಲ್ಲಿ ತಮ್ಮ ಅಧಿಕಾರ ಸ್ಥಾಪಿಸಿಕೊಂಡರು. ಚಹ, ರೇಷ್ಮೆ ಮತ್ತು ಪಿಂಗಾಣಿಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಡಚ್ಚರು ಚೀನಾದೊಂದಿಗೆ ವ್ಯಾಪಾರಕ್ಕಾಗಿ ತೀವ್ರ ಪ್ರಯತ್ನ ನಡೆಸಿದರು. ನಂತರ ಚೀನಾದ ಕರಾವಳಿಯ ಉತ್ತರ ಭಾಗಕ್ಕೆ ತೆರಳಿ ಪೆಸ್ಕಡೋರ್ಸ್ ಮತ್ತು ಫಾರ್ಮೋಸದಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಿಕೊಂಡರು. ನಾಲ್ಕು ಭಾರಿ ಅವರು ಪೀಕಿಂಗ್‌ಗೆ ರಾಯಭಾರಿ ನಿಯೋಗಗಳನ್ನು (1655, 1667, 1685 ಮತ್ತು 1795) ಕಳುಹಿಸಿದರು. ಮಂಚು ಸರ್ಕಾರದೊಂದಿಗೆ ವಿಧಿಬದ್ಧವಾದ ರಾಜಕೀಯ ಸಂಪರ್ಕ ಮತ್ತು ತಮ್ಮ ವರ್ತಕರಿಗೆ ವಾಣಿಜ್ಯ ರಿಯಾಯಿತಿಗಳನ್ನು ದೊರಕಿಸಿಕೊಳ್ಳುವುದು ಅವರ ಉದ್ದೇಶವಾಗಿತ್ತು.

ಪ್ರಥಮ ರಾಯಭಾರಿ ನಿಯೋಗದಲ್ಲಿ ಇಬ್ಬರು ರಾಯಭಾರಿಗಳು - ಪೀಟರ್ ಡೀ ಗೋಯರ್ ಮತ್ತು ಜೆಕಬ್ ಡಿ ಕೀಜರ್, 4 ವರ್ತಕರು, 6 ಸೇವಕರು, ಒಬ್ಬ ಪಾರುಪತ್ಯಗಾರ, ಒಬ್ಬ ಕಹಳೆಯವನು, ಒಬ್ಬ ನಗಾರಿಯವನು, ಒಬ್ಬ ಕಾರ್ಯದರ್ಶಿ, ಒಬ್ಬ ವೈದ್ಯ ಹಾಗೂ ಇಬ್ಬರು ದ್ವಿಭಾಷಿಗಳು ಸೇರಿದ್ದರು. ಮಂಚು ಸರ್ಕಾರದ ಕಾರ್ಯದರ್ಶಿಯು ಡಚ್ಚರನ್ನು ನಿಜವಾಗಿಯೂ ಹಾಲೆಂಡ್ ಎಂಬ ದೇಶ ಅಸ್ತಿತ್ವದಲ್ಲಿದೆಯೇ ಎಂದು ಪ್ರಶ್ನಿಸಿದನು. ಚೀನಿ ಸಾಮ್ರಾಟ ಡಚ್ಚರು ಸಲ್ಲಿಸಿದ ಉಡುಗೊರೆಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಲಿಲ್ಲ. ಆದರೂ ಡಚ್ಚರು ಚೀನಿ ಸಂಪ್ರದಾಯದಂತೆ ನೆಲಕ್ಕೆ ಹಣೆಹಚ್ಚಿ ವಿಧೇಯತೆ ವ್ಯಕ್ತಪಡಿಸಿದಾಗ ಅವರಿಗೆ ಸಾಮ್ರಾಟ ಸಂದರ್ಶನ ನೀಡಿದನು. ಡಚ್ಚರಿಗೆ ಯಾವುದೇ ರಿಯಾಯಿತಿಗಳು ಅಥವಾ ಭರವಸೆಗಳು ದೊರೆಯಲಿಲ್ಲ ಮತ್ತು ಅವರು ಕ್ಯಾಂಟನ್ ನಗರದ ಸಾಮಾನ್ಯ ವ್ಯಾಪಾರದಿಂದಲೇ ತೃಪ್ತಿ ಪಡಬೇಕಾಯಿತು.

ಫ್ರೆಂಚರು ಇಂಡೋ-ಚೀನಾದಲ್ಲಿ ತಮ್ಮ ಅಧಿಕಾರ ಸ್ಥಾಪಿಸಿಕೊಂಡರು. ಅಲ್ಲಿಂದ ಮಂಚು ಸರ್ಕಾರವನ್ನು ಸಂಪರ್ಕಿಸಿದರು. ಫ್ರೆಂಚ್ ವರ್ತಕರ ಜೊತೆಯಲ್ಲಿ ಕ್ಯಾಥೋಲಿಕ್ ಧರ್ಮ ಪ್ರಚಾರಕರೂ ಚೀನಾಕ್ಕೆ ತೆರಳಿದರು. ಅವರು ಕೂಡ ಮಂಚು ಚೀನಾದೊಂದಿಗೆ ವಾಣಿಜ್ಯ ಒಪ್ಪಂದವನ್ನು ಮಾಡಿಕೊಳ್ಳುವಲ್ಲಿ ವಿಫಲರಾದರು. ಅಮೆರಿಕನ್ನರು ಮತ್ತು ರಷ್ಯನ್ನರು ಕೂಡ ಚೀನಾದಲ್ಲಿ ವ್ಯಾಪಾರಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಪಡೆಯಲು ಯತ್ನಿಸಿದರು.

ಬ್ರಿಟಿಷರು ಪೂರ್ವ ಏಷ್ಯಾವನ್ನು ತಡವಾಗಿ ಪ್ರವೇಶಿಸಿದರು. 16 ನೇ ಶತಮಾನದಲ್ಲಿ ಬ್ರಿಟಿಷ್ ಲೂಟಿಗಾರರು ಪೆಸಿಫಿಕ್ ಪ್ರವೇಶಿಸಿ, ಸ್ಪಾನಿಷರನ್ನು ಲೂಟಿ ಮಾಡಿದರು. 17 ನೇ ಶತಮಾನದಲ್ಲಿ ವರ್ತಕರು ರಂಗ ಪ್ರವೇಶ ಮಾಡಿದರು. 1637 ರಲ್ಲಿ ಮಿಂಗ್ ವಂಶದ ಪತನಕ್ಕೆ 7 ವರ್ಷ ಮುಂಚೆ, ಕ್ಯಾಪ್ಟನ್ ಜಾನ್ ವೆಡ್ಡೆಲ್ ನಾಯಕತ್ವದ ಪ್ರಥಮ ಬ್ರಿಟಿಷ್ ನೌಕೆ ಚೀನಾ ಪ್ರವೇಶಿಸಿತು. ಈ ನೌಕೆ ಈಸ್ಟ್ ಇಂಡಿಯ ಕಂಪನಿಗೆ ಸೇರಿದ್ದಾಗಿರಲಿಲ್ಲ. ಅದೊಂದು ಖಾಸಗಿ ಸಾಹಸವಾಗಿತ್ತು ಮತ್ತು ಆರ್ಥಿಕ ಸಂಕಟದಲ್ಲಿದ್ದ ದೊರೆಯು ಅದರಲ್ಲಿ ಆಸಕ್ತಿ ತೋರಿದ್ದನು. ಬ್ರಿಟಿಷರು ಮತ್ತು ಚೀನೀಯರ ನಡುವಿನ ಪ್ರಥಮ ಭೇಟಿ ಭವಿಷ್ಯ ಸೂಚಕವಾಗಿತ್ತು. ಬ್ರಿಟಿಷರು ತಮ್ಮದೇ ರೀತಿಯಲ್ಲಿ ವ್ಯಾಪಾರ ನಡೆಸುವುದನ್ನು ಚೀನೀಯರು ವಿಫಲಗೊಳಿಸಿದರು ಮತ್ತು ನಾಲ್ಕು ಬ್ರಿಟಿಷ್ ನೌಕೆಗಳು ಅತ್ಯಂತ ಸುಲಭವಾಗಿ ತಪ್ಪಿಸಿಕೊಂಡವು. ಅವು ಸ್ವದೇಶಕ್ಕೆ ಹಿಂತಿರುಗಿದಾಗ ಚೀನಿಯರ ಬಗೆಗೆ ಹೊಸ ವಿಷಯಗಳನ್ನು ತಂದವು. ಆದರೆ ಅವು ಜಸುಯಿಟರಂತೆ ಸ್ತುತಿ ಪರವಾಗಿರಲಿಲ್ಲ. 1793 ರಲ್ಲಿ ಮೆಕಾರ್ಟ್ನಿ ನಾಯಕತ್ವದಲ್ಲಿ ಒಂದು ನಿಯೋಗವನ್ನು ಚೀನಾಕ್ಕೆ ಕಳುಹಿಸಲಾಯಿತು. ಚೀನಾದೊಂದಿಗೆ ಒಂದು ವಾಣಿಜ್ಯ ಒಪ್ಪಂದ ಮಾಡಿಕೊಳ್ಳುವುದು ಅವನ ಉದ್ದೇಶವಾಗಿತ್ತು. ಆದರೆ ಚೀನಿಯರು ಅವನನ್ನು ಉತ್ತಮವಾಗಿ ನಡೆಸಿಕೊಳ್ಳಲಿಲ್ಲ. ಅವನನ್ನು 'ಸಾಮ್ರಾಟನಿಗೆ ಕಾಣಿಕೆ ಸಲ್ಲಿಸುವ ಸಾಗರದ ಅನಾಗರಿಕ' ಎಂದು ಪರಿಗಣಿಸಲಾಯಿತು. ಹೀಗಾಗಿ ಅವನು ತನ್ನ ಪ್ರಯತ್ನದಲ್ಲಿ ವಿಫಲನಾದನು. 1816 ರ ಲಾರ್ಡ್ ಆಮ್ಹಸ್ಟ ನಾಯಕತ್ವದ ನಿಯೋಗವೂ ವಿಫಲವಾಯಿತು.

ಐರೋಪ್ಯರ ಈ ಶಾಂತಿಯುತ ಅನುಸಂಧಾನಗಳಿಗೆ ಮಂಚುಗಳು ವಿರುದ್ಧ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಅಫೀಮು ಯುದ್ಧಗಳಿಗೆ ಮುಂಚಿನ ಅವಧಿಯಲ್ಲಿ ಮಂಚು ಸಾಮ್ರಾಟರು ತಮ್ಮನ್ನು ಮನುಕುಲದ ಪರಮಶ್ರೇಷ್ಠ ಅರಸರೆಂದು ಪರಿಗಣಿಸಿಕೊಂಡಿದ್ದರು. ಇತರರನ್ನು ಅನಾಗರಿಕರೆಂದು, ಮತ್ತು ಸಾಮಂತ ರಾಜ್ಯಗಳ ಕಾಣಿಕೆ ಸಲ್ಲಿಸುವ ಧೂತರೆಂದು ಪರಿಗಣಿಸಲಾಯಿತು. ರಾಜತಾಂತ್ರಿಕ ಸಂಪರ್ಕಕ್ಕೆ ಅವರ ಮನವಿಗಳನ್ನು ಮಂಚುಗಳು ತಿರಸ್ಕರಿಸಿದರು. ಮಂಚುಗಳ ಈ ಬಗೆಯ ವರ್ತನೆಗೆ ಮತ್ತೊಂದು ಕಾರಣವಿತ್ತು. ಮಂಚು ಸಾಮ್ರಾಜ್ಯ ಸ್ವಯಂಪೂರ್ಣವಾಗಿತ್ತು. ಚೀನಾಕ್ಕೆ ಐರೋಪ್ಯರ ವಸ್ತುಗಳ ಅಗತ್ಯವಿಲ್ಲ ಎಂದು ಮಂಚು ಸರ್ಕಾರ ಸ್ಪಷ್ಟಪಡಿಸಿತು. ಅಫೀಮನ್ನು ಗುರುತಿಸುವವರೆಗೂ, ಐರೋಪ್ಯರಿಗೆ ತಾವು ಚೀನೀಯರಿಂದ ಕೊಂಡುಕೊಂಡ ವಸ್ತುಗಳಿಗೆ ಪ್ರತಿಯಾಗಿ ಚೀನೀಯರಿಗೆ ಮಾರಲು ವ್ಯಾಪಾರದ ಸರಕನ್ನು ಹುಡುಕುವುದೇ ಸಮಸ್ಯೆಯಾಗಿತ್ತು. ತಮ್ಮ ಲೆಕ್ಕವನ್ನು ಸರಿತೂಗಿಸಿಕೊಳ್ಳಲು ಅವರು ಬೆಳ್ಳಿಯನ್ನು ಆಮದು ಮಾಡಿಕೊಳ್ಳಬೇಕಾಯಿತು.

## 128.7 ಕ್ಯಾಂಟನ್ ವ್ಯಾಪಾರ

ಚಕ್ರವರ್ತಿಗಳ ಘೋಷಣೆಯ ಪ್ರಕಾರ ಐರೋಪ್ಯರು ಕ್ಯಾಂಟನ್ ಬಂದರಿನ ಮೂಲಕ ಮಾತ್ರ ವ್ಯಾಪಾರ ನಡೆಸಬಹುದಿತ್ತು. ಅಲ್ಲದೆ ಅವರು ಎಲ್ಲಾ ಚೀನಿ ವರ್ತಕರೊಂದಿಗೆ ವ್ಯಾಪಾರ ನಡೆಸದೆ, ಚಕ್ರವರ್ತಿಯಿಂದ ನೇಮಿಸಲ್ಪಟ್ಟ ವ್ಯಾಪಾರದ ಆಯುಕ್ತನ ಮೂಲಕ ಮಾತ್ರ ವ್ಯಾಪಾರ ನಡೆಸಬೇಕಿತ್ತು. ಇಂಗ್ಲಿಷ್ ಈಸ್ಟ್ ಇಂಡಿಯ ಕಂಪನಿ ಕ್ಯಾಂಟನ್ ವ್ಯಾಪಾರದ ನಾಯಕತ್ವ ವಹಿಸಿಕೊಳ್ಳುತ್ತಿದ್ದ ಸಮಯದಲ್ಲಿ ಚೀನಾ ಒಂದು ಸುಂಕ ನೀತಿಯನ್ನು ರೂಪಿಸಿತ್ತು ಮತ್ತು ಅದು ರಫ್ತು ವ್ಯಾಪಾರಕ್ಕೆ ಉತ್ತೇಜದಾಯಕವಾಗಿತ್ತು. ಅಂತಹ ಒಂದು ನೀತಿಯನ್ನು ಬ್ರಿಟಿಷರು ಅಥವಾ ಇತರ ವಿದೇಶೀಯರು ಒಪ್ಪುವ ಸಾಧ್ಯತೆಯಿರಲಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಕ್ಯಾಂಟನ್ ವ್ಯಾಪಾರ ಒಂದು ಏಕಸ್ವಾಮ್ಯವಾಗಿತ್ತು ಮತ್ತು ಚೀನೀಯರು, ಕನಿಷ್ಟ ಪಕ್ಷ ಅವರಲ್ಲಿ ಕೆಲವರು, ಏಕಸ್ವಾಮ್ಯ ಪಡೆದಿದ್ದರು. ಏಕಸ್ವಾಮ್ಯದ ವಿಷಯ ಬ್ರಿಟಿಷ್ ಈಸ್ಟ್ ಇಂಡಿಯ ಕಂಪೆನಿಗೆ ಆತಂಕವನ್ನೇನು ಉಂಟುಮಾಡಲಿಲ್ಲ. ಚೀನಿ ವರ್ತಕರು ವಿದೇಶಿ ವರ್ತಕರ ವೆಚ್ಚದಲ್ಲಿ ಏಕಸ್ವಾಮ್ಯದ ಲಾಭಗಳನ್ನು ವಸೂಲಿ ಮಾಡಿದ್ದರಿಂದ ಒಂದು ತತ್ವವಾಗಿ ಏಕಸ್ವಾಮ್ಯ ತನ್ನ ಮೌಲ್ಯವನ್ನು ಕಳೆದುಕೊಂಡಿತು.

ಚೀನಾದಲ್ಲಿ ಏಕಸ್ವಾಮ್ಯ ಪಡೆದಿದ್ದ ವರ್ತಕರ ಒಂದು ಗುಂಪು ಕೋ- ಹಾಂಗ್ ಎಂದು ಕರೆಯಲ್ಪಟ್ಟಿತ್ತು. ಕ್ಯಾಂಟನ್ನಿಗೆ ಬಂದ ಪ್ರತಿಯೊಂದು ವಿದೇಶಿ ನೌಕೆಯನ್ನು ಕೋ-ಹಾಂಗ್‌ನ ವರ್ತಕರಲ್ಲೊಬ್ಬನಿಗೆ ವಹಿಸಲಾಗುತ್ತಿತ್ತು. ಅವನು ಆ ನೌಕೆಯ ಆಗಮನ, ವಾಸ್ತವ್ಯ ಮತ್ತು ನಿರ್ಗಮನಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಿಗೂ ಹೊಣೆಗಾರನಾಗಿದ್ದನು. ಹೀಗೆ ಕೋ-ಹಾಂಗ್, ಚೀನಾದ ಸುಂಕದ ಆಯುಕ್ತ ಮತ್ತು ಅವನ ಮೂಲಕ ಕ್ಯಾಂಟನ್ ಅಧಿಕಾರ ಹಾಗೂ ಪೀಕಿಂಗ್ ಆಸ್ಥಾನದ ಲಾಭಕ್ಕಾಗಿ ವಿದೇಶಿ ವ್ಯಾಪಾರಿಗಳಿಂದ ಅಪಾರ ಸುಂಕವನ್ನು ಬಲವಂತವಾಗಿ ವಸೂಲಿ ಮಾಡುವ ಒಂದು ಸಾಧನವಾಯಿತು. ಅಂತಿಮವಾಗಿ, ವಿದೇಶೀಯರು ಸರ್ಕಾರದ ನಿಯಮಗಳನ್ನು ಪಾಲಿಸುವಂತೆ ನೋಡಿಕೊಳ್ಳುವುದು ಮತ್ತು ಸರ್ಕಾರ ಹಾಗೂ ವಿದೇಶಿ ವರ್ತಕರ ನಡುವೆ ಸಂಪರ್ಕದ ಏಕೈಕ ಮಾಧ್ಯಮವಾಗಿ ಕೋಹಾಂಗ್ ಕೆಲಸ ನಿರ್ವಹಿಸಬೇಕಿತ್ತು.

ಕ್ಯಾಂಟನ್‌ನಲ್ಲಿ ವಿದೇಶೀಯರ ವ್ಯಾಪಾರದ ಕೊಠಿಗಳು ನಗರದ ಹೊರವಲಯದ ನದಿ ದಂಡೆಯ ಮೇಲೆ ಸ್ಥಾಪನೆಯಾಗಿದ್ದವು. ಕೋಟೆಯೊಳಗಿನ ನಗರಕ್ಕೆ ವಿದೇಶೀಯರಿಗೆ ಪ್ರವೇಶವಿರಲಿಲ್ಲ. ಅವರ ಚಲನೆ ವ್ಯಾಪಾರ ಕೋಠಿ ಆವರಣಕ್ಕೆ ಸೀಮಿತವಾಗಿತ್ತು. ಅವರು ಪ್ರಯಾಣಕ್ಕಾಗಿ ಪಾಲಕಿ (Sedan Chair) ಬಳಸುವುದನ್ನು ನಿಷೇಧಿಸಲಾಗಿತ್ತು. ಅವರು ನದಿಯಲ್ಲಿ ದೋಣಿ ವಿಹಾರ ನಡೆಸುವಂತಿರಲಿಲ್ಲ. ನದಿಯ ಎದುರು ದಂಡೆಯ ಹೂತೋಟಗಳಿಗೆ ಭೇಟಿ ನೀಡುವಂತಿರಲಿಲ್ಲ. ಕೊಟೆಯೊಳಗಿನ ಮಾರುಕಟ್ಟೆಗಳು ಹಾಗೂ ಅಲ್ಲಿನ ವ್ಯಾಪಾರದ ಬಗೆಬಗೆಯ ಸರಕುಗಳನ್ನು ಅವರ ದೃಷ್ಟಿಯಿಂದ ದೂರವಿಡಲಾಗಿತ್ತು. ವಿದೇಶೀಯರನ್ನು ಪೃಥ್ವಿಯ ಮತ್ತೊಂದು ಪಾರ್ಶ್ವದವರೇನೊ ಎಂಬಂತೆ ನಡೆಸಿಕೊಳ್ಳಲಾಯಿತು. ಅವರು ಚೀನಿ ಸೇವಕರನ್ನು ಅನುಕೂಲದ ದೃಷ್ಟಿಯಿಂದ ನೇಮಿಸಿಕೊಳ್ಳಬಹುದಿತ್ತು. ಆದರೆ ಅದು ಅವರ ಹಕ್ಕಾಗಿರಲಿಲ್ಲ. ಕ್ಯಾಂಟನ್‌ಗೆ ವರ್ತಕರ ಪತ್ನಿಯರು ಅಥವಾ ಇತರ ವಿದೇಶಿ ಮಹಳೆಯರು ಬರುವಂತಿರಲಿಲ್ಲ. ಅವರು ಮಕಾವ್‌ನಲ್ಲಿ ಉಳಿಯಬೇಕಿತ್ತು. ಅಲ್ಲದೆ ವ್ಯಾಪಾರದ ಅವಧಿ ಮುಗಿದ ನಂತರ ಎಲ್ಲಾ ವರ್ತಕರು ಮಕಾವ್‌ಗೆ ಹಿಂದಿರುಗಬೇಕಾಗಿತ್ತು. ಚೀನಾ ವಿದೇಶೀಯರನ್ನು ಕೀಳು ಜನರಂತೆ ನಡೆಸಿಕೊಂಡಿತು. ಈ ಎಲ್ಲಾ ನಿರ್ಬಂಧಗಳಿದ್ದರೂ ಕೂಡ ಮೇಲಿಂದ ಮೇಲೆ ಐರೋಪ್ಯ ವರ್ತಕರು, ಅವರ ಚೀನಿ ಪ್ರತಿನಿಧಿಗಳು ಮತ್ತು ಕೋ-ಹಾಂಗ್ ವರ್ತಕರ ನಡುವೆ ಅತ್ಯಂತ ಸ್ನೇಹದ ಮತ್ತು ಆತ್ಮೀಯವಾದ ಸಂಬಂಧಗಳು ಏರ್ಪಡುತ್ತಿದ್ದುದು ಸಾಮಾನ್ಯವಾಗಿತ್ತು. ಕೆಲವೊಮ್ಮೆ ವಿದೇಶಿ ವರ್ತಕ ಹಟಮಾರಿಯಾಗಿ, ಕೆಲವೊಮ್ಮೆ ಹೇಡಿಯಂತೆ ವರ್ತಿಸುತ್ತಿದ್ದನು. ಎಲ್ಲಾ ಬಗೆಯ ನಿರ್ಬಂಧಗಳಿದ್ದರೂ ಕ್ಯಾಂಟನ್ ವ್ಯಾಪಾರ ಲಾಭದಾಯಕವಾಗಿತ್ತು. ಒಟ್ಟಾರೆ ವಿದೇಶಿ ವರ್ತಕರು ಲಾಭದಾಯಕ ವ್ಯಾಪಾರವನ್ನು ಕಳೆದುಕೊಳ್ಳುವುದಕ್ಕಿಂತಲೂ ಉದ್ರೇಕಕಾರಿ.ನಿಯಮಗಳನ್ನು ಸಹಿಸಿಕೊಳ್ಳುವುದೇ ಉತ್ತಮವೆಂದು ಭಾವಿಸಿದ್ದರು.

ಕ್ಯಾಂಟನ್ ವ್ಯಾಪಾರ, ಸಂಕ್ಷಿಪ್ತವಾಗಿ ಹೇಳಬಹುದಾದರೆ, ಕೇವಲ ವರ್ತಕರ ಪೈಪೋಟಿಗಿಂತಲೂ ಹೆಚ್ಚಿನದಾಗಿತ್ತು. ಅದು ಮೂಲಭೂತವಾಗಿ ವಿಭಿನ್ನವಾದ ವಾಣಿಜ್ಯ, ಕಾನೂನು ಮತ್ತು ರಾಜಕೀಯ ವ್ಯವಸ್ಥೆಗಳ ನಡುವಿನ ಘರ್ಷಣೆಯಾಗಿತ್ತು. ಅರ್ಥರ್ ಸ್ಮಿತ್ ಹೇಳಿರುವಂತೆ ವಿದೇಶೀಯರಿಗೆ ಅದು "ಚೀನೀಯರ ತಪ್ಪು ತಿಳುವಳಿಕೆ ಪ್ರತಿಭೆಗೆ ಒಂದು ಸುದೀರ್ಘ ನಿದರ್ಶನವಾಗಿತ್ತು". ಆದಾಗ್ಯೂ ವಿದೇಶೀಯರ ಆರೋಪಗಳಿಗೆ ಚೀನೀಯರು ಒಂದು ಸಿದ್ಧ ಹಾಗೂ ತೋರಿಕೆಯ ಉತ್ತರ ಹೊಂದಿದ್ದರು.

ವಿವಾಗಗಳೇನೇ ಇದ್ದರೂ ಕ್ಯಾಂಟನ್ ವ್ಯಾಪಾರ ವ್ಯವಸ್ಥೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಚೀನಿ ವರ್ತಕರು ಹಾಗೂ ಅಧಿಕಾರಿಗಳಿಗೆ ಲಾಭದಾಯಕವಾಗಿತ್ತು. ಚಹ ಮತ್ತು ರೇಷ್ಮೆಯಿಂದ ಲಾಭ ಹುಡುಕುವ ಪೂರ್ವ ಮತ್ತು ಪಶ್ಚಿಮದ ಈ ಮಿಲನ ಎಷ್ಟು ಆಕರ್ಷಕವಾಗಿತ್ತೆಂದರೆ, 1834 ರ ಮುಂಚಿನ ಹಳೆಯ ಕ್ಯಾಂಟನ್ ವ್ಯಾಪಾರ ವರ್ತಕರು ಸಜ್ಜನರೆಂದು ಪರಿಗಣಿಸಲ್ಪಟ್ಟಿದ್ದ ಒಂದು ಕಲ್ಪಿತ ಹಾಗೂ ಆದರ್ಶ ಯುಗದ ಆಕರ್ಷಣೆಯನ್ನು ಕೆಲವೊಮ್ಮೆ ಮೀರಿಸಿದೆ. ಈ ವೈಭವೀಕರಣವನ್ನು ಸಮರ್ಥಿಸಲು ಆಧಾರಗಳಿವೆಯಾದರೂ ಕ್ಯಾಂಟನ್ ವ್ಯವಸ್ಥೆ ವಿಫಲವಾಯಿತು ಮತ್ತು ಅದರ ಪತನಕ್ಕೆ ಕಾರಣವಾದ ಆರ್ಥಿಕ ಅಂಶಗಳನ್ನು ಗಮನಿಸಬೇಕಾಗುತ್ತದೆ.

ಹೀಗೆ ಐರೋಪ್ಯರ ಆಗಮನ ಮತ್ತು ಕ್ಯಾಂಟನ್ ವ್ಯಾಪಾರದ ಉಗಮ ಹಲವು ಸಮಸ್ಯೆಗಳನ್ನು ಸೃಷ್ಟಿಸಿತು. ಅವುಗಳು ಚೀನಾ ಮತ್ತು ಪಶ್ಚಿಮದ ನಡುವೆ ಅಫೀಮು ಯುದ್ಧಗಳ ರೂಪದ ಘರ್ಷಣೆಗೆ ಕಾರಣವಾದವು. ಕ್ಯಾಂಟನ್‌ನಲ್ಲಿ ಐರೋಪ್ಯರ ಮೇಲೆ ವಿಧಿಸಲಾದ ನಿರ್ಬಂಧಗಳು ಸಹಿಸಲಸಾಧ್ಯವಾಗಿದ್ದವು. ಚೀನೀಯರು ಅವರನ್ನು ಕೆಳದರ್ಜೆಯವರೆಂದು ಪರಿಗಣಿಸಿದ್ದರೆಂಬುದಕ್ಕೆ ಅವು ಸೂಚನೆಗಳಾಗಿದ್ದವು. ಇದಕ್ಕೆ ಚೀನಾಕ್ಕೆ ರಫ್ತಿನ ಸಮಸ್ಯೆ ಮತ್ತು ಚೀನಾ ವ್ಯಾಪಾರದ ಸಮತೋಲನದ ಸಮಸ್ಯೆಯೂ ಸೇರಿಕೊಂಡಿತು.

## 128.8 ಘಟಕದ ಸಾರಾಂಶ

ಈ ಘಟಕದಲ್ಲಿ ನಾವು ಏನನ್ನು ಕಲಿತೆವೆಂಬುದನ್ನು ಒಟ್ಟಾಗಿ ಸಂಗ್ರಹಿಸೋಣ. 15 ನೇ ಶತಮಾನದ ಆರಂಭದಲ್ಲಿ ಐರೋಪ್ಯ ದೇಶಗಳು ವಾಣಿಜ್ಯ ಹಾಗೂ ಪ್ರಾದೇಶಿಕ ಹಿತಾಸಕ್ತಿಗಳನ್ನು ಹೊಂದಿದ್ದವು. ಆದ್ದರಿಂದಲೇ ಅವುಗಳು ಚೀನಾದಲ್ಲಿ ಅಸ್ವಾಗತಾರ್ಹವಾಗಿದ್ದವು. ಅಲ್ಲದೆ ಈ ದೇಶಗಳು ಅನುಕೂಲಕರ ವ್ಯಾಪಾರದ ಸಮತೋಲನ ಹೊಂದಲು ಬಯಸಿದ್ದವು ಮತ್ತು ವಾಣಿಜ್ಯ ಹಾಗೂ ರಾಜಕೀಯ ಒಪ್ಪಂದಗಳಿಗೆ ಸಹಿ ಹಾಕಲು ಬಯಸಿದ್ದವು. ಇದು ಪರಸ್ಪರ ಘರ್ಷಣೆಗಳಿಗೆ ಕಾರಣವಾಯಿತು. ಚೀನೀಯರ ವಿರೋಧವಿದ್ದಾಗ್ಯೂ ಚೀನಾದ ಒಳನಾಡನ್ನು ಪ್ರವೇಶಿಸಬೇಕೆಂಬ ಐರೋಪ್ಯರ ಅಪೇಕ್ಷೆ ಪ್ರಸಿದ್ಧವಾದ ಅಫೀಮು ಯುದ್ಧಗಳು ಮತ್ತು ತೈಪಿಂಗ್ ದಂಗೆಗೆ ಕಾರಣವಾಯಿತು.

## 128.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಉತ್ತರಗಳು

*I* *ಈ ಕೆಳಗಿನವುಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.*

1. ಸ್ವರ್ಗೀಯ ಸಾಮ್ರಾಜ್ಯ
2. ಕೋ-ಹಾಂಗ್
3. ಮಾಟ್ಟಿಯೋ ರೀಯಿ

*II* *ಈ ಪ್ರಶ್ನೆಗಳಿಗೆ 15-20 ವಾಕ್ಯಗಳಲ್ಲಿ ಉತ್ತರಿಸಿ.*

1. ಚೀನಾದೊಂದಿಗೆ ಸಂಪರ್ಕ ಹೊದಲು ಐರೋಪ್ಯರು ಬಯಸಲು ಕಾರಣಗಳೇನು?
2. ಚೀನಾ ಮತ್ತು ಐರೋಪ್ಯರ ನಡುವಿನ ಸಂಪರ್ಕವನ್ನು ಸಂಕ್ಷಿಪ್ತವಾಗಿ ವಿವರಿಸಿ.

*III* *ಕೆಳಗಿನವುಗಳಿಗೆ 30 -40 ಸಾಲುಗಳಲ್ಲಿ ಉತ್ತರಿಸಿ.*

1. ಅಫೀಮು ಯುದ್ಧಕ್ಕೆ (1839-42) ಮುಂಚೆ ಯುರೋಪ್‌ನೊಂದಿಗೆ ಚೀನಾದ ಸಂಬಂಧಗಳನ್ನು ಚರ್ಚಿಸಿ.
2. 19ನೇ ಶತಮಾನದ ಮಧ್ಯ ಭಾಗದ ಸವಾಲನ್ನು ಎದುರಿಸಲು ಮಂಚು ಸಾಮ್ರಾಜ್ಯದ ಸಿದ್ಧತೆಗಳನ್ನು ಕುರಿತು ಬರೆಯಿರಿ.

## 128.10 ಪರಾಮರ್ಶನ ಗ್ರಂಥಗಳು


1. Martin Kitter : The Awakening of China
2. Clegg Arths : The Birth of New China
3. Li Chien-Nung : The Political History of China


*ಮೂಲ: ಎಸ್. ಮೀರ್ ಸಮಿವುಲ್ಲ*

*ಅನುವಾದಕರು: ಬಿ. ಪರಮೇಶ್ವರ*

# ಘಟಕ - 129

# ಪ್ರಥಮ ಮತ್ತು ದ್ವಿತೀಯ ಅಫೀಮು ಯುದ್ಧಗಳು

*ರಚನೆ*


129.0 ಉದ್ದೇಶಗಳು

129.1 ಪೀಠಿಕೆ

129.2 ಪ್ರಥಮ ಅಫೀಮು ಯುದ್ಧ (1839-42)

129.3 ಯುದ್ಧ

129.4 ತೆರೆದುಕೊಂಡ ಚೀನಾ

129.5 ಒಪ್ಪಂದಗಳು ಮತ್ತು ಅವುಗಳ ಪರಿಣಾಮಗಳು

129.6 ದ್ವಿತೀಯ ಅಫೀಮು ಯುದ್ಧ (1856-60) ಕಾರಣಗಳು

129.7 ಯುದ್ಧದ ಪಥ

129.8 ದ್ವಿತೀಯ ಒಡಂಬಡಿಕೆ

129.9 ಘಟಕದ ಸಾರಾಂಶ

129.10 ನಿಮ್ಮ ಪ್ರಗತಿ ಪರಿಶೀಲಿಸಲು ಉತ್ತರಗಳು

129.11 ಪರಾಮರ್ಶನ ಗ್ರಂಥಗಳು

## 129.0 ಉದ್ದೇಶಗಳು

"ಅಫೀಮು ಯುದ್ದಗಳು" ಎಂಬ ಈ ಘಟಕದಲ್ಲಿ ಅಫೀಮು ಯುದ್ದಗಳಿಂದ ಚೀನಾದ ಮೇಲಾದ ಪರಿಣಾಮಗಳನ್ನು ಪರಿಶೀಲಿಸಲಾಗಿದೆ. ಈ ಘಟಕದಲ್ಲಿ ನಾವು ಈ ವಿಷಯವನ್ನು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಬೌದ್ಧಿಕ ಮಟ್ಟದಲ್ಲಿ ಅದರ ಹಿನ್ನೆಲೆಯೊಂದಿಗೆ ಚರ್ಚಿಸುತ್ತೇವೆ. ಅಫೀಮು ಯುದ್ಧಕ್ಕೆ ಮುಂಚೆ ಚೀನಾ ಪಾಶ್ಚಾತ್ಯರಿಗೆ ಮುಚ್ಚಿಕೊಂಡಿತ್ತು. ವಿದೇಶ ವ್ಯಾಪಾರ ಸರ್ಕಾರದ ಬಿಗಿ ನಿಯಂತ್ರಣಕ್ಕೊಳಪಟ್ಟಿತ್ತು. ಆತ್ಮ ವಂಚಕವಾದ ಶ್ರೇಷ್ಠತೆಯ ಭಾವನೆ ಹೊಂದಿದ್ದ ಚೀನೀಯರು "ಅನಾಗರಿಕರೊಂದಿಗೆ" ವ್ಯಾಪಾರ ನಡೆಸುವುದರಿಂದ ತಮಗೆ ಲಾಭವೇನೂ ಇಲ್ಲ ಎಂದು ಭಾವಿಸಿದ್ದರು. ಅಫೀಮು ಯುದ್ದದಲ್ಲಿ ಸೋತ ನಂತರ ಚೀನಾ ಪಾಶ್ಚಾತ್ಯರಿಗೆ ತನ್ನನ್ನು ತೆರೆದುಕೊಳ್ಳಬೇಕಾಯಿತು. ಅದಲ್ಲದೆ ಚೀನಾದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯ ದೌರ್ಬಲ್ಯ ಪ್ರಕಟಗೊಂಡಿತು ಮತ್ತು ಶ್ರೇಷ್ಠತೆಯ ಭ್ರಮೆ ನಿರ್ಮೂಲವಾಯಿತು. ಮಂಚು ಸರ್ಕಾರಕ್ಕೆ ಚೀನಾದ ಜನತೆಯನ್ನು ಪ್ರತಿನಿಧಿಸುವುದು ಮತ್ತು ರಕ್ಷಿಸುವುದು ಸಾಧ್ಯವಾಗಲಿಲ್ಲ. ಪ್ರಥಮ ಅಫೀಮು ಯುದ್ಧಾನಂತರ ಏರ್ಪಟ್ಟ ನಾನ್‌ಕಿಂಗ್ ಒಪ್ಪಂದ ಚೀನಾದ ಬಂದರುಗಳು ಮತ್ತು ಮಾರುಕಟ್ಟೆಗಳನ್ನು ಪಾಶ್ಚಾತ್ಯ ವರ್ತಕರಿಗೆ ತೆರೆಯಿತು. ಅದರಿಂದಾಗಿ ಪಾಶ್ಚಾತ್ಯರ ಯಂತ್ರ ನಿರ್ಮಿತ ಉತ್ಪನ್ನಗಳು ಚೀನಾ ಪ್ರವೇಶಿಸಿದವು ಮತ್ತು ಚೀನಾದ ಅರ್ಥ ವ್ಯವಸ್ಥೆ ಕುಸಿಯಿತು. ಅರ್ಥ ವ್ಯವಸ್ಥೆಯ ಕುಸಿತದ ಫಲವಾಗಿ ನಿರುದ್ಯೋಗ ಸಮಸ್ಯೆ ಉಲ್ಬಣಿಸಿತು. ಬಡತನ ಹಾಗೂ ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ಸರ್ಕಾರದ ಅದಕ್ಷತೆಯಿಂದಾಗಿ, ದೊಂಬಿಗಳು, ಸಾಮಾಜಿಕ ಕ್ಷೋಭೆ ಹಾಗೂ ಗೊಂದಲ ದೇಶವನ್ನು ಆವರಿಸಿದವು.

ಅಫೀಮು ಯುದ್ದಗಳಿಂದಾಗಿ ಚೀನಾದ ಅಧಿಕಾರಿಗಳು ಮತ್ತು ಬುದ್ಧಿಜೀವಿಗಳು, ಚೀನಾ ಅಭಿವೃದ್ಧಿ ಸಾಧಿಸಬೇಕಾದರೆ ಪಶ್ಚಿಮದಿಂದ ಕಲಿಯುವುದು ಅಗತ್ಯ ಎಂಬುದನ್ನು ಅರಿತರು. ಪರಿಣಾಮವಾಗಿ ಅಧಿಕಾರಿಗಳು ಪಾಶ್ಚಾತ್ಯರ ತಂತ್ರಜ್ಞಾನ ಮತ್ತು ಕೈಗಾರಿಕೆಗಳನ್ನು ಆಮದು ಮಾಡಿಕೊಂಡರು. ಬುದ್ಧಿಜೀವಿಗಳು ಸಂಸದೀಯ ಮಾದರಿ ಸರ್ಕಾರಕ್ಕೆ ಒತ್ತಾಯಿಸಲಾರಂಭಿಸಿದರು.

ಅಲ್ಲದೆ, ಈ ಘಟಕದಲ್ಲಿ ನಾವು ದ್ವಿತೀಯ ಅಫೀಮು ಯುದ್ಧ (1860) ದ ನಂತರ "ಅನಾಗರಿಕ " ಎಂಬ ಪದವನ್ನು ಅಧಿಕೃತವಾಗಿ ನಿಷೇಧಿಸಲಾಯಿತು ಮತ್ತು ವಿದೇಶೀಯರು ಗೌರವ ಸೂಚಕವಾಗಿ ಚಕ್ರವರ್ತಿಯ ಮುಂದೆ ತೆವಳುವ ಪದ್ಧತಿ ರದ್ದಾಯಿತು ಎಂಬುದನ್ನು ತಿಳಿಯಲಿದ್ದೇವೆ. ಹನ್ನೊಂದು ಹೊಸ ಬಂದರುಗಳನ್ನು ವಿದೇಶ ವ್ಯಾಪಾರಕ್ಕೆ ತೆರೆಯಲಾಯಿತು.

ಮತ್ತೊಂದು ಮುಖ್ಯ ವಿಷಯವೆಂದರೆ ದ್ವಿತೀಯ ಅಫೀಮು ಯುದ್ಧಾನಂತರ ಏರ್ಪಟ್ಟ ಒಪ್ಪಂದಗಳಿಂದ ಚೀನಾ ಮತ್ತಷ್ಟು ಅವಮಾನಕ್ಕೆ ಗುರಿಯಾಯಿತು ಮತ್ತು ಮಂಚು ಸರ್ಕಾರ ದುರ್ಬಲಗೊಂಡಿತು. ಈ ಒಪ್ಪಂದಗಳ ಅತ್ಯಂತ ಅವಮಾನಕಾರಿ ನಿಬಂಧನೆಗಳಂತೆ ಅಫೀಮು ವ್ಯಾಪಾರವನ್ನು ಕಾನೂನು ಬದ್ಧಗೊಳಿಸಲಾಯಿತು ಮತ್ತು ಚೀನಾದ ಎಲ್ಲ ಭಾಗಗಳಲ್ಲೂ ಕ್ರೈಸ್ತ ಧರ್ಮ ಪ್ರಚಾರಕ್ಕೆ ಮುಕ್ತ ಹಾಗೂ ಅನಿರ್ಬಂಧಿತ ಅವಕಾಶ ನೀಡಲಾಯಿತು.

## 129.1 ಪೀಠಿಕೆ

ಅಫೀಮು ಯುದ್ಧದಲ್ಲಿ (ಆಂಗ್ಲೋ-ಚೀನಾಯುದ್ದ ) ಚೀನಾ ಅತ್ಯಂತ ಅವಮಾನಕಾರಿಯಾದ ಸೋಲು ಅನುಭವಿಸಿತು. 1840 ಕ್ಕೆ ಮುಂಚೆ ಚೀನಾ, ಕ್ಯಾಂಟನ್ ನಗರದಲ್ಲಿ ನಡೆಯುತ್ತಿದ್ದ ನಿಯಮಿತ ವಿದೇಶ ವ್ಯಾಪಾರ ಹೊರತುಪಡಿಸಿ, ಹೊರಜಗತ್ತಿನಿಂದ ಪ್ರತ್ಯೇಕವಾಗಿತ್ತು. ಚೀನಾದ ವಿಶಾಲ ಮಾರುಕಟ್ಟೆಯನ್ನು ಪ್ರವೇಶಿಸಲು ಬಯಸಿದ್ದ ಪಾಶ್ಚಾತ್ಯ ದೇಶಗಳು ಅಫೀಮು ಪ್ರಕರಣವನ್ನು ಬಳಸಿಕೊಂಡು ಅಫೀಮು ಯುದ್ಧ ನಡೆಸಿದವು. ಬಹುಬೇಗನೆ ಸೋತ ಚೀನಾ ನಾನ್‌ಕಿಂಗ್ ಒಪ್ಪಂದಕ್ಕೆ ಸಹಿ ಹಾಕಿತು. ಅದರ ಪ್ರಕಾರ ಚೀನಾ ತನ್ನ ಬಂದರುಗಳು ಮತ್ತು ಮಾರುಕಟ್ಟೆಗಳನ್ನು ಪಾಶ್ಚಾತ್ಯವರ್ತಕರಿಗೆ ಮುಕ್ತಗೊಳಿಸಿತು, ದೊಡ್ಡ ನಗರಗಳಲ್ಲಿ ರಿಯಾಯಿತಿಗಳನ್ನು ನೀಡಿತು ಮತ್ತು ಚೀನಾ ಅರೆ-ಊಳಿಗಮಾನ್ಯ, ಅರೆ-ವಸಾಹತು ದೇಶವಾಯಿತು.

ಪಾಶ್ಚಾತ್ಯ ದೇಶಗಳ ಯಂತ್ರಗಳಿಂದ ಉತ್ಪಾದಿಸಲ್ಪಟ್ಟ ಸುಲಭ ಬೆಲೆಯ ವಸ್ತುಗಳು ಚೀನಾಕ್ಕೆ ಬರಲಾರಂಭಿಸಿದ್ದರಿಂದ ಚೀನಾದ ಸ್ಥಳೀಯ ಕೈಗಾರಿಕೆಗಳು ನಾಶವಾದವು. ಪಶ್ಚಿಮದ ದೇಶಗಳೊಂದಿಗೆ ಸ್ಪರ್ಧಿಸಲು ಚೀನಾದ ಅರ್ಥ ವ್ಯವಸ್ಥೆ ಬದಲಾವಣೆಗೆ ಸಿದ್ದವಾಗಬೇಕಾಯಿತು. ಅಫೀಮು ಯುದ್ದಗಳಲ್ಲಿ ಚೀನೀ ಸೈನ್ಯದ ವಿಪತ್ಕಾರಕವಾದ ಸೋಲು, ಚೀನೀಯರಿಗೆ ತಮ್ಮದು "ಸ್ವರ್ಗೀಯ

ಸಾಮ್ರಾಜ್ಯ" ವಾಗಿ ಉಳಿದಿಲ್ಲ ಎಂಬುದನ್ನು ಮನದಟ್ಟು ಮಾಡಿತು. ಪಾಶ್ಚಾತ್ಯರ ವಿಚಾರಗಳು ಚೀನಾ ಪ್ರವೇಶಿಸಿದವು ಮತ್ತು ಅವುಗಳು ಸಮಾಜದ ಪ್ರತಿಯೊಂದು ಸ್ಥರದ ಮೇಲೂ ಪ್ರಭಾವ ಬೀರಿದವು. ಚೀನಾದ ಹಳೆಯ ಮಾದರಿ ರಾಜಕೀಯ ವ್ಯವಸ್ಥೆಯೇ ಚೀನಾದ ದೌರ್ಬಲ್ಯಗಳಿಗೆ ಮೂಲಕಾರಣ ಎಂದು ಭಾವಿಸಿದ ಚೀನಾದ ಬುದ್ಧಿಜೀವಿಗಳು ಕೆಲವು ಅಲ್ಪಕಾಲದ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತಂದರು. ಬಲವಂತದಿಂದ ಚೀನಾವನ್ನು ಮುಕ್ತಗೊಳಿಸಿದ್ದು ಭಾಗಷಃ ಚೀನಾ ವಿದೇಶಿ ಆಳ್ವಿಕೆಗೆ ಒಳಗಾಗಲು ಕಾರಣವಾಯಿತು. ಅದರ ಅರ್ಥ ವ್ಯವಸ್ಥೆ ಕುಸಿಯಿತು. ಸಾಮಾಜಿಕ ಗೊಂದಲ, ದಂಗೆಗಳು ಹಾಗೂ ಸಾಮಾನ್ಯ ರಾಜಕೀಯ ಅಸ್ಥಿರತೆಗೆ ಕಾರಣವಾಯಿತು. ಆದಾಗ್ಯೂ ವಿಪರ್ಯಾಸದ ವಿಷಯವೆಂದರೆ ಅಫೀಮು ಯುದ್ಧಗಳು ಚೀನಾವನ್ನು ಭ್ರಮೆಯಿಂದ ಎಚ್ಚರಗೊಳಿಸಿದವು ಮತ್ತು ನಿಜವಾದ ಪ್ರಗತಿಯತ್ತ ಅದರ ಗಮನ ಸೆಳೆದವು. ಚೀನಾ ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನನ್ನು ಅಳತೆಮಾಡಿಕೊಳ್ಳಲು ಶಕ್ತವಾಯಿತು ಮತ್ತು ತನ್ನ ಸ್ಥಾನ ಏನೆಂಬುದನ್ನು ಅರಿತುಕೊಂಡಿತು. ಹೀಗೆ ಅಫೀಮು ಯುದ್ಧಗಳಿಂದಾಗಿ ಚೀನೀಯರಲ್ಲಿ ನವ ಚೈತನ್ಯವುಂಟಾಯಿತು.

## 129.2 ಪ್ರಥಮ ಅಫೀಮು ಯುದ್ಧ (1839-42) - ಕಾರಣಗಳು

ಸರ್ಕಾರದ ಬಿಗಿ ನಿಯಂತ್ರಣವಿದ್ದಾಗ್ಯೂ ಚೀನಾದಲ್ಲಿ ವಿದೇಶ ವ್ಯಾಪಾರ 18 ನೇ ಶತಮಾನದ ಕೊನೆಯ ಭಾಗ ಮತ್ತು 19 ನೇ ಶತಮಾನದ ಆರಂಭದಲ್ಲಿ ವಿಸ್ತಾರಗೊಂಡಿತು. ವ್ಯಾಪಾರ ಬೆಳೆದಂತೆಲ್ಲಾ ಪಾಶ್ಚಾತ್ಯರ ಆತಂಕವೂ ಹೆಚ್ಚಿತು. ಹೆಚ್ಚುತ್ತಿದ್ದ ವ್ಯಾಪಾರದ ಅಸಮತೋಲನ ಅವರ ಆತಂಕಕ್ಕೆ ಕಾರಣವಾಗಿತ್ತು. ವ್ಯಾಪಾರದಲ್ಲಿ ಸಮತೋಲನ ಕಾಯ್ದುಕೊಳ್ಳುವತ್ತ ಅವರು ತೀವ್ರ ಆಸಕ್ತಿ ವಹಿಸಿದರು. ಸ್ವಯಂ ಪೂರ್ಣ ಅರ್ಥ ವ್ಯವಸ್ಥೆ ಹೊಂದಿದ್ದ ಚೀನೀಯರು ಪಾಶ್ಚಾತ್ಯರ ಉತ್ಪನ್ನಗಳಲ್ಲಿ ಹೆಚ್ಚಿನ ಆಸಕ್ತಿ ತೋರಲಿಲ್ಲ. ಕೊನೆಗೆ ಚೀನೀಯರ ಬಳಿ ಇಲ್ಲದಿದ್ದ ಒಂದು ಉತ್ಪನ್ನವನ್ನು 1820 ರಲ್ಲಿ ಪಾಶ್ಚಾತ್ಯರು ಕಂಡು ಕೊಂಡರು. ಅದೇ ಅಫೀಮು. 1829 ಮತ್ತು 1855 ರ ನಡುವೆ ಅಫೀಮಿನ ಕಳ್ಳಸಾಗಣೆ ಚೀನಾದ ದಕ್ಷಿಣ ಕರಾವಳಿಯುದ್ಧಕ್ಕೂ ಗಣನೀಯವಾಗಿ ಹೆಚ್ಚಿತು. 1820 ರಲ್ಲಿ ಚೀನಾಕ್ಕೆ ಕಳ್ಳ ಸಾಗಾಣೆಯಾದ ಅಫೀಮು 9,708 ಪೆಟ್ಟಿಗೆಗಳಷ್ಟು. 15 ವರ್ಷಗಳ ನಂತರ ಅದು 35,445 ಪೆಟ್ಟಿಗೆಗಳಿಗೆ ಹೆಚ್ಚಿತು. ಅಂದರೆ ಅಫೀಮಿನ ಕಳ್ಳ ವ್ಯಾಪಾರ ಶೇಕಡ 400 ರಷ್ಟು ಹೆಚ್ಚಿತು.

1830 ರ ವೇಳೆಗೆ ಚೀನಾದಲ್ಲಿ ಅಫೀಮು ಒಂದು ದುರ್ವ್ಯಸನವಾಗಿ ಪರಿಣಮಿಸಿತು. 40 ಕ್ಕಿಂತ ಕಡಿಮೆ ವಯಸ್ಸಿನ ಎಲ್ಲ ಪುರುಷರು ಅಫೀಮನ್ನು ಸೇವಿಸುತ್ತಿದ್ದರು. ಬಹುತೇಕ ಸೈನ್ಯ ಅಫೀಮಿನ ಚಟಕ್ಕೆ ಬಲಿಯಾಗಿತ್ತು. ಶ್ರೀಮಂತ ವರ್ತಕರಿಂದ ತಾವೋವಾದಿಗಳವರೆಗೆ ಎಲ್ಲಾ ವರ್ಗದ ಜನರೂ ಅದರ ಪ್ರಭಾವಕ್ಕೊಳಗಾಗಿದ್ದರು. 1930 ರಲ್ಲಿ ಚೀನಾದಲ್ಲಿ ಅಫೀಮು ವ್ಯಸನಿಗಳ ಸಂಖ್ಯೆ 12 ದಶಲಕ್ಷದಷ್ಟಿತ್ತು. ಅಫೀಮಿನ ಕಳ್ಳಸಾಗಾಣಿಕೆಯಿಂದಾಗಿ, ಪಾಶ್ಚಾತ್ಯ ದೇಶಗಳ ವ್ಯಾಪಾರದ ಕೊರತೆ ಲಾಭವಾಗಿ ಪರಿವರ್ತನೆಗೊಂಡಿತು. ಚೀನಾ ವ್ಯಾಪಾರದ ಸಮತೋಲನ ಕಾಯ್ದುಕೊಳ್ಳಲು ಸಾಕಾಗುವಷ್ಟು ಚಹ ಮತ್ತು ರೇಷ್ಮೆಯನ್ನು ರಫ್ತು ಮಾಡಲಾಗಲಿಲ್ಲ. ಬದಲಾಗಿ ವ್ಯತ್ಯಾಸವನ್ನು ಸರಿತೂಗಿಸಿಕೊಳ್ಳಲು ಚೀನಾ ತನ್ನ ಉತ್ತಮ ಗುಣಮಟ್ಟದ ಬೆಳ್ಳಿಯನ್ನು ರಫ್ತು ಮಾಡಬೇಕಾಯಿತು. 1835- 36 ನೇ ಆರ್ಥಿಕ ವರ್ಷವೊಂದರಲ್ಲೇ ಚೀನಾ 4.5 ದಶಲಕ್ಷ ಡಾಲರ್ ಮೌಲ್ಯದಷ್ಟು ಬೆಳ್ಳಿಯನ್ನು ರಫ್ತು ಮಾಡಿತು. 1839 ರಲ್ಲಿ ಚೀನಿ ಅಫೀಮು ಸೇವಕರು 100 ದಶಲಕ್ಷ ಟೇಲ್ ವೆಚ್ಚಮಾಡಿದರು. ಆಗ ಸರ್ಕಾರದ ವಾರ್ಷಿಕ ಆದಾಯವೇ ಕೇವಲ 40 ದಶಲಕ್ಷ ಟೇಲ್‌ಗಳಾಗಿತ್ತು. ಬೆಳ್ಳಿಯ ಸೋರಿಕೆ ಚೀನಿ ಸರ್ಕಾರವನ್ನು ದುರ್ಬಲಗೊಳಿಸಿತು.

ಇಂಥಹ ಸಮಸ್ಯೆ ಎದುರಾದಾಗ ಚೀನಿ ಸರ್ಕಾರ ಹಿರಿಯ ಮಂಚು ಅಧಿಕಾರಿಗಳೊಂದಿಗೆ ಚರ್ಚೆ ಆರಂಭಿಸಿತು. ಚರ್ಚೆ ಎರಡು ವರ್ಷಗಳವರೆಗೆ ಮುಂದುವರಿದು ಅಂತಿಮವಾಗಿ ಯಾವ ಕಾರಣಕ್ಕೂ ರಾಜಿ ಮಾಡಿಕೊಳ್ಳಬಾರದೆಂಬ ಅಲ್ಪಸಂಖ್ಯಾತರ ನಿಲುವನ್ನು ಒಪ್ಪಿಕೊಳ್ಳಲಾಯಿತು. 1839 ರಲ್ಲಿ ಚಕ್ರವರ್ತಿ 39 ವಿಧಿಗಳ (ಕಲಮು) ಆದೇಶವನ್ನು ಹೊರಡಿಸಿದನು. ಅದರ ಪ್ರಕಾರ ಅಫೀಮು ಸೇವನೆ ಮತ್ತು ಅಫೀಮು ಮಾರಾಟಕ್ಕೆ ಮರಣದಂಡನೆ ಸೇರಿದಂತೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಲಾಗುವುದೆಂದು ಎಚ್ಚರಿಸಲಾಯಿತು. ವಿಶೇಷ ಆಯುಕ್ತ ಲಿನ್ ತ್ಸೆ-ಸು ನನ್ನು ಈ ನಿಯಮಗಳನ್ನು ಜಾರಿಗೊಳಿಸಲು ಕ್ಯಾಂಟನ್‌ಗೆ ಕಳುಹಿಸಲಾಯಿತು. ಕ್ಯಾಂಟನ್‌ನಲ್ಲಿ ಎರಡು ತಿಂಗಳಲ್ಲಿ ಲಿನ್ 1,600 ಜನರನ್ನು ಬಂಧಿಸಿದನು ಮತ್ತು 11,000 ಪೌಂಡ್ ಅಫೀಮನ್ನು ವಶಪಡಿಸಿಕೊಂಡನು. ಜೂನ್ ತಿಂಗಳಲ್ಲಿ ವಿದೇಶಿ ವರ್ತಕರಿಂದ 20,000 ಪೆಟ್ಟಿಗೆಗಳಷ್ಟು ಅಫೀಮನ್ನು ವಶಪಡಿಸಿಕೊಂಡನು ಮತ್ತು ಅದನ್ನು ಸುಟ್ಟುಹಾಕಿದನು. ಕ್ಯಾಂಟನ್ ನಗರವನ್ನು ವಿದೇಶ ವ್ಯಾಪಾರಕ್ಕೆ ಸಂಪೂರ್ಣವಾಗಿ ಮುಚ್ಚಬೇಕೆಂದು ಲಿನ್ ಆದೇಶಿಸಿದಾಗ ವಿರೋಧಿಸಿದ ಬ್ರಿಟಿಷರು

ಅಫೀಮು ಯುದ್ಧ ಆರಂಭಿಸಿದರು. 1839 ರಿಂದ 1842 ರವರೆಗೆ ನಡೆದ ಅಫೀಮು ಯುದ್ಧ ಚೀನಾದ ಅವಮಾನಕಾರಿ ಸೋಲಿನೊಂದಿಗೆ ಅಂತ್ಯಗೊಂಡಿತು.

## 129.3 ಯುದ್ಧ

1839 ರ ನವೆಂಬರ್ 2 ರಂದು ಎರಡು ಬ್ರಿಟಿಷ್ ಯುದ್ಧ ನೌಕೆಗಳು ಚೀನಾದ ಸಂಪೂರ್ಣ ನೌಕಾ ಪಡೆಯನ್ನು ಸೋಲಿಸಿದವು. ಈ ಘಟನೆಯೊಂದಿಗೆ ಯುದ್ಧ ಆರಂಭವಾಯಿತು. 1840 ರ ಫೆಬ್ರವರಿಯಲ್ಲಿ ಬ್ರಿಟನ್, ಭಾರತದಿಂದ 16 ಯುದ್ಧ ನೌಕೆಗಳು ಮತ್ತು ಇತರ ಸಾಮಗ್ರಿಯನ್ನು 4000 ಸೈನಿಕರೊಂದಿಗೆ ಚೀನಾಕ್ಕೆ ಕಲುಹಿಸಿತು. ಸುದೀರ್ಘ ಚರ್ಚೆಯ ನಂತರ ಬ್ರಿಟಿಷ್ ಸಂಸತ್ತು ಚೀನಾದ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳುವ ಬಗೆಗೆ ಒಂದು ನಿರ್ಣಯವನ್ನು ಅಂಗೀಕರಿಸಿತು. ವಶಪಡಿಸಿಕೊಂಡ ಅಫೀಮಿಗೆ ಪರಿಹಾರ ನೀಡುವಂತೆ, ಬ್ರಿಟಿಷ್ ನಾಗರಿಕರು ಮತ್ತು ಅಧಿಕಾರಿಗಳನ್ನು ನಾಗರಿಕ ದೇಶಗಳ ಸಂಪ್ರದಾಯದಂತೆ ನಡೆಸಿಕೊಳ್ಳುವ ಸಂಬಂಧ ಒಂದು ಒಪ್ಪಂದ ಮಾಡಿಕೊಳ್ಳುವಂತೆ ಹಾಗೂ ಇಚ್ಛಾನುಸಾರ ಬಂಧನದ ವಿರುದ್ಧ ರಕ್ಷಣೆ ಪಡೆಯಲು ಬ್ರಿಟಿಷರಿಗೆ ಒಂದು ದ್ವೀಪವನ್ನು ಬಿಟ್ಟುಕೊಡುವಂತೆ ಚೀನಾ ಸರ್ಕಾರವನ್ನು ಒತ್ತಾಯಿಸುವುದು ಬ್ರಿಟಿಷರ ಉದ್ದೇಶವಾಗಿತ್ತು.

ಎಂದೂ 7000 ಕ್ಕೆ ಮೀರದ ಬ್ರಿಟಿಷ್ ಸೈನ್ಯ ಯಾವುದೇ ಪ್ರತಿರೋಧವಿಲ್ಲದೆ ಕ್ಯಾಂಟನ್ ನಗರವನ್ನು ವಶಪಡಿಸಿಕೊಂಡಿತು ಹಾಗೂ ಯಾಂಗ್ಸಿ ಮತ್ತು ಹಳದಿ ನದಿಗಳ ದ್ವಾರವನ್ನು ಮುಚ್ಚಲಾಯಿತು ಮತ್ತು ಪೀಕಿಂಗ್ ಮಾರ್ಗದ ಆಯಕಟ್ಟಿನ ಸ್ಥಳಗಳನ್ನು ಬ್ರಿಟಿಷ್ ಸೈನಿಕರು ವಶಪಡಿಸಿಕೊಂಡರು. ಚೀನೀಯರು ಶರಣಾಗದೆ ಅನ್ಯ ಮಾರ್ಗವಿರಲಿಲ್ಲ. ಬಡಪಾಯಿ ಆಯುಕ್ತ ಲಿನ್ ಚಕ್ರವರ್ತಿಯ ಅವಕೃಪೆಗೆ ಪಾತ್ರನಾಗಿ ಸ್ಥಾನ ತೆರವು ಮಾಡಿದನು. 1842 ರ ಆಗಸ್ಟ್‌ನಲ್ಲಿ ಹಲವು ಉತ್ತಮ ಭಾಷಣಗಳು ಮತ್ತು ಚೆರ್ರಿ ಬ್ರಾಂದಿಯನ್ನು ಸಾಕಷ್ಟು ಪ್ರಮಾಣದಲ್ಲಿ ಸೇವಿಸಿದ ನಂತರ ನಾನ್‌ಕಿಂಗ್‌ನಲ್ಲಿದ್ದ ಬ್ರಿಟಿಷರ ಕಾರನ್‌ವಾಲೀಸ್ ಹಡಗಿನಲ್ಲಿ ಚೀನೀಯರು ಮತ್ತು ಬ್ರಿಟಿಷರು ಒಂದು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದರು. ಅದರೊಂದಿಗೆ ಯುಗವೊಂದು ಅಂತ್ಯಗೊಂಡು ಮತ್ತೊಂದು ಆರಂಭವಾಯಿತು. ಹಳೆಯ ಚೀನಾದ ದಿನಗಳ ಗಣನೆ ಆರಂಭವಾಯಿತು. ಹಿಂದಿನ ಶತಮಾನಗಳಲ್ಲಿ ದೂರ ಪ್ರದೇಶಗಳ ವರ್ತಕರು ಸ್ವರ್ಗದ ಪುತ್ರ ನಿಗದಿಪಡಿಸಿದ್ದ ನಿಯಮಗಳಿಗೆ ತಮ್ಮನ್ನು ಒಪ್ಪಿಸಿಕೊಂಡಿದ್ದರು. ಮುಂದಿನ ಶತಮಾನದಲ್ಲಿ "ಅನಾಗರಿಕರ" ನಿರ್ದೇಶನದಂತೆ ಚೀನಾ ತನ್ನ ವ್ಯಾಪಾರ ನೀತಿ ಹಾಗೂ ಉಳಿದ ಜಗತ್ತಿನೊಂದಿಗೆ ತನ್ನ ರಾಜಕೀಯ ಮತ್ತು ರಾಜತಾಂತ್ರಿಕ ನೀತಿಯನ್ನು ರೂಪಿಸಿಕೊಳ್ಳುವಂತಾಯಿತು.

## 129.4 ತೆರೆದುಕೊಂಡ ಚೀನಾ

ಈ ಯುದ್ಧ "ಅಫೀಮು ಯುದ್ಧ " ಎಂದು ಕರೆಯಲ್ಪಟ್ಟಿದ್ದರೂ ಅದು ನಡೆದದ್ದು ಅಫೀಮಿಗಾಗಿ ಅಲ್ಲ. ಅಧ್ಯಕ್ಷ ಜಾನ್ ಕ್ವಿನೆ ಆಡಮ್ಸ್ (John Quinay Adams) ಅವರು ಹೇಳಿರುವಂತೆ "ಬೋಸ್ಟನ್ ಬಂದರಿನಲ್ಲಿ ಹಡಗಿನಲ್ಲಿದ್ದ ಚಹವನ್ನು ಸಮುದ್ರಕ್ಕೆ ಎಸೆದದ್ದು ಹೇಗೆ ಉತ್ತರ ಅಮೇರಿಕದ ಕ್ರಾಂತಿಗೆ ಕಾರಣವಲ್ಲವೋ ಅಂತೆಯೇ, ಚೀನಾಕ್ಕೆ ಕಳ್ಳಸಾಗಾಣೆಯಾದ ಕೆಲವು ಸಾವಿರ ಪೆಟ್ಟಿಗೆಗಳ ಅಫೀಮನ್ನು ಚೀನಾ ಸರ್ಕಾರ ವಶಪಡಿಸಿಕೊಂಡಿದ್ದು ಅಫೀಮು ಯುದ್ಧಕ್ಕೆ ಕಾರಣವಲ್ಲ" . ವಿಶ್ವವನ್ನೇ ವಸಾಹತುವಾಗಿ ಮಾಡಿಕೊಳ್ಳುವ ಸ್ಪರ್ಧೆಯಲ್ಲಿ ಐರೋಪ್ಯ ರಾಷ್ಟ್ರಗಳಿಗೆ, ಪೂರ್ವ ಏಷ್ಯಾದಲ್ಲಿ ಚೀನಾ ಕೊನೆಯ ಬಹುಮಾನದ ಪ್ರತೀಕವಾಗಿತ್ತು. ಅಫೀಮು ಯುದ್ಧ ಚೀನಾವನ್ನು ಅದರ ಮಾರುಕಟ್ಟೆ ಮತ್ತು ಸಂಪನ್ಮೂಲಗಳ ಜೊತೆಗೆ ಶೋಷಣೆಗೆ ಮುಕ್ತಗೊಳಿಸುವ ಉದ್ದೇಶದ ಪ್ರಥಮ ಹೆಜ್ಜೆಯಾಗಿತ್ತು. ಯುದ್ಧ ಚೀನಾವನ್ನು ದಹಿಕವಾಗಿ ವಿದೇಶ ವ್ಯಾಪಾರಕ್ಕೆ ತೆರೆಯಿತು. ಆದಾಗ್ಯೂ ಚೀನಾ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿ ಹೊರ ಪ್ರಪಂಚಕ್ಕೆ ತೆರೆದುಕೊಂಡಿದ್ದು ಯುದ್ಧಾನಂತರದ ಪರಿಣಾಮಗಳಿಂದಾಗಿಯೆ. ಅಫೀಮು ಯುದ್ಧಾನಂತರ ಸಹಿ ಹಾಕಲಾದ ಅಸಮಾನ ಒಪ್ಪಂದಗಳಿಂದಾಗಿ ಚೀನಾ ಹೊರ ಪ್ರಪಂಚಕ್ಕೆ ತೆರೆದುಕೊಳ್ಳಬೇಕಾಯಿತು.

ನಾನ್‌ಕಿಂಗ್ ಒಪ್ಪಂದ ಮತ್ತು ಪೂರಕ ಒಪ್ಪಂದಗಳಿಂದಾಗಿ ಚೀನಾ ವಿಶ್ವಕ್ಕೆ ತೆರೆದುಕೊಂಡಿತು. ಚೀನಾ ಅರೆ-ಊಳಿಗಮಾನ್ಯ ಮತ್ತು ಅರೆ ವಸಾಹತು ರಾಷ್ಟ್ರವಾಯಿತು. ಅದರ ಪರಿಣಾಮಗಳು ದ ೂರವ್ಯಾಪಿ ಹಾಗೂ ದೀರ್ಘಕಾಲಿಕವಾಗಿದ್ದವು. ಆದಾಗ್ಯೂ ನಾನ್‌ಕಿಂಗ್ ಒಪ್ಪಂದವನ್ನು ಮುಕ್ತ ವ್ಯಾಪಾರ ಸೌಲಭ್ಯ ಪಡೆಯಲು ಮಾಡಿಕೊಂಡಿದ್ದರಿಂದ ಅದರ ಆರ್ಥಿಕ ಪರಿಣಾಮಗಳು ಅತ್ಯಂತ ಕಠೋರವಾಗಿದ್ದವು.

## 129.5 ಒಪ್ಪಂದಗಳು ಮತ್ತು ಅವುಗಳ ಪರಿಣಾಮಗಳು

ಬ್ರಿಟಿಷರು ಮತ್ತು ಚೀನೀಯರ ನಡುವೆ ಏರ್ಪಟ್ಟ ನಾನ್‌ಕಿಂಗ್ ಒಪ್ಪಂದ (ಆಗಸ್ಟ್ 1942) ಮತ್ತು ಪೂರಕ ಒಪ್ಪಂದಗಳು (ಜುಲೈ ಮತ್ತು ಅಕ್ಟೋಬರ್ 1943) ಪ್ರಥಮ ಅವಮಾನಕಾರಿ ಅಸಮಾನ ಒಪ್ಪಂದಗಳಾಗಿದ್ದವು. ಅವುಗಳಿಂದಾಗಿ ಚೀನಾದಲ್ಲಿ ವ್ಯಾಪಾರದ ಅವಕಾಶಗಳು ಹೆಚ್ಚಿದವು ಮತ್ತು ಬ್ರಿಟಿಷರ ಚಟುವಟಿಕೆಗಳು ವಿಸ್ತರಿಸಿದವು. ಒಪ್ಪಂದಗಳ ಪ್ರಕಾರ ಚೀನಾ ಕ್ಯಾಂಟನ್, ಫೂಚೌ, ಝಿಯಮೆನ್(Xiamen), ಲಿಂಬೋ(Linbou) ಮತ್ತು ಷಾಂಘಾಯ್ ಬಂದರುಗಳನ್ನು ವಿದೇಶ ವ್ಯಾಪಾರಕ್ಕೆ ತೆರೆಯಬೇಕಾಯಿತು. 21 ದಶಲಕ್ಷ ಮೆಕ್ಸಿಕೋ ಡಾಲರ್ ಯುದ್ಧ ವೆಚ್ಚವನ್ನು ಚೀನಾ ಸರ್ಕಾರ ಕೊಡಬೇಕಾಯಿತು. ಹಾಂಗ್‌ಕಾಂಗ್‌ನ್ನು ಬ್ರಿಟಿಷರಿಗೆ ಬಿಟ್ಟುಕೊಡಲಾಯಿತು. ಅದರಿಂದ ಚೀನಾದ ಸಮಗ್ರತೆಗೆ ಭಂಗ ಉಂಟಾಯಿತು. ಆಮದು ಸುಂಕಗಳ ವಿಷಯದಲ್ಲಿ ಚೀನಾ ಇತರ ದೇಶಗಳೊಂದಿಗೆ ಚರ್ಚಿಸಬೇಕೆಂದು ಒಪ್ಪಂದದಲ್ಲಿ ಸೂಚಿಸಲಾಯಿತು. ಹೀಗೆ ಚೀನಾ ತನ್ನ ಆಮದು ಸಂಕುಗಳ ಮೇಲಿನ ಅಧಿಕಾರವನ್ನು ಕಳೆದುಕೊಂಡಿತು. ಅಲ್ಲದೆ ಆಮದು ಸುಂಕವನ್ನು ಶೇ. 65 ರಿಂದ ಶೇ. 5ಕ್ಕೆ ಇಳಿಸಲಾಯಿತು. ಈ ಕ್ರಮದಿಂದ ಚೀನಾದ ಸ್ಥಳೀಯ ಕೈಗಾರಿಕೆಗಳು ನಾಶ ಹೊಂದಿದವು. ನಾನ್‌ಕಿಂಗ್ ಒಪ್ಪಂದ ಕೊ-ಹಾಂಗ್‌ನ್ನು ರದ್ದು ಪಡಿಸಿತು. ಅದರಿಂದಾಗಿ ಬ್ರಿಟಿಷ್ ವರ್ತಕರು ಸ್ವತಂತ್ರವಾಗಿ ವ್ಯಾಪಾರ ನಡೆಸುವ ಅವಕಾಶ ಪಡೆದರು. ಒಪ್ಪಂದ ಬ್ರಿಟಿಷ್ ರಾಷ್ಟ್ರೀಯರನ್ನು ಚೀನಾದ ಕಾನೂನಿನ ವ್ಯಾಪ್ತಿಯಿಂದ ಹೊರಗಿಟ್ಟಿತು. ಈ ಮೂಲಕ ಚೀನಾದ ನೆಲದಲ್ಲಿ ಅನ್ಯ ದೇಶದ ಕಾನೂನು ಕ್ರಿಯೆಗೆ ಅವಕಾಶ ನೀಡಲಾಯಿತು. ಜೊತೆಗೆ ಬ್ರಿಟಿಷ್‌ರೊಂದಿಗೆ ವಾಸಿಸುವ, ವ್ಯವಹರಿಸುವ ಅಥವಾ ಅವರಿಂದ ನೇಮಕಗೊಂಡ ಚೀನೀಯರಿಗೂ ಚೀನಿ ಕಾನೂನಿನಿಂದ ವಿನಾಯಿತಿ ನೀಡಲಾಯಿತು. ಈ ರಿಯಾಯಿತಿಗಳಿಂದ ಚೀನೀ ಅಪರಾಧಿಗಳಿಗೆ ಹೆಚ್ಚಿನ ಪ್ರಯೋಜನವಾಯಿತು. ಅಲ್ಲದೆ ವಿದೇಶಿ ದಾಳಿಕಾರರಿಗೆ ತಮ್ಮ ಗೂಢಚಾರ ಮತ್ತು ಅಪರಾಧಿಗಳ ಜಾಲವನ್ನು ಸ್ಥಾಪಿಸಿಕೊಳ್ಳಲು ಹಾಗೂ ರಕ್ಷಿಸಿಕೊಳ್ಳಲು ರಿಯಾಯಿತಿ ಕಾನೂನು ಬದ್ಧ ಹಕ್ಕು ದೊರೆಯಿತು. ಒಪ್ಪಂದಗಳ ಪ್ರಕಾರ ಬ್ರಿಟಿಷರು ಪ್ರತಿಯೊಂದು ಒಪ್ಪಂದದ ಬಂದರಿನಲ್ಲೂ ತಮ್ಮ ಒಂದು ಯುದ್ಧ ನೌಕೆಯನ್ನು ಹೊಂದಲು ಅವಕಾಶ ಪಡೆದರು. ಹೀಗೆ ಪ್ರಥಮ ಬಾರಿಗೆ ವಿದೇಶಿ ಯುದ್ಧ ನೌಕೆಗಳಿಗೆ ಚೀನಾದ ನೀರನ್ನು ಪ್ರವೇಶಿಸಲು ಮುಕ್ತ ಅವಕಾಶ ದೊರೆಯಿತು. ಬ್ರಿಟಿಷ್ ವರ್ತಕರಿಗೆ ತಮ್ಮ ಕುಟುಂಬ ವರ್ಗದವರನ್ನು ಒಪ್ಪಂದದ ಬಂದರುಗಳಿಗೆ ಕರೆತರಲು ನಾನ್‌ಕಿಂಗ್ ಒಪ್ಪಂದ ಅವಕಾಶ ಕಲ್ಪಿಸಿತು. ಚೀನಿ ಸ್ಥಳೀಯ ಅಧಿಕಾರಿಗಳು ಬ್ರಿಟಿಷ್ ವರ್ತಕರಿಗೆ ವಸತಿ ಕಲ್ಪಿಸುವಂತೆ ಸೂಚಿಸಲಾಯಿತು. ಇಂತಹ ವ್ಯವಸ್ಥೆಯಿಂದ ಒಪ್ಪಂದದ ಬಂದರುಗಳಲ್ಲಿ ವಿವಾದಗಳು ನಿವಾರಣೆಯಾಗುತ್ತವೆಂದು ಭಾವಿಸಿದ ಚೀನಿ ಅಧಿಕಾರಿಗಳು ಅದನ್ನು ಸಂತೋಷದಿಂದಲೇ ಒಪ್ಪಿದರು. ಆದರೆ ಈ ವ್ಯವಸ್ಥೆಯನ್ನು ಬಳಸಿಕೊಂಡ ವಿದೇಶೀಯರು ಈ ಬಂದರುಗಳಲ್ಲಿ ರಿಯಾಯಿತಿ ಪ್ರದೇಶಗಳನ್ನು ಸ್ಥಾಪಿಸಿದ್ದು ಚೀನಿ ಅಧಿಕಾರಿಗಳಿಗೆ ವಿಸ್ಮಯ ಉಂಟುಮಾಡಿತು. ನಾನ್‌ಕಿಂಗ್ ಒಪ್ಪಂದ "ಅತಿ ವಿಶಿಷ್ಟದೇಶ" ಎಂಬ ವಿಧಿಯನ್ನು ಒಳಗೊಂಡಿತ್ತು. ಮುಂದೆ ಇದನ್ನು ಎಲ್ಲ ದೇಶಗಳಿಗೂ ವಿಸ್ತರಿಸುವ ಮೂಲಕ ಚೀನಾದೊಂದಿಗೆ ವ್ಯವಹಾರ ಹೊಂದಿದ್ದ ಎಲ್ಲ ದೇಶಗಳಿಗೆ ಬ್ರಿಟಿಷರಿಗೆ ಸಮಾನವಾದ ಹಕ್ಕುಗಳನ್ನು ನೀಡಲಾಯಿತು.

"ಅತಿ ವಿಶಿಷ್ಟ ದೇಶ" ಸ್ಥಾನಮಾನದ ಜೊತೆಗೆ ಒಪ್ಪಂದದ ಬಂದರುಗಳ ಸುತ್ತಲಿನ ಪ್ರದೇಶಗಳಲ್ಲಿ ಪ್ರವಾಸ ಮಾಡುವ ನಿಯಮಿತ ಹಕ್ಕನ್ನು ಚೀನಾ ಸರ್ಕಾರ ನೀಡಿತು. ಅಮೇರಿಕ, ಫ್ರಾನ್ಸ್, ಬೆಲ್ಜಿಯಂ, ನಾರ್ವೆ, ಸ್ವೀಡನ್ ಮತ್ತು ಪೋರ್ಚುಗಲ್ ಕೂಡ ಅದೇ ರೀತಿಯ ಒಪ್ಪಂದಗಳನ್ನು ಚೀನಾದೊಂದಿಗೆ ಮಾಡಿಕೊಂಡವು. ಹೀಗೆ 1839 ರ ಅಫೀಮು ಯುದ್ಧ ಚೀನಾವನ್ನು ಐರೋಪ್ಯರಿಗೆ ತೆರೆದಿಟ್ಟಿತು.

"ಕ್ಯಾಂಟನ್ ವ್ಯವಸ್ಥೆ" ಯನ್ನು ರದ್ದುಪಡಿಸಿದ್ದು ಮತ್ತು ಐದು ಬಂದರುಗಳನ್ನು ವ್ಯಾಪಾರಕ್ಕೆ ತೆರೆದಿದ್ದರಿಂದಾಗಿ ವಿದೇಶ ವ್ಯಾಪಾರದಲ್ಲಿ ಅಪಾರ ಪ್ರಗತಿಯಾಯಿತು. ಚೀನಾದ ಆಗ್ನೇಯ ಕರಾವಳಿಯಲ್ಲಿ ಷಾಂಘಾಯ್ ಮತ್ತು ಕ್ಯಾಂಟನ್ ನಡುವೆ ಇರುವ ಕರಾರಿನ ಬಂದರುಗಳು ಪಾಶ್ಚಾತ್ಯ ವರ್ತಕರಿಗೆ ಚೀನಾದ ಅತ್ಯಂತ ಅಭಿವೃದ್ಧಿ ಹೊಂದಿದ ಪ್ರದೇಶಕ್ಕೆ ಪ್ರವೇಶಾಧಿಕಾರ ನೀಡಿದವು. ಪಾಶ್ಚಾತ್ಯರು ಚೀನಾದಿಂದ ಮುಖ್ಯವಾಗಿ ರೇಷ್ಮೆ ಮತ್ತು ಚಹವನ್ನು ಕೊಳ್ಳುತ್ತಿದ್ದರು. ರೇಷ್ಮೆ ಮತ್ತು ಚಹಕ್ಕೆ ಹೆಚ್ಚುತ್ತಿದ್ದ ಬೇಡಿಕೆಯಿಂದಾಗಿ ಅವುಗಳನ್ನು ಉತ್ಪಾದಿಸುತ್ತಿದ್ದ ಕರಾರಿನ ಬಂದರುಗಳ ಸುತ್ತಲಿನ ಪ್ರದೇಶಗಳು ವಿಸ್ತಾರವಾದವು ಮತ್ತು ವಿದೇಶ ವ್ಯಾಪಾರದಿಂದ ಹೆಚ್ಚು ಪ್ರಯೋಜನ ಪಡೆದವು.

ಬೆಳೆಯುತ್ತಿದ್ದ ವ್ಯಾಪಾರದ ಚಟುವಟಿಕೆಗಳು ಒಂದು ಹಣಕಾಸಿನ ಬಿಕ್ಕಟ್ಟನ್ನು ಸೃಷ್ಟಿಸಿತು. ಸ್ಪೈನಿನ ಡಾಲರ್‌ನ ಬೆಲೆ ಅಸಾಮಾನ್ಯ ಪ್ರಮಾಣದಲ್ಲಿ ಏರಿಕೆಯಾಯಿತು. ಅದರಿಂದಾಗಿ 1853 ರಲ್ಲಿ ಕ್ಯಾಂಟನ್ ಲೆಕ್ಕಾಚಾರದ ಘಟಕವಾಗಿ ಅದರ ಬಳಕೆಯನ್ನು ರದ್ದುಪಡಿಸಿತು ಮತ್ತು ಮೆಕ್ಸಿಕೊ ಡಾಲರ್ ಅದರ ಸ್ಥಾನ ಪಡೆಯಿತು. ಚೀನಾದ ತಾಮ್ರದ ಹಣ, ದುರಾಡಳಿತ ಮತ್ತು ತಾಮ್ರದ ಸರಬರಾಜು ಸಾಕಷ್ಟು ಪ್ರಮಾಣದಲ್ಲಿ ಇರದಿದ್ದರಿಂದ, ತನ್ನ ಮೌಲ್ಯವನ್ನು ಕಳೆದುಕೊಳ್ಳಲಾರಂಭಿಸಿತು. ಈ ಹಣಕಾಸಿನ ಬಿಕ್ಕಟ್ಟು ಚೀನಾದ ಅರ್ಥವ್ಯವಸ್ಥೆಯನ್ನು ಧ್ವಂಸಗೊಳಿಸಿತು. 1853 ರಲ್ಲಿ ಚೀನಾದಲ್ಲಿ ಕಾಗದ ಹಣವನ್ನು ಚಲಾವಣೆಗೆ ತರಲಾಯಿತು.

ಅಫೀಮು ಯುದ್ಧಕ್ಕೆ ಮೊದಲೇ ಚೀನಾದ ನಗರ ಪ್ರದೇಶಗಳಲ್ಲಿ ಮಾರುಕಟ್ಟೆ ಆಧಾರಿತ ಅರ್ಥವ್ಯವಸ್ಥೆ ಬೆಳೆಯುತ್ತಿತ್ತು. ಕೃಷಿ ಮತ್ತು ಗೃಹಕೈಗಾರಿಕೆಗಳನ್ನು ಆಧರಿಸಿದ್ದ ಹಳೆಯ ಸ್ವಯಂಪೂರ್ಣವಾದ ಅರ್ಥ ವ್ಯವಸ್ಥೆ ಒತ್ತಡಕ್ಕೆ ಸಿಲುಕಿ ಬದಲಾಗುತ್ತಿತ್ತು. ನೂತನ ವ್ಯವಸ್ಥೆಯಲ್ಲಿ ಬಂಡವಾಳವಾಗಿ ವ್ಯವಸ್ಥೆ ಬೆಳೆಯಲಾರಂಭಿಸಿತು.

ಅಫೀಮು ಯುದ್ಧಾನಂತರ ಚೀನಾ ಪಶ್ಚಿಮದ ಬೌದ್ಧಿಕ ಸಾಮರ್ಥ್ಯವನ್ನು ಗುರುತಿಸಿತು. ಪಶ್ಚಿಮದ ರಾಜಕೀಯ ತತ್ವಗಳು, ಸಾಮಾಜಿಕ ರಚನೆ ಮತ್ತು ಕೆಲವು ಕ್ಷೇತ್ರಗಳಲ್ಲಿ, ತಂತ್ರ ಜ್ಞಾನವನ್ನು ಚೀನಾದಲ್ಲಿ ಜಾರಿಗೆ ತರಲಾಯಿತು. ಪಶ್ಚಿಮದ ಸಂಸದೀಯ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿ ತತ್ವಗಳನ್ನು ಅಸ್ಪಷ್ಟವಾಗಿ ಪರಿಚಯಿಸಲಾಯಿತು. ಪಶ್ಚಿಮದ ರಾಜನೀತಿಗೆ ಮನ್ನಣೆ ದೊರೆಯಲಾರಂಭಿಸಿತು. ಚೀನಿ ಬರಹಗಾರರಲ್ಲೊಬ್ಬನಾದ ವೈ ಯುವಾನ್, ಪ್ರಥಮವಾಗಿ ಪಶ್ಚಿಮದೊಂದಿಗೆ ಹೋರಾಡಲು ಚೀನಾ ಪಶ್ಚಿಮದಿಂದಲೇ ಕಲಿಯಬೇಕಾದ ಅಗತ್ಯದ ಬಗ್ಗೆ ಮಾತನಾಡಿದನು.

ಅಫೀಮು ಯುದ್ಧ ಚೀನಾದ ಊಳಿಗಮಾನ್ಯ ವ್ಯವಸ್ಥೆಯ ದೌರ್ಬಲ್ಯವನ್ನು ಜಗತ್ತಿಗೆ ತೋರಿಸಿತು. ಯುದ್ಧಕ್ಕಾಗಿ ಮಾಡಲಾದ ಅಪಾರ ವೆಚ್ಚ ಮತ್ತು ಯುದ್ಧಾನಂತರ ಚೀನಾ ಕೊಡಬೇಕಾಗಿ ಬಂದ ಯುದ್ಧ ವೆಚ್ಚ ಎರಡೂ ರೈತರ ಹೆಗಲಿಗೆ ಬಿದ್ದಿತು. ಮಂಚು ಸರ್ಕಾರ ತನ್ನ ಜನರನ್ನು ಆಳಲು ಮತ್ತು ರಕ್ಷಿಸಲು ಅಸಮರ್ಥವಾಯಿತು. ಚೀನಾದ ಅರ್ಥ ವ್ಯವಸ್ಥೆ ಹಳಿ ತಪ್ಪಿತು. ಬಡತನ ಹೆಚ್ಚಿತು; ದೇಶಾದ್ಯಂತ ಬಂಡಾಯಗಳು ಆರಂಭವಾದವು. ಪ್ರತಿರೋಧದ ಎಲ್ಲ ಮಾರ್ಗಗಳನ್ನು ಬಳಸದೆ ನಾನ್‌ಕಿಂಗ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಮಂಚು ಸರ್ಕಾರ ತನ್ನ ದೌರ್ಬಲ್ಯವನ್ನು ಪ್ರದರ್ಶಿಸಿತು. ಅಫೀಮು ಯುದ್ಧ ಮಂಚು ಸರ್ಕಾರಕ್ಕೆ ಅಪಕೀರ್ತಿ ತಂದಿತು ಮತ್ತು ಜನಪ್ರಿಯ ಚಳುವಳಿಗಳಿಗೆ ಉತ್ತೇಜನ ನೀಡಿತು.

ಸಾಮಾಜಿಕ ಗೊಂದಲಗಳು ಮತ್ತು ಮಂಚು ವಂಶದ ದೌರ್ಬಲ್ಯವನ್ನು ಕಂಡ ಚೀನಾದ ಬುದ್ಧಿಜೀವಿಗಳು ಚೀನಾವನ್ನು ಬಲಪಡಿಸಲು ಯತ್ನಿಸಿದರು. ಸರ್ಕಾರದಂತಲ್ಲದೆ ಬುದ್ಧಿಜೀವಿಗಳು ಕೇವಲ ಪಾಶ್ಚಾತ್ಯ ತಂತ್ರಜ್ಞಾನ ಹಾಗೂ ಕೈಗಾರಿಕೆಗಳನ್ನು ಅಳವಡಿಸಿಕೊಳ್ಳುವುದು ಸಾಕಾಗುವುದಿಲ್ಲ ಎಂದು ನಂಬಿದ್ದರು. ಚೀನಾದ ರಾಜಕೀಯ ವ್ಯವಸ್ಥೆ ಬದಲಾಗಬೇಕೆಂದು ಅವರು ಬಯಸಿದ್ದರು. ಅಧಿಕಾರಿಗಳಂತೆಯೇ ಅವರು ಸರ್ಕಾರ ಬಂಡವಾಳಶಾಹಿಯ ಬೆಳವಣಿಗೆಗೆ ಅವಕಾಶ ನೀಡಬೇಕು ಮತ್ತು ರಕ್ಷಿಸಬೇಕು ಹಾಗೂ ಪಾಶ್ಚಾತ್ಯರನ್ನು ಯುದ್ಧ ಕ್ಷೇತ್ರದಲ್ಲಿ ಎದುರಿಸಲು ಸೈನ್ಯವನ್ನು ಆಧುನೀಕರಿಸಬೇಕೆಂದು ಬಯಸಿದ್ದರು. ಅಲ್ಲದೆ ಬುದ್ಧಿಜೀವಿಗಳು ಸಂಸದೀಯ ವ್ಯವಸ್ಥೆಯನ್ನು ಬೆಂಬಲಿಸಿದರು.

## 129.6 ದ್ವಿತೀಯ ಅಫೀಮು ಯುದ್ಧ (1856-60) - ಕಾರಣಗಳು

ನಾನ್‌ಕಿಂಗ್ ಒಪ್ಪಂದದ ನಂತರವೂ ಚೀನೀಯರು ಮತ್ತು ವಿದೇಶೀಯರ ಸಂಬಂಧದಲ್ಲಿ ಗಣನೀಯ ಸುಧಾರಣೆಗಳೇನು ಕಂಡು ಬರಲಿಲ್ಲ. ಮಂಚು ಸರ್ಕಾರ ಪಾಶ್ಚಾತ್ಯರ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳಲೇ ಇಲ್ಲ. ತನ್ನ ಹೊಣೆಗಾರಿಕೆಯನ್ನು ಅದು ಕಡೆಗಣಿಸಿತು. ಚೀನೀಯರ ಶ್ರೇಷ್ಠತೆಯ ಭಾವನೆಗಳು ಹಾಗೆಯೇ ಉಳಿದವು. ಕ್ಯಾಂಟನ್‌ನಲ್ಲಿ ನಿರ್ಬಂಧಗಳು ಪೂರ್ಣವಾಗಿ ನಿವಾರಣೆಯಾಗಲಿಲ್ಲ. 1845 ಮತ್ತು 1855 ರ ನಡುವೆ ಹೊಸ ಪ್ರಶ್ನೆಗಳು ಉದ್ಭವಿಸಿದವು. ಇಂಗ್ಲೆಂಡ್ ಮತ್ತು ಅಮೆರಿಕಾದಿಂದ ಅಪಾರ ಸಂಖ್ಯೆಯಲ್ಲಿ ಪ್ರಾಟೆಸ್ಟಂಟ್ ಧರ್ಮ ಪ್ರಚಾರಕರು ಆಗಮಿಸಿದರು. ವ್ಯಾಪಾರ ಗಣನೀಯವಾಗಿ ಹೆಚ್ಚಿತು. ಕ್ಯಾಲಿಫೋರ್ನಿಯ, ವೆಸ್ಟ್‌ಇಂಡೀಸ್, ಆಸ್ಟ್ರೇಲಿಯ ಮತ್ತು ದಕ್ಷಿಣ ಅಮೆರಿಕದಲ್ಲಿ ಚೀನಿ ಕಾರ್ಮಿಕರಿಗಿದ್ದ ಅಪಾರ ಬೇಡಿಕೆ ಅಮಾನವೀಯ ವ್ಯವಹಾರಗಳಿಗೆ ಕಾರಣವಾಯಿತು. ಚೀನಿ ಕೂಲಿಕಾರರನ್ನು ಕ್ರೂರವಾಗಿ ನಡೆಸಿಕೊಳ್ಳಲಾಯಿತು ಮತ್ತು ಅವರಿಗೆ ಅತ್ಯಂತ ಕಡಿಮೆ ವೇತನ ನೀಡಲಾಯಿತು. ಚೀನಾದಲ್ಲಿ ವಿದೇಶೀಯರಿಗೆ ದೊರೆತ ವಿಶೇಷ ಸೌಲಭ್ಯಗಳಿಂದ ವಿದೇಶಿ ಅಪರಾಧಿಗಳಿಗೆ ಲಾಭವಾಯಿತು.

ಇಂಥಹ ಪರಿಸ್ಥಿತಿಯಲ್ಲಿ ಇಂಗ್ಲೆಂಡ್, ಅಮೇರಿಕ, ಫ್ರಾನ್ಸ್ ಮತ್ತು ರಷ್ಯ ಒಪ್ಪಂದಗಳ ಪುನರ್ ವಿಮರ್ಶೆಗೆ ಒತ್ತಾಯಿಸಿದವು. ಆದರೆ ಚೀನಾ ವಿರೋಧಿಸಿತು. 1850 ರಲ್ಲಿ ನೂತನ ಮಂಚು ಚಕ್ರವರ್ತಿ ಸಿಂಹಾಸನವನ್ನೇರಿದನು. ಆದರೆ ಅವನು ತನ್ನ ಹಿಂದಿನವನಿಗಿಂತ ಹೆಚ್ಚು ಮಣಿಯುವ ಸ್ವಭಾವದವನಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಚೀನೀಯರನ್ನು ಮಣಿಸಲು ಯುದ್ಧ ಅನಿವಾರ್ಯ ಎಂಬ ನಿರ್ಧಾರಕ್ಕೆ ವಿದೇಶೀಯರು ಬಂದರು.

1856 ರ ಒಂದು ಘಟನೆ ಯುದ್ದ ಆರಂಭಿಸಲು ಬ್ರಿಟಿಷರಿಗೆ ಒಂದು ಉಪಯುಕ್ತ ನೆಪವಾಯಿತು. "ಆರೋ" ಎಂಬ ಬ್ರಿಟಿಷ್ ಹಡಗನ್ನು ಪ್ರವೇಶಿಸಿದ ಚೀನಿ ಅಧಿಕಾರಿಗಳು ಅದರ ನಾವಿಕರನ್ನು ಬಂಧಿಸಿದರು. ಅದೇ ಸಮಯದಲ್ಲಿ ದೂರದ ಕ್ವಾಂಗ್ಸಿ ಪ್ರಾಂತ್ಯದಲ್ಲಿ ಫ್ರೆಂಚ್ ಪಾದ್ರಿಯೊಬ್ಬನ ಕೊಲೆಯಾಗಿದ್ದರಿಂದ ಫ್ರೆಂಚರು ಉಗ್ರ ಕ್ರಮಕ್ಕೆ ಸಿದ್ದರಾದರು. ಬ್ರಿಟಿಷರು ಭಾರತದಲ್ಲಿ 1857 ರ ದಂಗೆಯನ್ನು ನಿಯಂತ್ರಿಸುವ ಕಾರ್ಯದಲ್ಲಿ ತೊಡಗಿದ್ದಾಗ್ಯೂ ಮತ್ತು ಫ್ರೆಂಚರು ಐರೋಪ್ಯ ಯುದ್ದಗಳಲ್ಲಿ ಮುಳುಗಿದ್ದರೂ ಚೀನಾದೊಂದಿಗೆ ಯುದ್ದ ಹೂಡಲು ಇಬ್ಬರೂ ನಿರ್ಧರಿಸಿದರು. ಅವರು ಅಮೇರಿಕ ಮತ್ತು ರಷ್ಯವನ್ನು ಸಹಕರಿಸುವಂತೆ ಕೋರಿದರಾದರೂ ಅವುಗಳು ತಿರಸ್ಕರಿಸಿದವು.

## 129.7 ಯುದ್ಧದ ಪಥ

ಹೋರಾಟ ಏಕಪಕ್ಷೀಯವಾಗಿತ್ತು. ಕ್ಯಾಂಟನ್ ನಗರವನ್ನು ವಶಪಡಿಸಿಕೊಳ್ಳಲಾಯಿತು. ಅಲ್ಲಿನ ವೈಸರಾಯ್ ಬಂಧಿಯಾದನು. ನಗರದ ಆಡಳಿತವನ್ನು ಮೂರು ವರ್ಷಗಳ ಕಾಲ ಮಿತ್ರ ದೇಶಗಳ ಸಮಿತಿಯ ಅಧೀನದ ಒಂದು ಕೈಗೊಂಬೆ ಸರ್ಕಾರ ನಿರ್ವಹಿಸಿತು. ಉತ್ತರದಲ್ಲಿ ಟೀನ್‌ಟ್ಸಿನ್ ವಿದೇಶೀ ಸೈನ್ಯದ ವಶವಾಯಿತು. ಅಲ್ಲಿ ನಾನ್‌ಕಿಂಗ್ ಮತ್ತು ಕ್ಯಾಂಟನ್‌ನಲ್ಲಿ ಎದುರಿಸಿದ್ದ ಚಕ್ರಾಧಿಪತ್ಯದ ಆಯುಕ್ತನೊಂದಿಗೆ ಮಿತ್ರ ರಾಷ್ಟ್ರಗಳು ಮಾತುಕತೆ ನಡೆಸಿದವು. ಈ ಆಯುಕ್ತವನ್ನು ಭೇಟಿಯಾದಾಗ ಅವನಿಗೆ ಕ್ಯಾಂಟನ್‌ನಲ್ಲಿ ವಶಪಡಿಸಿಕೊಳ್ಳಲಾಗಿದ್ದ ಚೀನೀಯರ ಪ್ರತಿರೋಧಕ್ಕೆ ಸಂಬಂಧಿಸಿದ ಒಂದು ರಹಸ್ಯ ವರದಿಯ ಪ್ರತಿಯನ್ನು ಬ್ರಿಟಿಷ್ ದ್ವಿಭಾಷಿ ನೀಡಿದನು. ಅದು ಆಯುಕ್ತನೇ ಚಕ್ರವರ್ತಿಗೆ ಸಲ್ಲಿಸಿದ್ದ ವರದಿಯಾಗಿತ್ತು. ಈ ವರದಿಯಲ್ಲಿ ಅವನು ಅನಾಗರಿಕರನ್ನು ಮೋಸಗೊಳಿಸುವ ಉದ್ದೇಶದಿಂದಲೇ ಅವರನ್ನು ಸಮಾಧಾನಪಡಿಸಿದ್ದಾಗಿ ಒಪ್ಪಿಕೊಂಡಿದ್ದನು. ಪೀಕಿಂಗ್‌ಗೆ ಹಿಂದಿರುಗಿದ ಅವನು ಚಕ್ರವರ್ತಿಗೆ ಎಲ್ಲವನ್ನೂ ನಿವೇದಿಸಿಕೊಂಡನು. ಅನಂತರ ಈ ಅಧಿಕಾರ ಆತ್ಮಹತ್ಯೆ ಮಾಡಿಕೊಂಡನು. 1858 ರಲ್ಲಿ ಒಪ್ಪಂದಗಳು ಏರ್ಪಟ್ಟವು. ಆದರೆ ಪೀಕಿಂಗ್‌ನಲ್ಲಿ ಅವು ಪ್ರಕಟಗೊಳ್ಳುವ ಮೊದಲೇ, ಮತ್ತೆ ಘರ್ಷಣೆಗಳು ಆರಂಭವಾದವು. ಅಂತಿಮವಾಗಿ 1860 ರಲ್ಲಿ ಪೀಕಿಂಗ್ ಒಡಂಬಡಿಕೆಗಳಿಗೆ ಸಹಿ ಹಾಕಲಾಯಿತು.

## 129.8 ದ್ವಿತೀಯ ಒಪ್ಪಂದ

ದ್ವಿತೀಯ ಒಪ್ಪಂದ ವ್ಯವಸ್ಥೆ ಐದು ಹೊಸ ಒಪ್ಪಂದಗಳು, ಮೂರು ಒಡಂಬಡಿಕೆಗಳು ಮತ್ತು ತೆರಿಗೆ ಹಾಗೂ ವ್ಯಾಪಾರಕ್ಕೆ ಸಂಬಂಧಿಸಿದ ಹಲವಾರು ಹೊಸ ಕರಾರುಗಳನ್ನು ಒಳಗೊಂಡಿತ್ತು. ಚೀನಾದ ಮುಖ್ಯ ಭೂಭಾಗದಲ್ಲಿ ಹಾಂಗ್‌ಕಾಂಗ್ ಎದುರಿಗಿದ್ದ ಕೌಲೂನ್‌ನನ್ನು ಬ್ರಿಟಿಷರಿಗೆ ಬಿಟ್ಟುಕೊಡಲಾಯಿತು. ಬ್ರಿಟನ್ ಮತ್ತು ಫ್ರಾನ್ಸ್‌ಗೆ ಹೊಸದಾಗಿ ಯುದ್ದ ವೆಚ್ಚ ಕೊಡಬೇಕಾಯಿತು. ವಿದೇಶಿ ರಾಜತಾಂತ್ರಿಕ ಪ್ರತಿನಿಧಿಗಳು ಪೀಕಿಂಗ್‌ನಲ್ಲಿ ನೆಲೆಸಲು ಅನುಮತಿ ನೀಡಲಾಯಿತು. ಮತ್ತು ಅವರಿಗೆ ಹೊಸದಾಗಿ ರಚಿಸಲಾದ ವಿದೇಶ ವ್ಯವಹಾರಗಳ ಸಚಿವಾಲಯದೊಂದಿಗೆ ವ್ಯವಹರಿಸಲು ಅನುಮತಿ ನೀಡಲಾಯಿತು. ಅಧಿಕೃತ ವ್ಯವಹಾರಗಳಲ್ಲಿ "ಅನಾಗರಿಕ" ಎಂಬ ಪದದ ಬಳಕೆಯನ್ನು ಪ್ರತಿಬಂಧಿಸಲಾಯಿತು. ಚಕ್ರವರ್ತಿಯ ಎದುರಿನಲ್ಲಿ ಗೌರವ ಸೂಚಕವಾಗಿ ವಿದೇಶಿ ರಾಜತಾಂತ್ರಿಕರು ತೆವಳುವ ಸಂಪ್ರದಾಯವನ್ನು ರದ್ದು ಪಡಿಸಲಾಯಿತು. ಎಲ್ಲ ಮುಕ್ತ ಬಂದರುಗಳಲ್ಲಿ ವಿದೇಶಿ ರಾಯಭಾರಿಗಳಿಗೆ ಅವಕಾಶ ನೀಡಲಾಯಿತು ಮತ್ತು ಅವರನ್ನು ಗೌರವದಿಂದ ನಡೆಸಿಕೊಳ್ಳಲು ನಿರ್ಧರಿಸಲಾಯಿತು. ಹನ್ನೊಂದು ಹೊಸ ಬಂದರುಗಳನ್ನು ವಿದೇಶ ವ್ಯಾಪಾರಕ್ಕೆ ತೆರೆಯಲಾಯಿತು. ಅದರಿಂದಾಗಿ ಉತ್ತರ ಚೀನಾ ಖಣಿವೆ, ಫಾರ್ಮೋಸ ಮತ್ತು ಮಂಚೂರಿಯದಲ್ಲಿ ವಿದೇಶೀಯರಿಗೆ ಪ್ರವೇಶ ದೊರೆಯಿತು. ಯಾಂಗ್ಸಿ ನದಿಯನ್ನು ವಿದೇಶಿ ವ್ಯಾಪಾರಿ ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಲಾಯಿತು. ಅಧಿಕೃತ ಪರವಾನಿಗೆಯೊಂದಿಗೆ ಚೀನಾದ ಒಳನಾಡಿನಲ್ಲಿ ಸಂಚರಿಸುವ ಮತ್ತು ವ್ಯಾಪಾರ ನಡೆಸುವ ಹಕ್ಕು ಪಾಶ್ಚಾತ್ಯರಿಗೆ ದೊರೆಯಿತು. ಅಲ್ಲದೆ ಕ್ರೈಸ್ತಧರ್ಮ ಪ್ರಚಾರಕರಿಗೆ ಚೀನಾದಲ್ಲಿ ರಕ್ಷಣೆಯ ಹಕ್ಕು ದೊರೆಯಿತು. ಮುಖ್ಯವಾಗಿ ಅಫೀಮು ವ್ಯಾಪಾರವನ್ನು ಶಾಸನಬದ್ಧಗೊಳಿಸಲಾಯಿತು.

ಈ ಯುದ್ಧಗಳ ಪರಿಣಾಮವಾಗಿ ಪಾಶ್ಚಾತ್ಯರ ಸರಕುಗಳು ಮತ್ತು ತತ್ವಗಳನ್ನು ಒಪ್ಪಿಕೊಳ್ಳುವಂತೆ ಚೀನಾವನ್ನು ಬಲಾತ್ಕರಿಸುವ ಪ್ರಕ್ರಿಯೆ ಪೂರ್ಣಗೊಂಡಿತು. ಅವೆಲ್ಲವೂ ಅಸಮಾನ ಒಪ್ಪಂದಗಳಾಗಿದ್ದವು. ಪಾಶ್ಚಾತ್ಯ ವಾಣಿಜ್ಯಕ್ಕೆ ಮುಕ್ತಗೊಳಿಸಲಾದ ಚೀನಾದ ಬಂದರುಗಳು ಕೈಗಾರಿಕೆ, ಶಿಕ್ಷಣ ಮತ್ತು ಪಾಶ್ಚಾತ್ಯೀಕರಣದ ಕೇಂದ್ರಗಳಾಗಿ ಪರಿಣಮಿಸಿದವು. ಮುಂದಿನ ದಿನಗಳಲ್ಲಿ ಈ ಕರಾರಿನ ಬಂದರುಗಳು ಹೊಸ ಚೀನಿ ಸಾಮಾಜಿಕ ವರ್ಗವನ್ನು ಸೃಷ್ಟಿಸಿದವು. ಈ ವರ್ಗ ಆಧುನಿಕ ಚೀನಾದಲ್ಲಿ ಮಹತ್ವದ ಪಾತ್ರ ವಹಿಸಿತು. ಅಲ್ಲದೆ ಈ ಯುದ್ಧಗಳು ಮಂಚುಗಳ ದೌರ್ಬಲ್ಯವನ್ನು ಪ್ರದರ್ಶಿಸಿದವು ಹಾಗೂ ಅವರ ಪಥನವನ್ನು ತ್ವರಿತಗೊಳಿಸಿದವು.

## 129.9 ಘಟಕದ ಸಾರಾಂಶ

ಈ ಘಟಕದಲ್ಲಿ ನೀವು ಪ್ರಥಮ ಹಾಗೂ ದ್ವಿತೀಯ ಅಫೀಮು ಯುದ್ಧಗಳ (1839-42 ಮತ್ತು 1856-60) ಕಾರಣಗಳನ್ನು ತಿಳಿದುಕೊಂಡಿರಿ. ಪ್ರಥಮ ಅಫೀಮು ಯುದ್ಧ ಅಥವಾ ಆಂಗ್ಲೊ- ಚೀನಿ ಯುದ್ಧದಲ್ಲಿ ಚೀನಾ ಅತ್ಯಂತ ಅವಮಾನಕಾರಿ ಸೋಲು ಅನುಭವಿಸಿತು. ಈ ಘಟಕದಲ್ಲಿ ಮುಖ್ಯವಾಗಿ ಹೊರ ಪ್ರಪಂಚಕ್ಕೆ ಚೀನಾ ತನ್ನ ಬಾಗಿಲುಗಳನ್ನು ತೆರೆಯಬೇಕಾಗಿ ಬಂದ ಸನ್ನಿವೇಶಗಳ ಬಗೆಗೆ ಚರ್ಚಿಸಲಾಗಿದೆ. 1842 ಕ್ಕೆ ಮುಂಚೆ ಚೀನಾ ಜಗತ್ತಿನಿಂದ ಪ್ರತ್ಯೇಕವಾಗಿತ್ತು. ಅಫೀಮು ಯುದ್ಧ ಚೀನೀಯರ ಶ್ರೇಷ್ಠತೆಯ ಭ್ರಮೆಯನ್ನು ಹೇಗೆ ನಾಶಪಡಿಸಿತು ಎಂಬುದನ್ನು ನೀವು ಅರಿತಿದ್ದೀರಿ. ಅಲ್ಲದೆ ಅಸಮಾನ ಒಪ್ಪಂದಗಳು, ಹಾಗೂ ಚೀನಾ ತನ್ನ ಬಂದರುಗಳು ಮತ್ತು ಮಾರುಕಟ್ಟೆಗಳನ್ನು ಪಾಶ್ಚಾತ್ಯ ಬಂಡವಾಳಶಾಹಿಗಳಿಗೆ ತೆರೆಯಬೇಕಾಗಿ ಬಂದ ಬಗೆಗೂ ತಿಳಿದುಕೊಂಡಿರಿ. ಈ ಬೆಳವಣಿಗೆಗಳಿಂದಾಗಿ ಚೀನಿ ಅರ್ಥ ವ್ಯವಸ್ಥೆ ಕುಸಿಯಿತು. ಪಾಶ್ಚಾತ್ಯರಿಂದ ಕಲಿಯಬೇಕಾದುದು ಬಹಳಷ್ಟಿದೆ ಎಂಬುದನ್ನು ಚೀನೀಯರು ಅರಿತರು. ಚೀನಾದ ಬುದ್ಧಿಜೀವಿಗಳು ಪಾಶ್ಚಾತ್ಯ ದೇಶಗಳ ಬಗೆಗೆ ಕುತೂಹಲದಿಂದ ಅಧ್ಯಯನ ನಡೆಸಲಾರಂಭಿಸಿದ್ದು ಮತ್ತು ಚೀನಿ ಸರ್ಕಾರ ಪಾಶ್ಚಾತ್ಯರ ತಂತ್ರಜ್ಞಾನವನ್ನು ಆಮದು ಮಾಡಿಕೊಂಡ ಬಗೆಗೂ ನೀವು ತಿಳಿದುಕೊಂಡಿದ್ದೀರಿ.

1856 ರಿಂದ 1860 ರವರೆಗೆ ನಡೆದ ದ್ವಿತೀಯ ಅಫೀಮು ಯುದ್ಧದ ಬಗೆಗೂ ನೀವು ಈ ಘಟಕದಲ್ಲಿ ಅಧ್ಯಯನ ಮಾಡಿದ್ದೀರಿ. ಈ ಯುದ್ಧಾ ನಂತರ ಏರ್ಪಟ್ಟ ಒಪ್ಪಂದಗಳು ಚೀನಿ ಸರ್ಕಾರವನ್ನು ಮತ್ತಷ್ಟು ಅವಮಾನಕ್ಕೆ ಗುರಿಪಡಿಸಿದವು ಮತ್ತು ದುರ್ಬಲಗೊಳಿಸಿದವು. ಈ ಎರಡೂ ಅಫೀಮು ಯುದ್ಧಗಳು ಹೇಗೆ ಮಂಚುಗಳ ದೌರ್ಬಲ್ಯವನ್ನು ಜಗತ್ತಿಗೆ ಬಹಿರಂಗ ಮಾಡಿದವು ಮತ್ತು ಅವರ ಪಥನವನ್ನು ತ್ವರಿತಗೊಳಿಸಿದವು ಎಂಬುದನ್ನು ನೀವು ತಿಳಿದುಕೊಂಡಿರುವಿರಿ.

## 129.10 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

*I ಈ ಕೆಳಗಿನ ಪ್ರಶ್ನೆಗಳಿಗೆ 15 ರಿಂದ 20 ಸಾಲುಗಳಲ್ಲಿ ಉತ್ತರಿಸಿ.*

1. ಪ್ರಥಮ ಅಫೀಮು ಯುದ್ಧದಲ್ಲಿ ಅಫೀಮಿನ ಪಾತ್ರವನ್ನು ಪರಿಶೀಲಿಸಿ.

2. ಅಫೀಮು ಯುದ್ಧಗಳು ಚೀನಾದಲ್ಲಿ ಹೇಗೆ ಪಾಶ್ಚಾತ್ಯರ ಆಕ್ರಮಣಕ್ಕೆ ಕಾರಣವಾದವು ಎಂಬುದನ್ನು ನಿರೂಪಿಸಿ.

*II ಕೆಳಗಿನವುಗಳಿಗೆ 30 ರಿಂದ 40 ಸಾಲುಗಳಲ್ಲಿ ಉತ್ತರಿಸಿ.*

1. ಪ್ರಥಮ ಅಫೀಮು ಯುದ್ಧದ ಕಾರಣಗಳು ಮತ್ತು ಪರಿಣಾಮಗಳನ್ನು ವಿವರಿಸಿ.

2. ನಾನ್‌ಕಿಂಗ್ ಒಪ್ಪಂದದ ರಾಜಕೀಯ ಮತ್ತು ಆರ್ಥಿಕ ಪರಿಣಾಮಗಳನ್ನು ವಿವರಿಸಿ.

## 129.11 ಪರಾಮರ್ಶನ ಗ್ರಂಥಗಳು


1. Dawson Raymond : Imperial China
2. Carnington. L. Goodrich : A short History of the Chinese People
3. Lichien Nuny : The Political History of China


ಮೂಲ: ಎಸ್. ಮೀರ್ ಸಮಿವುಲ್ಲ

ಅನುವಾದಕರು: ಬಿ. ಪರಮೇಶ್ವರ

# ಟಿಪ್ಪಣಿಗಳು

# ಘಟಕ - 130

# ತೈಪಿಂಗ್ ದಂಗೆ (1850-1864)

*ರಚನೆ*


130.0 ಉದ್ದೇಶಗಳು

130.1 ಪೀಠಿಕೆ

130.2 ತೈಪಿಂಗ್ ದಂಗೆಯ ಕಾರಣಗಳು

130.3 ದಂಗೆಯ ಪಥ

130.4 ದಂಗೆಯ ವಿಫಲತೆ

130.5 ದಂಗೆಯ ಪರಿಣಾಮಗಳು

130.6 ದಂಗೆಯ ಮಹತ್ವ

130.7 ಘಟಕದ ಸಾರಾಂಶ

130.8 ನಿಮ್ಮ ಪ್ರಗತಿಯ ಪರಿಶೀಲನೆಗೆ ಉತ್ತರಗಳು

130.9 ಪರಾಮರ್ಶನ ಗ್ರಂಥಗಳು

## 130.0 ಉದ್ದೇಶಗಳು

ಮಂಚುಗಳ ಆಳ್ವಿಕೆಯ ಕಾಲದಲ್ಲಿ ಸಂಭವಿಸಿದ ತೈಪಿಂಗ್ ದಂಗೆಗೆ ಕಾರಣವಾದ ಅಂಶಗಳನ್ನು ಪರಿಶೀಲಿಸುವುದು ಈ ಘಟಕದ ಉದ್ದೇಶವಾಗಿದೆ. ಈ ದಂಗೆ 1850 ರಲ್ಲಿ ಆರಂಭವಾಗಿ 1864 ರವರೆಗೂ ಮುಂದುವರಿಯಿತು. ಅಲ್ಲದೆ ಈ ಘಟಕದಲ್ಲಿ ದಂಗೆಗೆ ಕಾರಣಕರ್ತನಾದ ಹಂಗ್ ಸು-ಚುವಾನ್ (1814-1864) ಹೇಗೆ ಮೋಕ್ಷ ಸಾಧನೆಗೆ ಹೊಸ ಸಿದ್ಧಾಂತವನ್ನು ಬೋಧಿಸಿದನೆಂಬುದನ್ನು ತಿಳಿಯಲಿದ್ದೇವೆ. ಅವನು ತನ್ನನ್ನು "ಸ್ವರ್ಗೀಯ ದೊರೆ" ಎಂದು ಘೋಷಿಸಿಕೊಂಡನು ಮತ್ತು "ಸಂಪೂರ್ಣ ಶಾಂತಿ" (ತೈಪಿಂಗ್)ಎಂದು ಕರೆಯಲ್ಪಡುವ ನೂತನ ಆಡಳಿತವನ್ನು ಸ್ಥಾಪಿಸುವುದು ತನ್ನ ಉದ್ದೇಶವೆಂದು ಪ್ರಕಟಿಸಿದನು. ಜೊತೆಗೆ ದಂಗೆಕಾರರು ಮಂಚು ವಂಶವನ್ನು ಪದಚ್ಯುತಗೊಳಿಸಲು ಮತ್ತು ಜನರ ಆರ್ಥಿಕ ಮಟ್ಟವನ್ನು ಸುಧಾರಿಸುವ ಉದ್ದೇಶ ಹೊಂದಿದ್ದರೆಂಬುದನ್ನು ನಾವು ತಿಳಿದುಕೊಳ್ಳಲಿದ್ದೇವೆ. ಅವರು ವಿದೇಶೀಯರು ಪಡೆದಿದ್ದ ಸವಲತ್ತುಗಳನ್ನು ರದ್ದುಪಡಿಸಲು ಬಯಸಿದ್ದರು. ಈ ದಂಗೆಯನ್ನು 1864 ರಲ್ಲಿ ಹತ್ತಿಕ್ಕಲಾಯಿತು. ಆದರೆ ರಾಷ್ಟ್ರೀಕರಣ ಮತ್ತು ಸಮಾನತೆ ನೀತಿಯನ್ನು ಮುಂದುವರಿಸಲಾಯಿತು.

## 130.1 ಪೀಠಿಕೆ

ತೈಪಿಂಗ್ ದಂಗೆ, ಮಂಚು ಸರ್ಕಾರವನ್ನು ಪದಚ್ಯುತಿಗೊಳಿಸುವ ಮತ್ತು ಅದರ ಸ್ಥಾನದಲ್ಲಿ ಒಂದು ಸ್ಥಳೀಯ ಸರ್ಕಾರವನ್ನು ಪ್ರತಿಷ್ಠಾಪಿಸುವ ಚೀನೀಯರ ಪ್ರಥಮ ಪ್ರಯತ್ನಗಳಲ್ಲೊಂದಾಗಿತ್ತು. ಇದು ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಉದ್ದೇಶದ ದಂಗೆಯಾಗಿತ್ತು. ಆದ್ದರಿಂದಲೇ ಅದಕ್ಕೆ ಪ್ರಾರಂಭದಲ್ಲಿ ದೊರೆತ ಯಶಸ್ಸು ಆಶ್ಚರ್ಯದ ವಿಷಯವಾಗಿರಲಿಲ್ಲ. ವಿದೇಶಿ ಶಕ್ತಿಗಳು ಮಧ್ಯ ಪ್ರವೇಶಿಸದಿದ್ದರೆ ಹಾಗೂ ದಂಗೆಕಾರರಲ್ಲಿ ನಾಯಕತ್ವ ಕುರಿತು ಆಂತರಿಕ ಭಿನ್ನಾಭಿಪ್ರಾಯಗಳು ಮೂಡದಿದ್ದರೆ ಪ್ರಾರಂಭದ ಯಶಸ್ಸು ಮುಂದುವರಿಯುತ್ತಿತ್ತು.

19 ನೇ ಶತಮಾನದ ಮಧ್ಯಭಾಗದಲ್ಲಿ, ಬರಗಾಲಗಳು, ಕ್ಷಾಮಗಳು ಮತ್ತು ಪ್ರವಾಹಗಳು ಸೇರಿದಂತೆ ಅಭೂತಪೂರ್ವ ಪ್ರಮಾಣದ ಪ್ರಕೃತಿ ವಿಕೋಪಗಳಿಂದಾಗಿ ಚೀನೀಯರ ಸಮಸ್ಯೆಗಳು ಉಲ್ಬಣಿಸಿದ್ದವು. ಈ ದುರಂತಗಳಿಗೆ ಸರ್ಕಾರ ಜನಹಿತ ಕಾರ್ಯಗಳನ್ನು ಕಡೆಗಣಿಸಿದ್ದು ಭಾಗಷಃ ಕಾರಣವಾಗಿತ್ತು ಮತ್ತು ಮಂಚು ಸರ್ಕಾರ ಜನರ ಸಮಸ್ಯೆಗಳನ್ನು ದೂರುಮಾಡಲು ಯಾವುದೇ ಪ್ರಯತ್ನ ಮಾಡಲಿಲ್ಲ. ಆರ್ಥಿಕ ಸಮಸ್ಯೆಗಳು, ಪಾಶ್ಚಾತ್ಯರಿಂದ ಅನುಭವಿಸಿದ ಸೋಲುಗಳು ಹಾಗೂ ಮಂಚು ವಿರೋಧಿ ಭಾವನೆಗಳು ಹೀಗೆ ಎಲ್ಲವೂ ಸೇರಿ ವ್ಯಾಪಕವಾದ ಅಸಮಾಧಾನವನ್ನು, ಮುಖ್ಯವಾಗಿ ದಕ್ಷಿಣ ಚೀನಾದಲ್ಲಿ, ಸೃಷ್ಟಿಸಿತು. ದಕ್ಷಿಣ ಚೀನಾ ಮಂಚುಗಳ ಆಕ್ರಮಣಕ್ಕೊಳಗಾದ ಚೀನಾದ ಕೊನೆಯ ಭಾಗವಾಗಿತ್ತು ಮತ್ತು ಪಾಶ್ಚಾತ್ಯರ ಪ್ರಭಾವಕ್ಕೊಳಗಾದ ಪ್ರಥಮ ಭಾಗವಾಗಿತ್ತು. ಆದ್ದರಿಂದಲೇ ಅದು ಆಧುನಿಕ ಚೀನಾ ಇತಿಹಾಸದ ಅತಿ ದೊಡ್ಡ ದಂಗೆಗೆ ವೇದಿಕೆಯಾಯಿತು.

ಪ್ರಥಮ ಅಫೀಮು ಯುದ್ಧಕ್ಕೆ ಎರಡು ದಶಕಗಳ ಮುಂಚೆ ಕ್ವಾಂಗ್ಸಿ, ಷನ್ಸಿ, ಕ್ವಿಚೋವ್, ಕಿಯಾಂಗ್ಸಿ, ಹೈನಾನ್, ಹುಪೆ ಮತ್ತು ಫಾರ್ಮೋಸದಲ್ಲಿ ಪದೇ ಪದೇ ದಂಗೆಗಳು ಸಂಭವಿಸುತ್ತಿದ್ದವು. 19 ನೇ ಶತಮಾನದ ಮಧ್ಯ ಭಾಗದಲ್ಲಿ ನಾಲ್ಕು ದಂಗೆಗಳು ಸಂಭವಿಸಿದವು. ಅವುಗಳು ಯುನ್ನಾನ್ (1855-1873), ವಾಯುವ್ಯ ಭಾಗ (1862-73), ನೀನ್ ದಂಗೆ (1853-68) ಮತ್ತು ತೈಪಿಂಗ್ ದಂಗೆ (1850-64). ಅವುಗಳ ಪೈಕಿ ಅತ್ಯಂತ ತೀವ್ರ ಸ್ವರೂಪದ್ದು ತೈಪಿಂಗ್ ದಂಗೆ. 1850 ರಿಂದ 1864 ರವರೆಗೆ ಮುಂದುವರಿದ ಈ ದಂಗೆ ದಕ್ಷಿಣದ ರಾಜಧಾನಿ ನಾನ್‌ಕಿಂಗ್ ಸೇರಿದಂತೆ ದಕ್ಷಿಣ ಮತ್ತು ಮಧ್ಯ ಚೀನಾದ ಬಹುಭಾಗಕ್ಕೆ ವ್ಯಾಪಿಸಿತ್ತು. ಅಲ್ಲಿ ಒಂದು ಧಾರ್ಮಿಕ-ಸೈನಿಕ ಸರ್ಕಾರವನ್ನು ಸ್ಥಾಪಿಸಲಾಯಿತು.

## 130.2 ತೈಪಿಂಗ್ ದಂಗೆಯ ಕಾರಣಗಳು

ದಂಗೆಯ ಕಾಲದಲ್ಲಿ ಚೀನಾದ ಪರಿಸ್ಥಿತಿ ಶೋಚನೀಯವಾಗಿತ್ತು. ಮಂಚು ದೊರೆಗಳು ದುರ್ಬಲರಾಗಿದ್ದರು. ಅಧಿಕಾರಿಗಳು ಭ್ರಷ್ಟರಾಗಿದ್ದರು. ಜನಸಾಮಾನ್ಯರ ಆರ್ಥಿಕ ಸ್ಥಿತಿ ಕಳವಳಕಾರಿಯಾಗಿತ್ತು ಮತ್ತು ತೆರಿಗೆಗಳ ಭಾರದಿಂದ ಅವರು ಕುಸಿದು ಹೋಗಿದ್ದರು. ಅಲ್ಲದೆ ಚೀನಾ ತನ್ನ ಸಾರ್ವಭೌಮಾಧಿಕಾರವನ್ನು ಕೆಲಮಟ್ಟಿಗೆ ಕಳೆದುಕೊಂಡಿತ್ತು ಮತ್ತು ಐರೋಪ್ಯ ದೇಶಗಳು ಚೀನಾದಲ್ಲಿ ತಮ್ಮ ಪ್ರಭಾವವನ್ನು ಶೀಘ್ರ ಗತಿಯಲ್ಲಿ ವಿಸ್ತರಿಸಿಕೊಳ್ಳುತ್ತಿದ್ದವು. ಅವುಗಳ ಅಧಿಕಾರಕ್ಕೆ ಸವಾಲೇ ಇರಲಿಲ್ಲ ಮತ್ತು ಸಾಮ್ರಾಟ ಕೇವಲ ಅಸಹಾಯಕ ಪ್ರೇಕ್ಷಕನಾಗಿದ್ದನು.

*ದಂಗೆಯ ಕಾರಣಗಳನ್ನು ಕೆಳಕಂಡಂತೆ ಸಂಕ್ಷೇಪವಾಗಿ ಹೇಳಬಹುದು.*

ಈ ಅವಧಿಯಲ್ಲಿ ಚೀನಾದಲ್ಲಿ ಹಲವಾರು ಆಂತರಿಕ ಗಲಭೆಗಳು ಸಂಭವಿಸಿದವು. ಪ್ರಾಂತ್ಯಗಳ ಮೇಲೆ ಚಕ್ರವರ್ತಿಗೆ ನಿಯಂತ್ರಣವಿರಲಿಲ್ಲ. ದರೋಡೆಕಾರರು ಹಾಗೂ ಡಕಾಯಿತರು ಪ್ರಾಂತ್ಯಗಳಲ್ಲಿ ನಿರಾಂತಕವಾಗಿ ತಮ್ಮ ಚಟುವಟಿಕೆ ನಡೆಸಿದ್ದರು. ಸಾಮ್ರಾಜ್ಯದ ಎಲ್ಲ ಬಗೆಯ ಅಧಿಕಾರಿಗಳು ಅರಸರಂತೆಯೇ ಆಡಂಬರದ ಜೀವನ ನಡೆಸುತ್ತಿದ್ದರು. ಆಡಳಿತ ಪೂರ್ಣವಾಗಿ ಕಡೆಗಣಿಸಲ್ಪಟ್ಟಿತು.

ಈ ಹಿನ್ನೆಲೆಯಲ್ಲಿ ದಂಗೆಯ ವಾತಾವರಣ ನಿರ್ಮಾಣಗೊಳ್ಳುತ್ತಿತ್ತು. ನಾನ್‌ಕಿಂಗ್ ಒಪ್ಪಂದ (1842, ಆಗಸ್ಟ್ 29) ಮಂಚು ವಂಶವನ್ನು ಅಪಕೀರ್ತಿಗೆ ಗುರಿಮಾಡಿತು. ಜನಸಂಖ್ಯೆಯ ಹೆಚ್ಚಳ, ಕ್ಷಾಮಗಳು, ಭ್ರಷ್ಟಾಚಾರ, ಬಡತನ ಹಾಗೂ ಅಸಮರ್ಥ ಆಡಳಿತದಿಂದಾಗಿ ಮಂಚು ವಿರೋಧಿ ಭಾವನೆ ಬೆಳೆಯಿತು. ಕ್ಯಾಂಟನ್ ಪ್ರತಿರೋಧದ ಕೇಂದ್ರ ಸ್ಥಾನವಾಯಿತು.

ಅತೃಪ್ತ ಶಕ್ತಿಗಳ ಜೊತೆಗೆ ಒಂದು ಧಾರ್ಮಿಕ ಪಂಥ ದಂಗೆಗೆ ಉತ್ತೇಜನ ನೀಡಿತು. ಅದರ ಸಂಸ್ಥಾಪಕ ಹಂಗ್ ಸು- ಚುವಾನ್ (1814-64) ಅವನೊಬ್ಬ ಯೋಗಿ. ಚೀನಾವನ್ನು ಪುನಶ್ಚೇತನಗೊಳಿಸಲು ತನಗೆ ದೈವ ಪ್ರೇರಣೆಯಾಗಿದೆ ಎಂದು ಅವನು ಭಾವಿಸಿದ್ದನು. ಅವನ ಧಾರ್ಮಿಕ ಪಂಥ ಕ್ರೈಸ್ತಧರ್ಮದ ಹಲವಾರು ಅಂಶಗಳನ್ನು ಒಳಗೊಂಡಿತ್ತು. 1844 ರಲ್ಲಿ ಅವನು ತನ್ನ ಮೋಕ್ಷದ ಹೊಸ ಸಿದ್ದಾಂತವನ್ನು ಪ್ರಚಾರ ಮಾಡಲಾರಂಭಿಸಿದ್ದನು. ತಮ್ಮನ್ನು ಷಾಂಗ್ಟಿ-ಸು ಎಂದು ಕರೆದುಕೊಂಡ ಈ ಪಂಥದ ಸದಸ್ಯರು ಅಸ್ತಿತ್ವದಲ್ಲಿದ್ದ ಚೀನಾದ ಧರ್ಮವನ್ನು ಕಟುವಾಗಿ ಟೀಕಿಸಿದರು. ಹಂಗ್ ತನ್ನನ್ನು "ಸ್ವರ್ಗೀಯ ದೊರೆ" ಎಂದು ಘೋಷಿಸಿಕೊಂಡನು ಮತ್ತು "ಸಂಪೂರ್ಣ ಶಾಂತಿ" (ತೈಪಿಂಗ್) ವಂಶ ಎಂದು ಕರೆಯಲಾಗುವ ಹೊಸ ಆಡಳಿತವನ್ನು ಸ್ಥಾಪಿಸುವುದು ತನ್ನ ಉದ್ದೇಶವಾಗಿದೆ ಎಂದು ಪ್ರಕಟಿಸಿದನು. ಅವನ ಅನುಯಾಯಿಗಳು ವಿದೇಶೀಯರಿಗೆ ತೈಪಿಂಗ್‌ಗಳು ಎಂದು ಪರಿಚಿತರಾದರು. ಈ ದಂಗೆಕಾರರು ಪಾಶ್ಚಾತ್ಯರನ್ನು "ವಿದೇಶಿ ಸಹೋದರರು" ಎಂದು ಸ್ವಾಗತಿಸಿದರು ಮತ್ತು ಸಂಪೂರ್ಣ ವ್ಯಾಪಾರದ ಸ್ವಾತಂತ್ರ್ಯ ನೀಡುವ ಭರವಸೆ ನೀಡಿದರು.

ಚೀನಾದ ಜನಸಂಖ್ಯೆಯ ಶೇ 80 ಭಾಗ ಕೃಷಿಕರು. ಆದರೆ ಅವರ ಬದುಕು ಅಸಹನೀಯವಾಗಿತ್ತು. ಅವರ ಮೇಲೆ ಅಧಿಕ ಕಾರಭಾರ ಹೇರಲಾಗಿತ್ತು ಮತ್ತು ಅಫೀಮು ಯುದ್ಧಗಳ ನಂತರ ಚೀನಾ ಬ್ರಿಟಿಷರಿಗೆ ಯುದ್ಧ ಪರಿಹಾರವನ್ನು ಕೊಡಬೇಕಾದ್ದರಿಂದ ಕಾರಭಾರ ಮತ್ತಷ್ಟು ಹೆಚ್ಚಿತು. ಅವರನ್ನು ಪಾಳೆಯಗಾರರು ತೀವ್ರ ಶೋಷಣೆಗೆ ಒಳಪಡಿಸಿದ್ದರು. ಉತ್ಪಾದನೆ ಹೆಚ್ಚಾಗದಿದ್ದರೂ ಅವರು ಹೆಚ್ಚಿನ ತೆರಿಗೆಯನ್ನು ಕೊಡಬೇಕಾಯಿತು. ಸುಧಾರಿತ ಬೇಸಾಯ ಕ್ರಮಗಳ ಬಗೆಗೆ ಅವರಿಗೆ ಅರಿವಿರಲಿಲ್ಲ. ಅವರು ಸಾಲದಲ್ಲಿ ಮುಳುಗಿದ್ದರು ಮತ್ತು ಹಲವು ಸಂದರ್ಭಗಳಲ್ಲಿ ಅವರು ಸಾಲ ಹಾಗೂ ತೆರಿಗೆಗಳನ್ನು ಪಾವತಿಸಲು ತಮ್ಮ ಭೂಮಿಯನ್ನು ಮಾರಬೇಕಾಗುತ್ತಿತ್ತು. ಹೀಗೆ ಭೂಮಿಯನ್ನು ಕಳೆದುಕೊಂಡವರು ಕೂಲಿಕಾರರು ಇಲ್ಲವೇ ಡಕಾಯಿತರಾದರು. ಹೀಗೆ ಕೃಷಿಕರಲ್ಲಿ ವ್ಯಾಪಕ ಅತೃಪ್ತಿ ಮತ್ತು ಅಸಮಾಧಾನವಿತ್ತು.

ವರ್ತಕ ಸಮುದಾಯದಲ್ಲೂ ಅಪಾರ ಅಸಮಾಧಾನವಿತ್ತು. ನಾನ್‌ಕಿಂಗ್ ಒಪ್ಪಂದದ ನಂತರ ನಿಜವಾದ ವ್ಯಾಪಾರ ಐರೋಪ್ಯ ವರ್ತಕರಿಗೆ ಹಸ್ತಾಂತರಗೊಂಡಿತು. ಯುರೋಪ್‌ನಲ್ಲಿ ಸಂಭವಿಸಿದ ಕೈಗಾರಿಕಾ ಕ್ರಾಂತಿಯ ಫಲವಾಗಿ ಆದೇಶಗಳಿಗೆ ಹೊಸ, ಆಕರ್ಷಕ ಮತ್ತು ಕಡಿಮೆ ಗುಣಮಟ್ಟದ ಸರಕುಗಳನ್ನು ಚೀನಾದ ಮಾರುಕಟ್ಟೆಗಳಿಗೆ ರವಾನಿಸಲು ಸಾಧ್ಯವಾಯಿತು. ಹೀಗಾಗಿ ಚೀನೀಯರ ಅನುಕೂಲಕರ ವ್ಯಾಪಾರದ ಸಮತೋಲನ ಭಾರೀ ಅಸಮತೋಲನವಾಗಿ ಪರಿಣಮಿಸಿತು. ತಮ್ಮೆಲ್ಲ ಸಂಕಷ್ಟಗಳಿಗೂ ತಮ್ಮ ಸಾಮ್ರಾಟನೇ ಕಾರಣ ಎಂಬ ಭಾವನೆ ಜನರಲ್ಲಿ ಮೂಡಿತು.

ಭ್ರಷ್ಟ ಆಡಳಿತ ಜನರ ಜೀವ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವಲ್ಲಿ ವಿಫಲವಾಗಿತ್ತು. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸರ್ಕಾರದ ಕೆಲಸವನ್ನು ಅಪಾರ ಸಂಖ್ಯೆಯಲ್ಲಿ ಅಸ್ತಿತ್ವಕ್ಕೆ ಬಂದ ರಹಸ್ಯ ಸಂಘಗಳು ವಹಿಸಿಕೊಂಡವು. ಅವುಗಳು ದರೋಡೆಕಾರರು ಮತ್ತು ಡಕಾಯಿತರಿಂದ ಜನರನ್ನು ರಕ್ಷಿಸಿದವು. ವರ್ತಕರು ಅವುಗಳಿಗೆ ಹಣ ಸಹಾಯ ನೀಡಿದರು. ಈ ಎಲ್ಲಾ ರಹಸ್ಯ ಸಂಘಗಳ ಸಾಮಾನ್ಯ ಉದ್ದೇಶ ಭ್ರಷ್ಟ ಮಂಚು ಸರ್ಕಾರವನ್ನು ಪದಚ್ಯುತಗೊಳಿಸುವುದು.

ಚೀನಾದ ಪೂರ್ಣ ಸೈನಿಕ ವ್ಯವಸ್ಥೆ ನಿಷ್ಪ್ರಯೋಜಕವಾಗಿದ್ದುದು ಮತ್ತೊಂದು ಮುಖ್ಯ ಕಾರಣವಾಗಿತ್ತು. ಪಾಳೆಯಗಾರರು ಸರ್ಕಾರದಿಂದ ಅಪಾರ ಪ್ರಮಾಣದ ಹಣ ಪಡೆಯುತ್ತಿದ್ದರೂ ಎಂದೂ ನಿಗದಿತ ಸಂಖ್ಯೆಯ ಸೈನಿಕರನ್ನು ಹೊಂದಿರುತ್ತಿರಲಿಲ್ಲ.

ಸಾಮ್ರಾಟನಿಂದ ಪಡೆದ ಹಣವನ್ನು ತಮ್ಮ ಸ್ವಂತ ಬಳಕೆಗೆ ಇಟ್ಟುಕೊಳ್ಳುತ್ತಿದ್ದರು. ಈ ಬಗೆಗೆ ಕ್ರಮವಾದ ಪರಿಶೀಲನೆ ನಡೆಸಲು ಸೂಕ್ತವಾದ ವ್ಯವಸ್ಥೆ ಇರಲಿಲ್ಲ. ಪರಿಶೀಲನಾ ಕಾರ್ಯ ನಡೆದಾಗಲೆಲ್ಲ ಅವರುಗಳು ಕೂಲಿಗಳು ಮತ್ತು ಕಾರ್ಮಿಕರನ್ನು ಹಾಜರು ಪಡಿಸುತ್ತಿದ್ದರು. ಚೀನಾ ಐರೋಪ್ಯ ವರ್ತಕರೊಂದಿಗೆ ಹೋರಾಡಬೇಕಾಗಿ ಬಂದಾಗ ಈ ಸೈನಿಕ ದೌರ್ಬಲ್ಯ ಬೆಳಕಿಗೆ ಬಂದಿತು ಮತ್ತು ಚೀನಾ ಅತ್ಯಂತ ಹೀನಾಯವಾದ ಸೋಲು ಅನುಭವಿಸಿತು. ಸಾಮ್ರಾಜ್ಯದ ಈ ದುರ್ಬಲ ಸೈನಿಕ ವ್ಯವಸ್ಥೆ ಚಕ್ರವರ್ತಿಯ ವಿರುದ್ಧ ದಂಗೆಗಳಿಗೆ ಪ್ರಚೋದಕವಾಯಿತು.

ತೈಪಿಂಗ್ ನಂಬಿಕೆ ಕ್ರೈಸ್ತ ಧರ್ಮಾಧಾರಿತವಾಗಿದ್ದರಿಂದ ಬಂಡಾಯಗಾರರಿಗೆ ವಿದೇಶೀಯರ ಮಾನ್ಯತೆ ಮತ್ತು ಬೆಂಬಲ ದೊರಕಿಸಲು ಪ್ರಾಟೆಸ್ಟಂಟ್ ಧರ್ಮ ಪ್ರಚಾರಕರು ತೀವ್ರ ಪ್ರಯತ್ನ ನಡೆಸಿದರು. ಕೆಲಕಾಲ ಬ್ರಿಟಿಷ್ ಪ್ರತಿನಿಧಿಗಳು ಕೂಡ ಬಂಡಾಯಗಾರರಿಗೆ ಮಾನ್ಯತೆ ನೀಡುವುದರ ಪರವಾಗಿದ್ದರು. ಬಂಡಾಯಗಾರರು ವಿದೇಶೀಯರ ಬಗೆಗೆ ಸಹಾನುಭೂತಿ ಹೊಂದಿದ್ದರೆಂಬುದು ಅದಕ್ಕೆ ಕಾರಣವಾಗಿತ್ತು. ಅಮೆರಿಕನ್ನರು ಮಾತ್ರ ಚೀನಾ ಸರ್ಕಾರಕ್ಕೆ ಬೆಂಬಲ ನೀಡುವುದರ ಪರವಾಗಿದ್ದರು. 1859 ರ ವೇಳೆಗೆ ಒಪ್ಪಂದಗಳ ಯಶಸ್ವಿ ಪುನರ್ವಿಮರ್ಶೆ ಮತ್ತು ತೈಪಿಂಗ್ ಆಳ್ವಿಕೆಯ ನಿಜ ಸ್ವರೂಪವನ್ನು ಅರ್ಥಮಾಡಿಕೊಂಡಿದ್ದರಿಂದ ಬ್ರಿಟಿಷರು ಅಮೆರಿಕನ್ನರ ನಿಲುವನ್ನು ಒಪ್ಪಿಕೊಂಡರು ಮತ್ತು ಮಂಚುಗಳನ್ನು ಬಲಗೊಳಿಸುವ ಯತ್ನವಾಗಿ ವಿದೇಶೀಯರೆಲ್ಲರೂ ಒಂದುಗೂಡಿದರು. ಆದಾಗ್ಯೂ 1864 ರವರೆಗೂ ದಂಗೆಯನ್ನು ಹತ್ತಿಕ್ಕುವುದು ಸಾಧ್ಯವಾಗಲಿಲ್ಲ.

## 130.3 ದಂಗೆಯ ಪಥ

1850 ರ ಶರತ್ಕಾಲದಲ್ಲಿ ಹಂಗ್‌ನನ್ನು ಬಂಧಿಸುವ ಒಂದು ವಿಫಲ ಪ್ರಯತ್ನ ನಡೆಯಿತು. ನಂತರ ಅವನು ಒಂದು ಸಶಸ್ತ್ರ ಪಡೆಯ ಸಹಾಯದೊಂದಿಗೆ ಅಸ್ತಿತ್ವದಲ್ಲಿದ್ದ ಮಂಚು ಸರ್ಕಾರಕ್ಕೆ ಬಹಿರಂಗವಾಗಿಯೇ ಸವಾಲು ಹಾಕಿದನು. ತೈಪಿಂಗ್‌ಗಳ ಧರ್ಮಾಂಧತೆ ಅವರನ್ನು ಬಲಿಷ್ಠ ಹೋರಾಟ ಶಕ್ತಿಯನ್ನಾಗಿ ರೂಪಿಸಿತು. ಸಾಮ್ರಾಟನ ಸೈನ್ಯಕ್ಕೆ ಅವರನ್ನು ಹತ್ತಿಕ್ಕುವುದು ಸಾಧ್ಯವಾಗಲಿಲ್ಲ. ಮಾರ್ಚ್ ತಿಂಗಳಲ್ಲಿ ತೈಪಿಂಗ್ ಸೈನ್ಯ ನಾನ್‌ಕಿಂಗ್‌ನ್ನು ವಶಪಡಿಸಿಕೊಂಡಿತು. ಅದು ಸಾಮ್ರಾಜ್ಯದ ಎರಡನೇ ಮುಖ್ಯ ನಗರವಾಗಿತ್ತು. ಆದರೆ ಪ್ರಾರಂಭದಿಂದಲೂ ತೈಪಿಂಗ್ ಚಳುವಳಿಗೆ ರಚನಾತ್ಮಕ ನಾಯಕತ್ವ ದೊರೆಯದೆ, ವಶಪಡಿಸಿಕೊಂಡ ಪ್ರದೇಶಗಳಲ್ಲಿ ಆಡಳಿತ ವ್ಯವಸ್ಥೆಯನ್ನು ರೂಪಿಸುವುದು ಸಾಧ್ಯವಾಗಲಿಲ್ಲ. ಚಳುವಳಿಗೆ ನೈತಿಕ ಬೆಂಬಲ ನೀಡಿದ್ದ ರೈತರು, ಕ್ರೂರ ವಿಧ್ವಂಸಕ ಕೃತ್ಯಗಳಿಂದಾಗಿ ಚಳುವಳಿಯಿಂದ ವಿಮುಖರಾದರು. ಸೈನ್ಯ ಸಾಕಷ್ಟು ಶಿಸ್ತಿನಿಂದ ಕೂಡಿದ್ದರೂ ನಾಯಕರ ನಡುವಿನ ಕಲಹಗಳಿಂದಾಗಿ ಅದರಲ್ಲಿ ಒಡಕುಂಟಾಗಿತ್ತು. ಚಳುವಳಿಯ ಮೂಲ ಸ್ಥಾಪಕರ ನಡುವಿನ ಅಸೂಯೆ ಅದರ ವೈಫಲ್ಯಕ್ಕೆ ಕಾರಣವಾಯಿತು. ಧರ್ಮಾಂಧತೆ ಚಳುವಳಿಯ ಪ್ರಮುಖ ದೋಷವಾಗಿತ್ತು. ಕನ್‌ಫ್ಯೂಷಿಯಸ್ ಧರ್ಮ ಹಾಗೂ ಇಡೀ ಸಾಮಾಜಿಕ ವ್ಯವಸ್ಥೆಯನ್ನು ತೈಪಿಂಗ್‌ಗಳು ಕಟುವಾಗಿ ಟೀಕಿಸಿದ್ದರಿಂದಾಗಿ ಬುದ್ಧಿಜೀವಿಗಳು ಈ ದಂಗೆಯನ್ನು ಬೆಂಬಲಿಸಲಿಲ್ಲ. ಕನ್‌ಫ್ಯೂಷಿಯಸ್ ಧರ್ಮೀಯರ ವಿರೋಧ ಸಶಸ್ತ್ರ ಪ್ರತಿಕ್ರಾಂತಿಯ ಸ್ವರೂಪ ಪಡೆಯಿತು.

1856 ರಿಂದ 1860 ತೈಪಿಂಗ್ ದಂಗೆಯ ಔನ್ನತ್ಯದ ಕಾಲವಾಗಿತ್ತು. ಅನಂತರ ಅದು ಕ್ರಮೇಣ ಕಣ್ಮರೆಯಾಯಿತು. ತೈಪಿಂಗ್ ದಂಗೆ ವಿದೇಶೀಯರ ವ್ಯಾಪಾರಕ್ಕೆ ತೀವ್ರ ಅಡಚಣೆಯುಂಟುಮಾಡಿದ್ದರಿಂದ ಪಾಶ್ಚಾತ್ಯ ದೇಶಗಳು ತಮ್ಮ ತಟಸ್ಥ ನಿಲುವನ್ನು ತೊರೆದು ಪೀಕಿಂಗ್ ಸರ್ಕಾರದ ಪರವಾಗಿ ತೈಪಿಂಗ್‌ಗಳ ವಿರುದ್ಧ ಮಧ್ಯ ಪ್ರವೇಶ ಮಾಡಿದವು. 1864 ರಲ್ಲಿ ಚೀನೀ ಸೈನ್ಯ ವಿದೇಶೀಯರ ಸಹಾಯವಿಲ್ಲದೆ ನಾನ್‌ಕಿಂಗ್ ನಗರವನ್ನು ವಶಪಡಿಸಿಕೊಂಡಿತು ಮತ್ತು ಅದರೊಂದಿಗೆ ದಂಗೆ ಅಂತ್ಯಗೊಂಡಿತು. ಹೀಗೆ ಹಲವು ಆದರ್ಶಗಳನ್ನು ಹೊಂದಿದ್ದ ಬೃಹತ್ ಪ್ರಮಾಣದ ಚಳುವಳಿ, ಆಂತರಿಕ ಭಿನ್ನಾಭಿಪ್ರಾಯಗಳು, ಭ್ರಷ್ಟಾಚಾರ, ಜನಸಾಮಾನ್ಯರ ವಿರೋಧ ಮತ್ತು ವಿದೇಶೀಯರ ಮದ್ಯ ಪ್ರವೇಶದಿಂದಾಗಿ ತನ್ನ ಗುರಿ ಸಾಧಿಸುವಲ್ಲಿ ವಿಫಲವಾಯಿತು.

## 130.4 ದಂಗೆಯ ವಿಫಲತೆ

ತೈಪಿಂಗ್ ಬಂಡಾಯಗಾರರು ಸುಮಾರು ಒಂದು ದಶಕದವರೆಗೆ ಅಧಿಕಾರದಲ್ಲಿದ್ದರು. ಅವರು ಹಲವಾರು ಉಪಯುಕ್ತ ಹಾಗೂ ಉದ್ದೇಶಪೂರ್ವಕವಾದ ಸುಧಾರಣೆಗಳನ್ನು ಜಾರಿಗೆ ತಂದು ಸ್ಥಳೀಯರ ಹಾಗೂ ವಿದೇಶೀಯರ ಮೆಚ್ಚುಗೆ ಗಳಿಸಿದರು. ಆದರೂ ಅವರಿಗೆ ಬಹಳ ಕಾಲ ಅಧಿಕಾರದಲ್ಲಿ ಮುಂದುವರಿಯಲಾಗಲಿಲ್ಲ. ಅವರ ವಿಫಲತೆಗೆ ಕಾರಣವಾದ ಅಂಶಗಳನ್ನು ಈ ಕೆಳಕಂಡಂತೆ ವಿವರಿಸಬಹುದು.

ತೈಪಿಂಗ್‌ಗಳ ಯುದ್ಧ ತಂತ್ರ ಬಹಳ ದುರ್ಬಲವಾಗಿತ್ತು. ಉತ್ತರದ ಯಾತ್ರೆಯ ಸಮಯದಲ್ಲಿ ರಾಜಧಾನಿಯಲ್ಲಿ ಭಯದ ವಾತಾವರಣವಿದ್ದಾಗ ಪೀಕಿಂಗ್ ಮೇಲೆ ತಮ್ಮ ಗಮನ ಕೇಂದ್ರೀಕರಿಸುವಲ್ಲಿ ಅವರು ವಿಫಲರಾದರು. ಮುಂದೆ 1860 ಮತ್ತು 1862 ರಲ್ಲಿ ಷಾಂಘಾಯ್ ನಗರದ ಮೇಲೆ ಅವರ ಧಾಳಿಗಳು ವಿದೇಶೀಯರನ್ನು ಮಂಚು ಸರ್ಕಾರಕ್ಕೆ ಸಹಾಯ ಮಾಡುವಂತೆ ಪ್ರಚೋದಿಸಿತು.

ತೈಪಿಂಗ್‌ಗಳು ರೈತರನ್ನಾಗಲಿ ಅಥವಾ ವಿದ್ವಾಂಸರನ್ನಾಗಲಿ ತಮ್ಮ ಹೊಸ ಸಿದ್ಧಾಂತಕ್ಕೆ ಪರಿವರ್ತಿಸುವಲ್ಲಿ ವಿಫಲರಾದರು. ಈ ಹೊಸ ಸಿದ್ಧಾಂತ ಅಥವಾ ಆದರ್ಶ ಕ್ರಿಶ್ಚಿಯನ್, ಕನ್‌ಫ್ಯೂಷಿಯಸ್ ಮತ್ತು ತಾವೋಧರ್ಮದ ತತ್ವಗಳ ವಿಲಕ್ಷಣ ಮಿಶ್ರಣವಾಗಿತ್ತು. ಆದರ್ಶಗಳೇ ಪ್ರಧಾನವಾಗಿದ್ದ ಚೀನಿ ಸಾಮಾಜಿಕ ವ್ಯವಸ್ಥೆಯಲ್ಲಿ ಈ ವೈಫಲ್ಯ ಅಪಾಯಕಾರಿಯಾಗಿತ್ತು.

ಕೆಲ ಸಮಯದ ನಂತರ ದಂಗೆಯ ನಾಯಕರು ಆಡಂಬರದ ಹಾಗೂ ಅನೈತಿಕ ಬದುಕು ನಡೆಸಲಾರಂಭಿಸಿದರು. ಸ್ವರ್ಗೀಯ ದೊರೆ ಹಂಗ್‌ನ ಅಂತಃಪುರದಲ್ಲಿ ಸುಮಾರು 2000 ಸ್ತ್ರೀಯರು ಇದ್ದರೆಂದು ಹೇಳಲಾಗಿದೆ. ಅವರಲ್ಲಿ 60 ಅವನ ಪತ್ನಿಯರಾಗಿದ್ದರು. ಬಂಡಾಯ ಸರ್ಕಾರದ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಹಿಂದೆ ಬೀಳಲಿಲ್ಲ. ಅವರು ಭ್ರಷ್ಟರಾದರು. ಅವರೆಲ್ಲರೂ ಸ್ವಜನ ಪಕ್ಷಪಾತಿಗಳಾಗಿದ್ದರು. ಸಹಜವಾಗಿಯೇ ಜನರು ನಿರಾಶರಾದರು.

ಪ್ರಾರಂಭದಲ್ಲಿ ವರ್ತಕರು ಬಂಡಾಯವನ್ನು ಬೆಂಬಲಿಸಿದ್ದರು. ಆದರೆ ಕ್ರಮೇಣ ಅವರೂ ಕೂಡ ಬಂಡಾಯಗಾರರ ವಿರುದ್ಧ ತಿರುಗಿ ಬಿದ್ದರು. ಅವರ ವ್ಯಾಪಾರ ತೀವ್ರವಾಗಿ ಕುಸಿಯಿತು. ಅವರ ಲಾಭ ಕಡಿಮೆಯಾಯಿತು. ಆದರೂ ಅವರು ಹಲವು ಬಗೆಯ ತೆರಿಗೆಗಳನ್ನು ಕೊಡಬೇಕಾಯಿತು. ಹೀಗೆ ಬಂಡಾಯಗಾರರು ವರ್ತಕ ಸಮುದಾಯದ ವಿಶ್ವಾಸವನ್ನು ಕಳೆದುಕೊಂಡರು.

ದಂಗೆಯ ನಾಯಕತ್ವ ಪಾಶ್ಚಾತ್ಯ ಶಕ್ತಿಗಳೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳುವಲ್ಲಿ ವಿಫಲವಾದುದು ತೈಪಿಂಗ್ ದಂಗೆಯ ಅಂತ್ಯ ತ್ವರಿತಗೊಳ್ಳಲು ಕಾರಣವಾಯಿತು. ಕೆಲವು ಪಾಶ್ಚಾತ್ಯ ಶಕ್ತಿಗಳು ಪ್ರಾರಂಭದಲ್ಲಿ ತೈಪಿಂಗ್ ಚಳುವಳಿಯನ್ನು ಬೆಂಬಲಿಸಲು ಆಸಕ್ತವಾಗಿದ್ದವು. ಆದರೆ ದಂಗೆಯ ನಾಯಕರು ಅದನ್ನು ಬಳಸಿಕೊಳ್ಳುವಲ್ಲಿ ವಿಫಲರಾದರು. 1858 ಮತ್ತು 1860 ರಲ್ಲಿ ಪಾಶ್ಚಾತ್ಯ ದೇಶಗಳು ಮತ್ತು ಮಂಚು ಸರ್ಕಾರದ ನಡುವೆ ಹೊಸ ಒಪ್ಪಂದಗಳು ಏರ್ಪಟ್ಟ ನಂತರ ಪಾಶ್ಚಾತ್ಯ ದೇಶಗಳು ದಂಗೆಯ ವಿರುದ್ಧ ಸರ್ಕಾರಕ್ಕೆ ಬೆಂಬಲ ನೀಡಿದವು. ಪಾಶ್ಚಾತ್ಯರ ಸ್ವಯಂ ಸೇವಕ ಪಡೆ, ಲಿ-ಹಂಗ್ ಚಾಂಗ್ ನಾಯಕತ್ವದ ಸರ್ಕಾರಿ ಪಡೆಯೊಂದಿಗೆ ಸೇರಿಕೊಂಡು ಕೆಳ ಯಾಂಗ್ಸಿ ಪ್ರದೇಶವನ್ನು ಷಾಂಘಾಯ್ ನಗರದ ಸುತ್ತಲಿನ ಪಟ್ಟಣಗಳನ್ನು ವಶಪಡಿಸಿಕೊಳ್ಳಲು ಸಹಕರಿಸಿತು. ಅಲ್ಲದೆ ವಿದೇಶಿ ಸ್ವಯಂ ಸೇವಕರು ತೈಪಿಂಗ್ ಸೈನ್ಯದೊಂದಿಗೂ ಹೋರಾಡಿದರು.

## 130.5 ದಂಗೆಯ ಪರಿಣಾಮಗಳು

ತೈಪಿಂಗ್ ದಂಗೆಯನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಲಾಯಿತು ಮತ್ತು ಮಂಚು ವಂಶವನ್ನು ವಿನಾಶದಿಂದ ರಕ್ಷಿಸಲಾಯಿತು. ಆದರೆ ದಂಗೆಯಿಂದ ಸಾಮ್ರಾಜ್ಯದ ಮೇಲೆ ಉಂಟಾದ ದೂರಗಾಮಿ ಪರಿಣಾಮಗಳನ್ನು ಯಾರು ಅಲ್ಲಗೆಳೆಯಲಾಗದು. ಅಂಥಹ ಕೆಲವು ಪರಿಣಾಮಗಳು ಇಲ್ಲಿ ಚರ್ಚಿಸಲಾಗಿದೆ.

ದಂಗೆಯನ್ನು ಹತ್ತಿಕ್ಕಲು ಸರ್ಕಾರ ಹೆಚ್ಚು ಹಣವನ್ನು ಸಂಗ್ರಹಿಸಬೇಕಾಯಿತು. ಹೆಚ್ಚುವರಿ ತೆರಿಗೆಗಳಿಂದ ಮಾತ್ರ ಅದು ಸಾಧ್ಯವಾಯಿತು. ಈಗಾಗಲೇ ಚೀನೀಯರ ಮೇಲೆ ತೆರಿಗೆಯ ಹೊರೆ ಅಪಾರವಾಗಿತ್ತು ಮತ್ತು ಮತ್ತೆ ಹೊಸ ತೆರಿಗೆ ವಿಧಿಸಿದ್ದರಿಂದ ಸಮಾಜದಲ್ಲಿ ತೀವ್ರ ಅಸಮಾಧಾನವುಂಟಾಯಿತು.

ಬಂಡಾಯದ ಕಾಲದಲ್ಲಿ ಬಂಡಾಯಗಾರರು ಅಧಿಕಾರವನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಿದ್ದರು ಮತ್ತು ಸಾಮ್ರಾಜ್ಯದ ಸೈನ್ಯ ಬಂಡಾಯಗಾರರನ್ನು ಹತ್ತಿಕ್ಕಲು ಯತ್ನಿಸುತ್ತಿತ್ತು. ದೇಶದಲ್ಲಿ ಅನಿಶ್ಚಿತ ಪರಿಸ್ಥಿತಿ ನಿರ್ಮಾಣವಾಗಿತ್ತು. ಇಂಥಹ ವಾತಾವರಣದಲ್ಲಿ ಕೈಗಾರಿಕೆ ಮತ್ತು ವ್ಯಾಪಾರ ಎರಡಕ್ಕೂ ತೀವ್ರ ಹಿನ್ನಡೆಯಾಯಿತು.

ಈ ಕಠಿಣ ದಿನಗಳಲ್ಲಿ ಇಡೀ ಆಡಳಿತ ಹಳಿತಪ್ಪಿತು. ಆಡಳಿತ ಯಂತ್ರ, ಪ್ರಾಮಾಣಿಕ ಯತ್ನದ ಹೊರತಾಗಿಯೂ, ಅರಾಜಕತೆಯನ್ನು ಪರಿಹರಿಸಲಾಗಲಿಲ್ಲ. ಅದರಿಂದಾಗಿ ಅರಾಜಕತೆ, ದರೋಡೆ, ಡಕಾಯಿತಿ, ಮೊದಲಾದವು ಸಾಮಾನ್ಯವಾಗಿ

ಪರಿಣಮಿಸಿದವು ಮತ್ತು ದೇಶದ ಕಾನೂನು ಮತ್ತು ಸುವ್ಯವಸ್ಥೆಗೆ ಭಾರೀ ಸವಾಲಾದವು. ಹಲವಾರು ಜನರು ಬಡತನಕ್ಕೆ ದೂಡಲ್ಪಟ್ಟರು. ಹೆದ್ದಾರಿ ದರೋಡೆಗಳು ಗಣನೀಯವಾಗಿ ಹೆಚ್ಚಿದವು ಮತ್ತು ಸುಗಮ ಆಡಳಿತ ನಿರ್ವಹಣೆ ಕಠಿಣವಾಯಿತು.

ಪಶ್ಚಿಮ ಮತ್ತು ಚೀನಾ ನಡುವಿನ ಸಂಬಂಧದ ಹಲವು ವಿಷಯಗಳಲ್ಲಿ ಈ ದಂಗೆ ನಿರ್ಣಾಯಕ ಪಾತ್ರ ವಹಿಸಿತು. ಉದಾಹರಣೆಗೆ 1858 ಮತ್ತು 1860 ರಲ್ಲಿ ಮಾಡಿಕೊಳ್ಳಲಾದ ಒಪ್ಪಂದಗಳಲ್ಲಿ ತೈಪಿಂಗ್‌ಗಳನ್ನು ಬಂಡಾಯಗಾರರೆಂದು ಪರಿಗಣಿಸಲಾಯಿತು. ಅವರನ್ನು ಇನ್ನು ಮುಂದೆ ಪಾಶ್ಚಾತ್ಯ ಶಕ್ತಿಗಳ ಸಂಭವನೀಯ ಮಿತ್ರರು ಎಂದಾಗಲಿ ಅಥವಾ ಮಂಚುಗಳಿಗೆ ಸಂಭವನೀಯ ಉತ್ತರಾಧಿಕಾರಿಗಳು ಎಂದಾಗಲಿ ಪರಿಗಣಿಸುವುದು ಸಾಧ್ಯವಿಲ್ಲದಂತಾಯಿತು.

ಈ ದಂಗೆಯ ಪರಿಣಾಮವಾಗಿಯೇ ಬ್ರಿಟಿಷರು ಷಾಂಘಾಯ್ ನಗರದ ಮೇಲೆ ಶಾಶ್ವತ ನಿಯಂತ್ರಣ ಹೊಂದಲು ಸಾಧ್ಯವಾಯಿತು. ಈ ನಿಯಂತ್ರಣ ವಾಸ್ತವವಾಗಿ 1950 ರವರೆಗೂ ಮುಂದುವರಿಯಿತು.

ರಷ್ಯ, ಲಿಯನ್ನು ವಶಪಡಿಸಿಕೊಂಡಿದ್ದು ದಂಗೆಯ ಮತ್ತೊಂದು ಪ್ರಮುಖ ಪರಿಣಾಮವಾಗಿತ್ತು. ತೈಪಿಂಗ್ ದಂಗೆ ಯುನ್ನಾನ್ ಮತ್ತು ಪೂರ್ವ ಚೀನಾದಲ್ಲಿ ಆರಂಭವಾದಾಗ ಮತ್ತು ಮಂಚು ಸರ್ಕಾರ ಅದನ್ನು ಹತ್ತಿಕ್ಕಲು ತನ್ನ ಗಮನ ಕೇಂದ್ರಿಕರಿಸಿದ್ದಾಗ ಪರಿಸ್ಥಿತಿಯ ಲಾಭ ಪಡೆದ ರಷ್ಯ ಲಿಯನ್ನು ವಶಪಡಿಸಿಕೊಂಡಿತು.

ಈ ದಂಗೆ ಚೀನಾದಲ್ಲಿ ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳಿಗೆ ದಾರಿಯಾಯಿತು. ಸಾಮಾಜಿಕ ಬದಲಾವಣೆಗಳಿಗೆ ಸಮಾಜ ಸಿದ್ಧವಾಯಿತು. ಜನರು ಹೊಸ ಮಾದರಿ ಸರ್ಕಾರದ ಬಗೆಗೆ ಚಿಂತಿಸಲಾರಂಭಿಸಿದರು.

## 130.6 ದಂಗೆಯ ಮಹತ್ವ

ಸಾಮೂಹಿಕ ಭೂ ಒಡೆತನ, ಮಾನವ ಸಹೋದರತ್ವ ಮತ್ತು ಸ್ತ್ರೀ ಪುರುಷ ಸಮಾನತೆ ತೈಪಿಂಗ್ ಕಾರ್ಯಕ್ರಮದ ಮುಖ್ಯ ತತ್ವಗಳಾಗಿದ್ದವು. ತೈಪಿಂಗ್ ಪಡೆಗಳ ಪ್ರತಿಯೊಬ್ಬ ಸದಸ್ಯನೂ ತನ್ನಲ್ಲಿರುವುದನ್ನು ಮತ್ತು ಗಳಿಸಿದ್ದೆಲ್ಲವನ್ನೂ ಸಮುದಾಯಕ್ಕೆ ಒಪ್ಪಿಸಬೇಕಿತ್ತು. ಅವನು ತನ್ನ ಆಹಾರ ಮತ್ತು ಇತರ ಅಗತ್ಯಗಳಿಗೆ ಸರ್ಕಾರದ ಬಂಡಾರದಿಂದ ಹಣಪಡೆಯುತ್ತಿದ್ದನು. ಈ ರೀತಿಯಲ್ಲಿ ತೈಪಿಂಗ್ ಪಡೆಗಳು ತಮ್ಮ ಸಂಚಾರಿ ಸೈನಿಕ ಸಂಘಟನೆಗಳನ್ನು ಪೋಷಿಸಿಕೊಳ್ಳಲು ಸಾಧ್ಯವಾಯಿತು. ತಾವು ವಶಪಡಿಸಿಕೊಂಡ ಪ್ರದೇಶಗಳ ಕೃಷಿಕರಿಗಾಗಿ ತೈಪಿಂಗ್‌ಗಳು ತಮ್ಮದೇ ಭೂ ವ್ಯವಸ್ಥೆಯನ್ನು ಕನಿಷ್ಠ ಪಕ್ಷ ತಾತ್ವಿಕವಾಗಿ ಸ್ಥಾಪಿಸಿದರು. ನೆಪ ಮಾತ್ರಕ್ಕೆ ರಾಜನ ಒಡೆತನದಲ್ಲಿದ್ದ ಭೂಮಿಯನ್ನು ಅಗತ್ಯಕ್ಕೆ ಅನುಗುಣವಾಗಿ ವಿತರಿಸಲಾಯಿತು. ಗೇಣಿಯನ್ನು ರದ್ದುಪಡಿಸಲಾಯಿತು. ಆದಾಗ್ಯೂ ಈ ವ್ಯಾವಹಾರಿಕವಲ್ಲದ ತತ್ವಗಳಿಂದ ಭೂಮಿಯ ಸಮಾನ ಹಂಚಿಕೆ ಅಥವಾ ಭೂಮಿಯ ಮುಕ್ತ ಬಳಕೆ ಸಾಧ್ಯವಾಗಲಿಲ್ಲ. ಆದರೂ ಇದರಿಂದ ಬೇಸಾಯಗಾರರ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿತು.

ಮಹಿಳೆಯರಿಗೆ ಪುರುಷರಿಗೆ ಸಮಾನವಾದ ಹಕ್ಕುಗಳನ್ನು ನೀಡಲಾಯಿತು. ಮಹಿಳೆಯರಿಗೂ ಬೇಸಾಯ ಮಾಡಲು ಭೂಮಿಯನ್ನು ನೀಡಲಾಯಿತು. ಅರ್ಹ ಮಹಿಳೆಯರು ಸರ್ಕಾರಿ ಉದ್ಯೋಗವನ್ನು ಪಡೆಯಬಹುದಿತ್ತು. ವೇಶ್ಯಾ ವೃತ್ತಿ ಮತ್ತು ಮಹಿಳೆಯರ ವ್ಯಾಪಾರವನ್ನು ಕಾನೂನು ಬಾಹಿರ ಮತ್ತು ಅಸಂವಿಧಾನಿಕ ಎಂದು ಘೋಷಿಸಲಾಯಿತು.

ತೈಪಿಂಗ್ ಸರ್ಕಾರ ಜಾರಿಗೆ ತಂದ ಸುಧಾರಣೆಗಳು ಮುಂದೆ ಕಮ್ಯುನಿಸ್ಟರು ಭೋಧಿಸಿದ ರೀತಿಯಲ್ಲೇ ಇದ್ದವು. ಜಮೀನುದಾರರಿಂದ ಭೂಮಿಯನ್ನು ಕಸಿದುಕೊಂಡು ಭೂ ರಹಿತರಿಗೆ ಹಂಚುವುದು. ಅವುಗಳಲ್ಲಿ ಸೇರಿದ್ದವು. ಹೀಗೆ ಸಮತಾವಾದದ ರಾಜಕೀಯ ಸಿದ್ಧಾಂತವನ್ನು ಒಪ್ಪಿಕೊಳ್ಳಲು ಸಾಧ್ಯವಾಗುವಂತಹ ವಾತಾವರಣವನ್ನು ತೈಪಿಂಗ್ ಸರ್ಕಾರ ಸಿದ್ಧಪಡಿಸಿತು. ಈ ರೀತಿಯಲ್ಲಿ ತೈಪಿಂಗ್ ದಂಗೆ ಚೀನೀಯರ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಬದುಕಿನ ಮೇಲೆ ತಕ್ಷಣದ ಹಾಗೂ ದೂರಗಾಮಿಯಾದ ಪರಿಣಾಮಗಳನ್ನು ಬೀರಿತು ಎಂದು ಹೇಳಬಹುದಾಗಿದೆ. ಅದು ಮಂಚುಗಳ ಅವಸಾನ ಮತ್ತು ಕುಮಿನ್‌ಟಾಂಗ್‌ನ ಸ್ಥಾಪನೆ ಹಾಗೂ ಆಧುನಿಕ ಕಮ್ಯುನಿಸ್ಟ್ ಸರ್ಕಾರದ ಸ್ಥಾಪನೆಗೂ ದಾರಿಮಾಡಿಕೊಟ್ಟಿತು.

## 130.7 ಘಟಕದ ಸಾರಾಂಶ

ಈ ಘಟಕದಲ್ಲಿ ನಾವು ತೈಪಿಂಗ್ ದಂಗೆಯ ವಿವಿಧ ಮಗ್ಗಲುಗಳನ್ನು ಚರ್ಚಿಸಿದ್ದೇವೆ. ಈ ದಂಗೆ 1850 ರಲ್ಲಿ ಆರಂಭವಾಗಿ 1864 ರವರೆಗೂ ಮುಂದುವರಿಯಿತು. ನಾನ್‌ಕಿಂಗ್ ಒಪ್ಪಂದ (ಆಗಸ್ಟ್ 29,1942) ಹೇಗೆ ಮಂಚು ವಂಶವನ್ನು ಅವಮಾನಕ್ಕೆ ಗುರಿಪಡಿಸಿತು ಎಂಬುದನ್ನು ನೀವು ಈ ಘಟಕದಲ್ಲಿ ತಿಳಿದಕೊಂಡಿದ್ದೀರಿ. ಜನಸಂಖ್ಯೆಯ ಹೆಚ್ಚಳ, ಕ್ಷಾಮ, ಬಡತನ, ಭ್ರಷ್ಟಾಚಾರ ಹಾಗೂ ಆಡಳಿತದ ಅಸಮರ್ಥತೆ ಸೇರಿದಂತೆ ಹಲವಾರು ಅಂಶಗಳು ಮಂಚು ವಿರೋಧಿ ಭಾವನೆಯನ್ನು ಬಲಗೊಳಿಸಿದವು. ಕ್ಯಾಂಟನ್ ಪ್ರತಿರೋಧದ ಕೇಂದ್ರವಾಯಿತು. ಅತೃಪ್ತ ಶಕ್ತಿಗಳ ಜೊತೆಗೆ ಒಂದು ಧಾರ್ಮಿಕ ಪಂಥ ಬಂಡಾಯವನ್ನು ಪ್ರಚೋದಿಸಿತು. ಅದರ ಸ್ಥಾಪಕ ಹಂಗ್ ಸು-ಚುವಾನ್ (1814-1864) ಯೋಗಿಯಾಗಿದ್ದ ಅವನು ಚೀನಾವನ್ನು ಪುನಶ್ಚೇತನಗೊಳಿಸಲು ತನಗೆ ದೈವ ಪ್ರೇರಣೆಯಾಗಿದೆ ಎಂದು ನಂಬಿದ್ದನು. ಅವನ ಧರ್ಮ ಕ್ರೈಸ್ತ ಧರ್ಮದ ಹಲವು ಅಂಶಗಳನ್ನು ಒಳಗೊಂಡಿತ್ತು ಎಂಬುದನ್ನು ನೀವು ತಿಳಿದಿರುವಿರಿ. 1844 ರಲ್ಲಿ ಅವನು ತನ್ನ ಮುಕ್ತಿಯ ನೂತನ ಸಿದ್ಧಾಂತವನ್ನು ಭೋದಿಸಲಾರಂಭಿಸಿದನು. ಹಂಗ್ ತನ್ನನ್ನು "ಸ್ವರ್ಗೀಯ ದೊರೆ" ಎಂದು ಘೋಷಿಸಿಕೊಂಡನು ಮತ್ತು "ಸಂಪೂರ್ಣ ಶಾಂತಿ" ಎಂದು ಕರೆಯಲಾಗುವ ಹೊಸ ಆಡಳಿತವನ್ನು ಸ್ಥಾಪಿಸುವುದು ತನ್ನ ಉದ್ದೇಶವಾಗಿದೆಯೆಂದು ಪ್ರಕಟಿಸಿದನು. ಹಂಗ್‌ನ ಅನುಯಾಯಿಗಳು ವಿದೇಶೀಯರಿಗೆ ತೈಪಿಂಗ್‌ಗಳು ಎಂದು ಪರಿಚಿತರಾಗಿದ್ದರು.

ಅಲ್ಲದೆ ತೈಪಿಂಗ್ ದಂಗೆ ಅಲ್ಪಕಾಲದಲ್ಲೇ ಇಡೀ ಚೀನಾವನ್ನು ಆವರಿಸಿತೆಂಬುದನ್ನು ನೀವು ತಿಳಿದುಕೊಂಡಿದ್ದೀರಿ. ಈ ದಂಗೆ ಮಂಚು ವಿರೋಧಿ ಭಾವನೆ ಹೊಂದಿದ್ದರು. ಬಂಡಾಯಗಾರರು ಮಂಚು ವಂಶವನ್ನು ಪದಚ್ಯುತಗೊಳಿಸುವ ಮತ್ತು ಜನರ ಆರ್ಥಿಕ ಮಟ್ಟವನ್ನು ಸುಧಾರಿಸುವ ಉದ್ದೇಶವನ್ನು ಹೊಂದಿತ್ತು. ಸಾಮಾಜಿಕ, ಆರ್ಥಿಕ, ಸುಧಾರಣೆಗಳನ್ನು ತರಲು ಬಯಸಿದ್ದರು. ವಿದೇಶಿ ವರ್ತಕರ ಸೌಲಭ್ಯಗಳನ್ನು ರದ್ದುಪಡಿಸಲು ಬಯಸಿದ್ದರು.

## 130.8 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಉತ್ತರಗಳು

*I* *ಕೆಳಗಿನವುಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ.*

1. "ವಿದೇಶಿ ಸೋದರರು"
2. ಸ್ವರ್ಗೀಯ ದೊರೆ
3. ಪಾಶ್ಚಾತ್ಯ ಸ್ವಯಂ ಸೇವಕ ಪಡೆ

*II* *ಕೆಳಗಿನವುಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿ.*

1. ತೈಪಿಂಗ್ ದಂಗೆ
2. ಹಂಗ್ ಸು-ಚುವಾನ್

*III* *ಕೆಳಗಿನವುಗಳಿಗೆ 15 ರಿಂದ 20 ಸಾಲುಗಳಲ್ಲಿ ಉತ್ತರಿಸಿ.*

1. ತೈಪಿಂಗ್ ದಂಗೆಯನ್ನು ಕುರಿತು ಸಂಕ್ಷಿಪ್ತವಾಗಿ ಬರೆಯಿರಿ ಮತ್ತು ಚೀನಾದಲ್ಲಿ ಅದರ ಪರಿಣಾಮಗಳನ್ನು ಪರಿಶೀಲಿಸಿ.
2. ತೈಪಿಂಗ್ ದಂಗೆಯ ವಿಫಲತೆಗೆ ಕಾರಣಗಳನ್ನು ವಿವರಿಸಿ.

## 130.9 ಪರಾಮರ್ಶನ ಗ್ರಂಥಗಳು


1. Latourette : The Far East
2. Majumdar .R. : History of China
3. Franz Michael : Taiping Rebellion
4. Meedows .T.T. : The Chinese and their Rebellions



*ಮೂಲ: ಎಸ್. ಮೀರ್ ಸಮಿವುಲ್ಲ*

*ಅನುವಾದಕರು: ಬಿ. ಪರಮೇಶ್ವರ*



ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4–060/2013–2014 ದಿನಾಂಕ : 24–09–2013

ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್


ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ● **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✦ **M.Ed Study Centres : 06**


STUDENT
INSTRUCTIONAL SYSTEM